ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

। ಸಂಪುಟ 15 । ಸಂಚಿಕೆ 34 । ಆಗಸ್ಟ್ 16–22, 2021 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com



ಸಂದಿಗ್ಧ ಕಾಲಘಟ್ಟದಲ್ಲಿ ಸ್ವಾತಂತ್ರ್ಯ ದಿನ



ದಲಿತರಿಗೆ ಬಂತಾ ಸ್ವಾತಂತ್ರ್ಯ ?




ಬೊಮ್ಮಾಯಿ ಅವರೆ! ‘ಕಮಲಾಭಿಮುಖಿ’ ಆಗಬೇಡಿ!

ಕೋವಿಡ್ ನಿರ್ವಹಣೆಯ ಕೇರಳ ಮಾದರಿ ಬಗ್ಗೆ ಅಪಪ್ರಚಾರ







ತಾಯಿ ನ್ಯಾಯಕ್ಕಾಗಿ ಕಾಯುತ್ತಿದ್ದಾಳೆ

‘ಕಾರ್ಪೊರೇಟ್ ಹಿಂದುತ್ವದಿಂದ ಭಾರತವನ್ನು ಉಳಿಸಿ’ ದೇಶಾದ್ಯಂತ ಮೊಳಗಿತು ಕೂಗು







ಕೃಷಿ ಕಾಯ್ದೆಗಳು, ಕೊವಿಡ್ ನಿರ್ವಹಣೆಯಲ್ಲಿ ವಿಫಲತೆ, ಪೆಗಾಸಸ್ ಗೂಢಚಾರಿಕೆ ವಿರುದ್ಧ ಸಪ್ಟಂಬರ್ ನಲ್ಲಿ ವ್ಯಾಪಕ ಪ್ರತಿಭಟನೆ - ಸಿಪಿಐ(ಎಂ) ಕೇಂದ್ರ ಸಮಿತಿ ಕರೆ



ಕೊವಿಡ್ ಮಹಾಸೋಂಕಿನ ಅನಾಹುತಕಾರೀ ಮೂರನೇ ಅಲೆಯ ಭೀತಿ ಉಂಟುಮಾಡಿರುವ ಸರಕಾರದ ಕೊವಿಡ್ ನಿರ್ವಹಣಾ ವಿಫಲತೆ, ಜನರ ಖಾಸಗಿತ್ವವನ್ನು ಬೇಧಿಸುವ ಪೆಗಾಸಸ್ ಗೂಢಚಾರಿಕೆ, ರೈತರ ಪ್ರತಿಭಟನೆಗಳಿಗೆ ಕೇಂದ್ರದ ನಿರ್ಲಕ್ಷ್ಯ ಮತ್ತಿತರ ಪ್ರಶ್ನೆಗಳ ಮೇಲೆ 15 ಆಗ್ರಹಗಳನ್ನು ಮುಂದಿಟ್ಟು ಸೆಪ್ಟೆಂಬರ್‌ನಲ್ಲಿ ಪ್ರತಿಭಟನೆಗಳನ್ನು ಸಂಘಟಿಸಲು ಸಿಪಿಐ(ಎಂ) ಕೇಂದ್ರ ಸಮಿತಿಯು ಕರೆ ನೀಡಿದೆ. ಇದರಲ್ಲಿ ಗರಿಷ್ಠ ಸಾರ್ವಜನಿಕ ಭಾಗವಹಿಸುವಿಕೆ ಇರುತ್ತದೆ ಎಂದು ಆಗಸ್ಟ್ 6 ರಿಂದ 8 ರವರೆಗೆ ಸಭೆ ಸೇರಿದ ಕೇಂದ್ರ ಸಮಿತಿಯ ಸಭೆಯ ನಂತರ ನೀಡಿರುವ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದೇಶಾದ್ಯಂತ ಆಗಸ್ಟ್ 9ರ 'ಭಾರತ ಉಳಿಸಿ' ಕಾರ್ಯಾಚರಣೆ ಸೇರಿದಂತೆ ವಿವಿಧ ಜನವಿಭಾಗಗಳ ಹೋರಾಟಗಳಿಗೆ ಈಗಾಗಲೇ ಅದು ಬೆಂಬಲ ನೀಡಿದೆ ಎಂದು ಈ ಸಭೆಯ ವಿವರಗಳನ್ನು ನೀಡುತ್ತ ಈ ಕುರಿತ ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ..

ಐದು ರಾಜ್ಯಗಳಲ್ಲಿ ಇತ್ತೀಚಿನ ವಿಧಾನಸಭಾ ಚುನಾವಣೆಗಳ ವಿಮರ್ಶೆ, ಇತ್ತೀಚಿನ ರಾಜಕೀಯ ಬೆಳವಣಿಗೆಗಳು ಮತ್ತು ಸಿಪಿಐ(ಎಂ)ನ 23 ನೇ ಮಹಾಧಿವೇಶನದ ಬಗ್ಗೆ ಕೇಂದ್ರ ಸಮಿತಿ ನಡೆಸಿದ ಚರ್ಚೆಗಳ ಬಗ್ಗೆ ಈ ಹೇಳಿಕೆ ತಿಳಿಸಿದೆ. ಪಕ್ಷದ 23ನೇ ಮಹಾಧಿವೇಶನವನ್ನು ಕೇರಳದ ಕಣ್ಣೂರಿನಲ್ಲಿ ಕೊವಿಡ್ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಎಪ್ರಿಲ್ 2022ರಲ್ಲಿ ನಡೆಸಲು ನಿರ್ಧರಿಸಲಾಗಿದೆ ಎಂದು ಅದು ಹೇಳಿದೆ. ಅಲ್ಲದೆ ಆಗಸ್ಟ್ 15ರಿಂದ ಭಾರತದ ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವವನ್ನು ಆಚರಿಸಲು ಕೇಂದ್ರ ಸಮಿತಿ ನಿರ್ಧರಿಸಿದೆ. ಪತ್ರಿಕಾ ಹೇಳಿಕೆಯನ್ನು ಈ ಕೆಳಗೆ ಕೊಡಲಾಗಿದೆ:

ವಿಧಾನಸಭೆ ಚುನಾವಣೆ ವಿಮರ್ಶೆ

ಈ ಸುತ್ತಿನ ವಿಧಾನಸಭಾ ಚುನಾವಣೆಯ ಫಲಿತಾಂಶಗಳು ಕೇರಳ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಹಿನ್ನಡೆಯಾಗಿರುವುದನ್ನು ತೋರಿಸಿವೆ. ಅಸ್ಸಾಂನಲ್ಲಿ, ಅದು ತನ್ನ ಸರ್ಕಾರವನ್ನು ಪ್ರತಿಪಕ್ಷಗಳ 'ಮಹಾಜೋತ್ 'ಗಿಂತ ಕೇವಲ 0.78 ಶೇಕಡಾದ ಅತ್ಯಂತ ಅಂತರದಿಂದಷ್ಟೆ ಹೇಗೋ ಉಳಿಸಿಕೊಂಡಿದೆ. ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ, ಅಭೂತಪೂರ್ವ ಹಣವನ್ನು ಖರ್ಚು ಮಾಡುವ, ಕೇಂದ್ರ ಏಜೆನ್ಸಿಗಳನ್ನು ಆಕ್ರಾಮಕ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳುವ ಮತ್ತು ಚುನಾವಣಾ ವ್ಯವಸ್ಥೆಯಲ್ಲಿ ಕೈಚಳಕ ನಡೆಸುವ, ವಿರೋಧ ಪಕ್ಷಗಳು ಮತ್ತು ಅದರ ನಾಯಕರನ್ನು ಹೆದರಿಸುವ ಮತ್ತು ಬೆದರಿಸುವ ತನ್ನ ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಅವರು ಬಯಸಿದ ಜನರ ಬೆಂಬಲವನ್ನು ಪಡೆಯುವಲ್ಲಿ ವಿಫಲವಾಗಿವೆ. ಕೇರಳ, ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಬಿಜೆಪಿ ನಿರ್ಣಾಯಕವಾಗಿ ಸೋತಿದೆ.

ಕೇರಳ: ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗದ ಭರ್ಜರಿ ಗೆಲುವನ್ನು ಕೇಂದ್ರ ಸಮಿತಿ ಪ್ರಶಂಸಿಸಿದೆ. ಎಲ್‌ಡಿಎಫ್‌ನಲ್ಲಿ ನಂಬಿಕೆ ಇಟ್ಟಿದ್ದಕ್ಕಾಗಿ ಮತ್ತು ಅಧಿಕಾರದಲ್ಲಿರುವ ಸರ್ಕಾರವನ್ನು ಅಭೂತಪೂರ್ವ ರೀತಿಯಲ್ಲಿ ಮರು ಆಯ್ಕೆ ಮಾಡಿದ್ದಕ್ಕಾಗಿ ಕೇರಳದ ಜನರಿಗೆ ಕೇಂದ್ರ ಸಮಿತಿ ಧನ್ಯವಾದಗಳನ್ನು ಅರ್ಪಿಸಿದೆ. ಎಲ್‌ಡಿಎಫ್ ಫಲಿತಾಂಶ ಕಳೆದ ವಿಧಾನಸಭಾ ಚುನಾವಣೆಗಿಂತ ಉತ್ತಮವಾಗಿದೆ.

ಅಧಿಕಾರದಲ್ಲಿರುವ ಸರ್ಕಾರದ ಕಾರ್ಯಕ್ಷಮತೆ, ಅನುಸರಿಸಿದ ಪರ್ಯಾಯ ನೀತಿಗಳು, ಎಲ್ಲಾ ನೈಸರ್ಗಿಕ ವಿಪತ್ತುಗಳನ್ನು ಎದುರಿಸಿದ ರೀತಿ, ಸಾಂಕ್ರಾಮಿಕ ಮತ್ತು ಅದರ ಪರಿಣಾಮಗಳನ್ನು ನಿಭಾಯಿಸುವ ಮಾದರಿ ವಿಧಾನ, ಕೈಗೊಂಡ ಕಲ್ಯಾಣ ಕ್ರಮಗಳು ಮತ್ತು ಕೇರಳ ಸಮಾಜದ ಜಾತ್ಯತೀತ ಪ್ರಜಾಸತ್ತಾತ್ಮಕ ಸಾಮರಸ್ಯದ ಚಾರಿತ್ರ್ಯವನ್ನು ಕಾಪಾಡಿಕೊಂಡಿರುವುದು, ಇವೆಲ್ಲದರ ಮೇಲೆ ಕೇರಳದ ಜನರು ಮತ ಚಲಾಯಿಸಿದ್ದಾರೆ.

ಪಶ್ಚಿಮ ಬಂಗಾಳ: ಬಿಜೆಪಿ ತನ್ನ ಹಣಬಲ ಮತ್ತು ಎಲ್ಲಾ ಕುತಂತ್ರಗಳ ಹೊರತಾಗಿಯೂ ಹಿನ್ನಡೆ ಅನುಭವಿಸಿತು. ಬಂಗಾಳದ ಜನರು ಕೋಮು ಧ್ರುವೀಕರಣದ ಸಿದ್ಧಾಂತವನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ.

ಸಿಪಿಐ (ಎಂ) ಮತ್ತು ಎಡರಂಗಕ್ಕೆ ಈ ಫಲಿತಾಂಶಗಳು ವಿನಾಶಕಾರಿ. 1946 ರ ನಂತರ ಮೊದಲ ಬಾರಿಗೆ, ಯಾವುದೇ ಕಮ್ಯುನಿಸ್ಟ್ ವಿಧಾನಸಭೆಗೆ ಆಯ್ಕೆಯಾಗಿಲ್ಲ. ತೀಕ್ಷ್ಣವಾದ ವಿಮರ್ಶಾತ್ಮಕ ಆತ್ಮಾವಲೋಕನ ನಡೆಸಿದ ಕೇಂದ್ರ ಸಮಿತಿಯು ಇದರಿಂದ ಪಾಠಗಳನ್ನು ಗುರುತಿಸಿ, ಕೈಗೊಳ್ಳಬೇಕಾದ ಸರಿಪಡಿಸುವ ಕ್ರಮಗಳ ರೂಪುರೇಷೆಯನ್ನು ಕೊಟ್ಟಿತು. ಪಶ್ಚಿಮ ಬಂಗಾಳದ ರಾಜ್ಯ ಸಮಿತಿಯು ಈ ವಿಮರ್ಶೆಯನ್ನು ಚರ್ಚಿಸಿ ಕಾರ್ಯಗತಗೊಳಿಸುತ್ತದೆ.

ತಮಿಳುನಾಡು: ವಿಜಯಶಾಲಿ ಡಿಎಂಕೆ ನೇತೃತ್ವದ ರಂಗದ ಭಾಗವಾಗಿ, ಇಬ್ಬರು ಸಿಪಿಐ (ಎಂ) ಶಾಸಕರು ಆಯ್ಕೆಯಾದರು.

ಅಸ್ಸಾಂ: 'ಮಹಾಜೋತ್ 'ನೊಂದಿಗೆ ಸೀಟು ಹೊಂದಾಣಿಕೆಯಲ್ಲಿ, ಸಿಪಿಐ (ಎಂ) ಸೊರಬೋಗ್ ಕ್ಷೇತ್ರದಿಂದ ಗೆದ್ದಿತು. ಹತ್ತು ವರ್ಷಗಳ ನಂತರ ಪಕ್ಷವು ವಿಧಾನಸಭೆಯಲ್ಲಿ ಪ್ರಾತಿನಿಧ್ಯ ಪಡೆದಿದೆ.

ಈ ಎಲ್ಲಾ ರಾಜ್ಯಗಳಲ್ಲಿ, ಚುನಾವಣೆಯ ನಂತರದ ಪರಿಸ್ಥಿತಿಯಲ್ಲಿ ಪಕ್ಷವು ಕೈಗೊಳ್ಳಬೇಕಾದ ಕ್ರಮಗಳನ್ನು ಚರ್ಚಿಸಲಾಗಿದೆ ಮತ್ತು ರಾಜ್ಯ ಸಮಿತಿಗಳು ಮುಂದಿನ ಕ್ರಮ ಕೈಗೊಳ್ಳಲು ರೂಪುರೇಷೆಗಳನ್ನು ನೀಡಲಾಗಿದೆ

ರಾಜಕೀಯ ಬೆಳವಣಿಗೆಗಳು

ಕೋವಿಡ್ ಸಾಂಕ್ರಾಮಿಕ ಪರಿಸ್ಥಿತಿ: ಕೊರೋನಾ ಸೋಂಕುಗಳು ಏರುತ್ತಲೇ ಇವೆ. ಒಂದು ಅನಾಹುತಕಾರೀ ಮೂರನೇ ತರಂಗವನ್ನು ತಡೆಗಟ್ಟಲು ಲಸಿಕೀಕರಣ ದರವು ಭಾರೀ ಪ್ರಮಾಣದಲ್ಲಿ ಹೆಚ್ಚಾಗುವುದು ಅತ್ಯಗತ್ಯ. ಪ್ರಸ್ತುತ ನಮ್ಮ ವಯಸ್ಕ ಜನಸಂಖ್ಯೆಯಲ್ಲಿ ಕೇವಲ 11.3 ಪ್ರತಿಶತದಷ್ಟು ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ ಮತ್ತು ಒಂದು ಡೋಸ್ ಪಡೆದವರ ಪ್ರಮಾಣ, ಈ 11.3 ಶೇಕಡಾವೂ ಸೇರಿದಂತೆ 40 ಪ್ರತಿಶತದಷ್ಟು. ಈ ದರದಲ್ಲಿ, ವರ್ಷಾಂತ್ಯದಲ್ಲಿ ಇಡೀ ವಯಸ್ಕ ಜನಸಂಖ್ಯೆಗೆ ಲಸಿಕೆ ಹಾಕುವ ಗುರಿ ಈಡೇರಿಕೆ ಅಸಾಧ್ಯ. ಲಸಿಕೆಯ ನಿಧಾನಗತಿಯು ಮುಖ್ಯವಾಗಿ ಲಸಿಕೆ ಕೊರತೆಯಿಂದಾಗಿ ಆಗಿದೆ. ಗುರಿಯನ್ನು ಸಾಧಿಸಲು ನಾವು ದಿನಕ್ಕೆ ಒಂದು ಕೋಟಿ ಡೋಸ್‌ಗಳ ದರದಲ್ಲಿ ಲಸಿಕೆ ಹಾಕುವ ಅಗತ್ಯವಿದೆ. ಕೇಂದ್ರ ಸರ್ಕಾರ ತಕ್ಷಣವೇ ಜಾಗತಿಕವಾಗಿ ಲಸಿಕೆಗಳನ್ನು ಖರೀದಿಸಬೇಕು

ಪುಟ 12 ನೋಡಿ

ಆಗಸ್ಟ್ 9: ಬೀದಿಗಿಳಿದ ಲಕ್ಷಾಂತರ ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು

ಈ ವರ್ಷದ 'ಕ್ವಿಟ್ ಇಂಡಿಯಾ ದಿನ'ದಂದು ದೇಶಾದ್ಯಂತ ಲಕ್ಷಾಂತರ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರು ಕೊವಿಡ್ ಸಾಂಕ್ರಾಮಿಕದ ನಡುವೆಯೇ ಅಗತ್ಯ ನಿಯಮಗಳನ್ನು ಪರಿಪಾಲಿಸುತ್ತಲೇ ಬೀದಿಗಿಳಿದು 'ಕಾರ್ಪೊರೇಟ್ ಹಿಂದುತ್ವ ದಿಂದ ಭಾರತವನ್ನು ಉಳಿಸಿ' ಎಂದು ಘೋಷಣೆಗಳನ್ನು ಮೊಳಗಿಸಿದರು.

ನೂರಾರು ಜಿಲ್ಲೆಗಳಲ್ಲಿ, 25 ರಾಜ್ಯಗಳಲ್ಲಿ ಈ ಘೋಷಣೆ ಮೊಳಗಿತು, ಎಡ ಪಂಥೀಯ ಆಂದೋಲನದ ಚೈತನ್ಯ ಮತ್ತು ದೃಢನಿರ್ಧಾರ ಅಂದು ಪೂರ್ಣ ಪ್ರಮಾಣದಲ್ಲಿ ಪ್ರದರ್ಶನಗೊಂಡಿತು ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಅಧ್ಯಕ್ಷ ಅಶೋಕ ಧವಳೆಯವರು ಇದನ್ನು ವರ್ಣಿಸಿದ್ದಾರೆ.

ಎಡಪಂಥೀಯ ವರ್ಗ ಮತ್ತು ಸಮೂಹ ಸಂಘಟನೆಗಳು ಎಐಕೆಎಸ್, ಸಿಐಟಿಯು, ಎಐಎಡಬ್ಲ್ಯುಯು ಮತ್ತಿತರ ಪ್ರಗತಿಪರ ಸಂಘಟನೆಗಳು ಆಗಸ್ಟ್ 9 ರಂದು 'ಭಾರತ ಉಳಿಸಿ' ದಿನಾಚರಣೆ ನಡೆಸಲು ಕರೆ ನೀಡಿದ್ದವು. ವಿದ್ಯಾರ್ಥಿ, ಯುವಜನ ಮತ್ತು ಮಹಿಳಾ ಸಂಘಟನೆಗಳು ಈ ಕರೆಗೆ ಬೆಂಬಲ ನೀಡಿ ರೈತ–ಕಾರ್ಮಿಕರರ ಜತೆಗೂಡಿದರು. ಈ ಕಾರ್ಯಾಚರಣೆ ಜೈಲ್‌ಭರೊ, ರಾಸ್ತಾರೋಕೋ, ಸರಕಾರೀ ಕಚೇರಿಗಳ ಪಿಕೆಟಿಂಗ್, ರ್‍ಯಾಲಿಗಳು, ಧರಣಿಗಳು, ಮತಪ್ರದರ್ಶನಗಳು ಹೀಗೆ ವಿವಿಧ ಸ್ವರೂಪಗಳಲ್ಲಿ ನಡೆದವು.

ಇವು ಮೂರು ವರ್ಷಗಳ ಹಿಂದೆ ಇದೇ ಮೂರು ಸಂಘಟನೆಗಳು ಕರ 'ನೀಡಿದ್ದ 'ಜೈಲ್ ಭರೋ 'ಕಾರ್ಯಾಚರಣೆಯನ್ನು ಮತ್ತು ಅದರ ನಂತರ ಸಪ್ಟಂಬರ್ 5ರಂದು ದಿಲ್ಲಿಯಲ್ಲಿ ನಡೆದ 2 ಲಕ್ಷ ರೈತ–ಕಾರ್ಮಿಕರ ಬೃಹತ್ 'ಸಂಸದ್ ಚಲೋ'ವನ್ನು ನೆನಪಿಸಿವೆ ಎಂದು ಅಶೋಕ ಧವಳೆ ಹೇಳಿದ್ದಾರೆ.

ಕಳೆದ ಸುಮಾರು ಒಂದು ವರ್ಷದಿಂದ ರೈತರು ಮತ್ತು ಕಾರ್ಮಿಕರು ಸತತವಾಗಿ ಎತ್ತುತ್ತಿರುವ ಮೂರು ಕೃಷಿ ಕಾಯ್ದೆಗಳ ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳ ರದ್ಧತಿ, ವಿದ್ಯುತ್ ಮಸೂದೆಯ ವಾಪಸಾತಿ ಹಾಗೂ ಕನಿಷ್ಟ ಬೆಂಬಲ ಬೆಲೆಗೆ ಕಾನೂನು ಈ ಪ್ರಮುಖ ಬೇಡಿಕೆಗಳಲ್ಲದೆ, ಖಾಸಗೀಕರಣದ ಧಾವಂತ ನಿಲ್ಲಬೇಕು ಮತ್ತಿತರ ಬೇಡಿಕೆಗಳನ್ನು ಪುನರುಚ್ಚರಿಸಲಾಯಿತು.

ಜತೆಗೆ ಕೊವಿಡ್ ಸಂಕಟಗಳಿಂದ ಜನಗಳನ್ನು ಪಾರು ಮಾಡಲು ಉಚಿತ ಲಸಿಕೆಯೊಂದಿಗೆ, ಅಗತ್ಯವಿರುವವರಿಗೆ ನಗದು ವರ್ಗಾವಣೆ ಮತ್ತು ಉಚಿತ ಆಹಾರ ಕಿಟ್‌ಗಳನ್ನು ಒದಗಿಸಬೇಕು ಎಂಬ ಆಗ್ರಹಗಳೂ ಕೇಳಬಂದವು.

ಕಾರ್ಮಿಕರ ಜಂಟಿ ವೇದಿಕೆಯ ಅಭಿನಂದನೆ

ದೇಶಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಸ್ಥಳಗಳಲ್ಲಿ ಅಂದು 'ಭಾರತ ಉಳಿಸಿ' ದಿನಾಚರಣೆ ನಡೆಯಿತು ಎಂದು ಇದರಲ್ಲಿ ಭಾಗವಹಿಸಿದ್ದ ಕಾರ್ಮಿಕರು ಮತ್ತು ಇತರ ಎಲ್ಲ ಜನವಿಭಾಗಗಳನ್ನು ಪುಟ 14 ನೋಡಿ

ಆಗಸ್ಟ್ 15ರಂದು 'ಕಿಸಾನ್ ಮಜ್ದೂರ್ ಸ್ವಾತಂತ್ರ್ಯ ಸಂಗ್ರಾಮ ದಿನ' ಆಚರಣೆಗೆ ಕರೆ

ಸಂಯುಕ್ತ ಕಿಸಾನ್ ಮೋರ್ಚಾ ಈ ಆಗಸ್ಟ್ 15ರಂದು "ಕಿಸಾನ್ ಮಜ್ದೂರ್ ಆಝಾದಿ ಸಂಗ್ರಾಮ್ ದಿವಸ್" ಆಚರಿಸಬೇಕು ಎಂದು ತನ್ನ ಎಲ್ಲ ಅಂಗ ಸಂಘಟನೆಗಳಿಗೆ ಕರೆ ನೀಡಿದೆ. ಅಂದು 'ತ್ರಿವರ್ಣ ಮೆರವಣಿಗೆ(ತಿರಂಗಾ ಮಾರ್ಚ್)ಗಳನ್ನು ಎಲ್ಲ ತಹಸಿಲ್, ಜಿಲ್ಲಾ ಮುಖ್ಯಾಲಯಗಳಲ್ಲಿ ನಡೆಸಲಾಗುವುದು ಎಂದು ಅದು ಹೇಳಿದೆ.

ಉತ್ತರಪ್ರದೇಶ ಮತ್ತು ಉತ್ತರಾಖಂಡದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿರುವ ಹಿನ್ನೆಲೆಯಲ್ಲಿ 'ಮಿಷನ್ ಯುಪಿ–ಉತ್ತರಾಖಂಡ' ವನ್ನು ಕೈಗೆತ್ತಿಕೊಳ್ಳಲು ಕೂಡ ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧರಿಸಿದೆ.

ಸಂಸತ್ ಅಧಿವೇಶನವನ್ನು ಹಳಿ ತಪ್ಪಿಸಿದ ಸರಕಾರ–ವಿಪಕ್ಷಗಳ ಪ್ರತಿಭಟನೆ

ಸಂಸತ್ತಿನ ಮುಂಗಾರು ಅಧಿವೇಶನದ ಕಲಾಪಗಳ ಮುಂದೂಡಿಕೆ ಹಾಗೂ ಪ್ರತಿಪಕ್ಷಗಳ ಸದಸ್ಯರ ಮೇಲೆ ಹಲ್ಲೆ ವಿರೋಧಿಸಿ 14 ಕ್ಕೂ ಹೆಚ್ಚು ವಿರೋಧ ಪಕ್ಷಗಳ ಸಂಸತ್ ಸದಸ್ಯರು ವಿಜಯ್ ಚೌಕ್ ನಿಂದ ಸಂಸತ್ ಭವನದ ವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಈ 14 ಪಕ್ಷಗಳ ಸಂಸದೀಯ ಮುಖಂಡರು ಈ ಕುರಿತು ಒಂದು ಹೇಳಿಕೆ ನೀಡಿ, ಸಂಸದೀಯ ಪ್ರಜಾಪ್ರಭುತ್ವಕ್ಕೆ ಕನಿಷ್ಟ ಗೌರವವೂ ಇಲ್ಲದ ಸರಕಾರ ಸಂಸತ್ತಿನ ಮುಂಗಾರು ಅಧಿವೇಶವನ್ನು ಹಳಿ ತಪ್ಪಿಸಿದೆ ಎಂದು ಖಂಡಿಸಿದ್ದಾರೆ.

ಅಧಿವೇಶನದ ಆರಂಭದ ಮೊದಲು ಸರಕಾರ ಕರೆದ ಸರ್ವ ಪಕ್ಷ ಸಭೆಯಲ್ಲಿ ಪ್ರತಿಪಕ್ಷಗಳು ತಾವು ಎತ್ತ ಬೇಕೆಂದಿರುವ ರಾಷ್ಟ್ರೀಯ ಮಹತ್ವದ ಮತ್ತು ಸಾರ್ವಜನಿಕ ಕಾಳಜಿಯ ವಿಷಯಗಳ ಬಗ್ಗೆ ಸ್ಪಷ್ಟವಾಗಿ ತಿಳಿಸಿದ್ದರು. ಅವುಗಳಲ್ಲಿ ಮುಖ್ಯವಾಗಿ ಪೆಗಸಸ್ ಗೂಢಚರ್ಯೆ, ರೈತರ ಚಳುವಳಿ, ಹಣದುಬ್ಬರ ಮತ್ತು ಹದಗೆಡುತ್ತಿರುವ ಆರ್ಥಿಕ ಸನ್ನಿವೇಶ ಸೇರಿತ್ತು.

ಆದರೆ ಸರಕಾರ ಈ ಕುರಿತು ಚರ್ಚೆಗೆ ಅವಕಾಶವನ್ನೇ ಕಲ್ಪಿಸದೆ ಸುಮ್ಮನಿತ್ತು. ಸಂಸತ್ತಿಗೆ ತಾನು ಉತ್ತರದಾಯಿಯಾಗಬೇಕಿಲ್ಲ ಎಂದು ಅದು ನಂಬಿದಂತಿತ್ತು. ಮಾಹಿತಿಪೂರ್ಣ ಚರ್ಚೆಗೆ ಅದು ಸಿದ್ಧವಾಗಿರಲಿಲ್ಲ. ಸರಕಾರ ತನ್ನ ಶಾಸಕೀಯ ಅಜೆಂಡಾವನ್ನು ಮುಂದೊತ್ತಲು ತನ್ನ ವಿಪರೀತ ಬಹುಮತವನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಂಡಿದೆ ಎಂದು ಈ ಹೇಳಿಕೆಯಲ್ಲಿ ಪ್ರತಿಪಕ್ಷಗಳ ಮುಖಂಡರು ಹೇಳಿದ್ದಾರೆ.

ತನ್ನ ವರ್ತನೆ ಮತ್ತು ಕ್ರಿಯೆಗಳಿಂದ ಗಮನವನ್ನು ಬೇರೆಡೆಗೆ ತಿರುಗಿಸಲು ಸರಕಾರ ಸಂಸತ್ತಿನ ಕಲಾಪಗಳು ಅಸ್ತವ್ಯಸ್ತಗೊಳ್ಳಲು ಪ್ರತಿಪಕ್ಷಗಳೇ ಕಾರಣ ಎಂದು ದೂಷಿಸುವ ಅಪಪ್ರಚಾರವನ್ನು ನಡೆಸಿದೆ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.

ಸಂಸತ್ತಿನ ಮುಂಗಾರು ಅಧಿವೇಶನ ಜುಲೈ 19ರಿಂದ ಆರಂಭವಾಗಿ, ಆಗಸ್ಟ್ 13 ರವರೆಗೂ ನಡೆಯಬೇಕಿತ್ತು. ಆದರೆ ಪುಟ 14 ನೋಡಿ

ಸಂಪಾದಕೀಯ

ದಲಿತರಿಗೆ ಬಂತಾ ಸ್ವಾತಂತ್ರ್ಯ?

ಯಾರಿವರು ದಲಿತರು? ಎಲ್ಲರಂತೆ ಅವರು ಈ ದೇಶದ ಪ್ರಜೆಗಳಲ್ಲವೆ? 47 ರ ಸ್ವಾತಂತ್ರ್ಯ ಅವರಿಗೆ ಇನ್ನೂ ದಕ್ಕಲಿಲ್ಲವೆ? ಸ್ವತಂತ್ರ ಭಾರತ ಅಂಗೀಕರಿಸಿದ ಸಂವಿಧಾನ ಅವರಿಗೆ ಅನ್ವಯವಾಗಿಲ್ಲವೆ? ಆಗಿಲ್ಲದಿದ್ದರೆ ಏಕೆ? ಅವರೇಕೆ ಸ್ವಾಭಿಮಾನದ ಬದುಕಿನಿಂದ ವಂಚಿತರು? ಶತಮಾನಗಳಿಂದ ಅನುಭವಿಸುತ್ತಾ ಬಂದಿರುವ ತಾರತಮ್ಯಗಳಿಂದ ಅವರ ವಿಮೋಚನೆ ಇದುವರೆಗೂ ಆಗಿಲ್ಲವೆ? ದೇಶ ಇಂದು 75ನೇ ಸ್ವಾತಂತ್ರೋತ್ಸವದತ್ತ ಸಂಭ್ರಮದೊಂದಿಗೆ ಹೆಜ್ಜೆ ಹಾಕುತ್ತಿರುವಾಗ ನಮ್ಮ ದಲಿತ ಸಹೋದರ ಸಹೋದರಿಯರು ಅಸ್ಪೃಶ್ಯತೆ, ಅಸಮಾನತೆಯ ಕಗ್ಗತ್ತಲಿನಲ್ಲಿ ಕಾಲಕಳೆಯುತ್ತಿರುವುದು ನಮ್ಮ ಗಮನವನ್ನು ಏಕೆ ಸೆಳೆಯುವುದಿಲ್ಲ?

ನಮ್ಮ ಸಮಾಜದಲ್ಲಿ ಜಾತಿ ಪದ್ಧತಿ ಎಂಬ ಗುಲಾಮಗಿರಿಯನ್ನು ಶತಮಾನಗಳಿಂದ ಪೋಷಿಸುತ್ತಾ ಬರಲಾಗಿದೆ. ಖಾಸಗಿ ಆಸ್ತಿಯ ಉಗಮದೊಂದಿಗೆ, ಬುಡಕಟ್ಟು ಸಮಾಜದ ನಿರ್ಮೂಲನೆಯೊಂದಿಗೆ ವಂಶಪರಂಪರಾಗತ ಜಾತಿ ಪದ್ಧತಿ ಬೆಳೆದು ಬಂತು. ಇವರಿಗೆ ಎಲ್ಲ ಬಗೆಯ ಆಸ್ತಿಯ ಹಕ್ಕನ್ನು ನಿರಾಕರಿಸಲಾಯಿತು. ಅವರು ಯಾವುದೇ ಪ್ರತಿಫಲವನ್ನು ಬಯಸದೆ ತಮ್ಮ ಒಡೆಯರಿಗಾಗಿ ದುಡಿಯುವಂತಾಯಿತು. ಇವರ ದುಡಿಮೆಯಿಂದ ಉತ್ಪತ್ತಿಯಾದ ಅಧಿಕ ಮೌಲ್ಯ ಒಡೆಯನ ಖಾಸಗಿ ಆಸ್ತಿಯಾಯಿತು. ವಿಶ್ವದ ಇತರ ಕಡೆ ಬಹುತೇಕವಾಗಿ ವರ್ಗ ಸಮಾಜದ ಉದಯವಾಯಿತು. ಭಾರತ ಎಂಬ ಈ ಉಪಖಂಡದಲ್ಲಿ ಮಾತ್ರ ಜನನ ಆಧಾರಿತ ಜಾತಿ ಪದ್ಧತಿಯನ್ನು ಅಸ್ತಿತ್ವಕ್ಕೆ ತರಲಾಯಿತು. ಧರ್ಮಗ್ರಂಥಗಳ ಮೂಲಕ ಈ ಶ್ರೇಣೀಕೃತ ಜಾತಿಪದ್ಧತಿಯನ್ನು ಸಮರ್ಥಿಸಲಾಯಿತು. ನಮ್ಮ ಸಂಸ್ಕೃತಿಯನ್ನು ಕಾಪಾಡುವ ಹೆಸರಿನಲ್ಲಿ ಜಾತಿ ಆಧಾರಿತ ಅಸಮಾನತೆಯನ್ನು ಅಸ್ಪೃಶ್ಯತೆಯನ್ನು ಕಾಪಾಡಲು ಬದ್ಧರಾದವರು ದೇಶವನ್ನು ಆಳುವಂತಾಗಿದೆ. ಎಲ್ಲಿಯ ವರೆಗೆ ಆಸ್ತಿವಂತರು ನಮ್ಮನ್ನು ಆಳುತ್ತಿರುತ್ತಾರೋ, ಅಲ್ಲಿಯವರೆಗೆ ಈ ಅನಿಷ್ಟ ಜಾತಿ ಪದ್ಧತಿ ಮುಂದುವರೆಯುತ್ತಿರುವುದು.

ಹಿಂದುತ್ವದ ಉಳಿವಿಗಾಗಿ ಹೋರಾಡುವ ದುರುದ್ದೇಶದಿಂದ ಸಂಘಪರಿವಾರವನ್ನು ಕಟ್ಟಿ ಬೆಳೆಸಲಾಗುತ್ತದೆ. ಈ ಗುರಿಸಾಧನೆಗಾಗಿ ಅಲ್ಪಸಂಖ್ಯಾತರನ್ನು ಬೆದರಿಸಲಾಗುತ್ತದೆ. ಅವರ ಪ್ರಾರ್ಥನಾ ಮಂದಿರಗಳನ್ನು ನಾಶಮಾಡಲಾಗುತ್ತದೆ. ಅವರ ಆಹಾರ ಪದ್ಧತಿಗಳ ಮೇಲೆ ದಾಳಿ ಮಾಡಲಾಗುತ್ತದೆ. ಇಂತಹ ದುಷ್ಟ ಕಾರ್ಯಾಚರಣೆಗಾಗಿ, ಧಾರ್ಮಿಕ ಅಲ್ಪ ಸಂಖ್ಯಾತರ ಮೇಲೆ ದೌರ್ಜನ್ಯವೆಸಗಲು ಮುಗ್ಧ ದಲಿತರನ್ನು ಬಳಸಲಾಗುತ್ತದೆ. ಆದರೆ ಅದೇ ದಲಿತರಿಗೆ ದೇವಸ್ಥಾನ ಪ್ರವೇಶವನ್ನು ನಿರಾಕರಿಸಲಾಗುತ್ತದೆ. ದೇವಸ್ಥಾನಗಳಲ್ಲಿ ಸಹಪಂಕ್ತಿ ಬೋಜನಕ್ಕೆ ಅವಕಾಶ ನೀಡಲಾಗುವುದಿಲ್ಲ–ಜಾತ್ರೆಗಳಲ್ಲಿ, ಮದುವೆಗಳಲ್ಲಿ ಸಾಮೂಹಿಕವಾಗಿ ಒಟ್ಟಿಗೆ ಕುಳಿತುಕೊಂಡು ಊಟ ಮಾಡಲು ಅವಕಾಶ ನೀಡುವುದಿಲ್ಲ. ದಲಿತರೂ ಹಿಂದುಗಳು ಎಂದು ಹೇಳುತ್ತಾರೆ. ಆದರೆ ಮೇಲ್ಜಾತಿಯವರು ಎಂದು ಕರೆದುಕೊಳ್ಳುವ ಹಿಂದುಗಳು ದಲಿತರೊಂದಿಗೆ ವಿವಾಹ ಸಂಬಂಧಗಳನ್ನು ಬೆಳೆಸಿಕೊಳ್ಳುವುದಿಲ್ಲ. ಅಪ್ಪಿ ತಪ್ಪಿ ಮೇಲ್ಜಾತಿ ಯುವಕ ಅಥವ ಯುವತಿ ದಲಿತ ಹುಡುಗ ಅಥವ ಹುಡುಗಿಯನ್ನು ಪ್ರೀತಿಸಿ ಮದುವೆ ಮಾಡಿಕೊಂಡರೆ ತಮ್ಮ ಕರುಳಿನ ಕುಡಿಗಳನ್ನೇ ಕೊಚ್ಚಿ ಕೊಲೆ ಮಾಡಲು ಹಿಂಜರಿಯುವುದಿಲ್ಲ. ಇಂತಹ ದುಷ್ಟ ಪದ್ಧತಿಗಳನ್ನು ಪುರಸ್ಕರಿಸುವ ಸಮಾಜದಲ್ಲಿ ದಲಿತರಿಗೆ ಎಲ್ಲಿದೆ ನ್ಯಾಯ? ಅವರಿಗೆಲ್ಲಿದೆ ಸ್ವಾತಂತ್ರ್ಯ?

ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳಾಗಿವೆ ಎಂದು ನಾವು ಸಂಭ್ರಮಿಸುತ್ತಿದ್ದೇವೆ. ಸರ್ಕಾರಿ ಆಚರಣೆಗಳಲ್ಲಿ ಮೈಮರೆಯುತ್ತೇವೆ. ಆದರೆ ಪಶುಗಳಿಗಿಂತ ಕೀಳಾಗಿ ಕಾಣಲಾಗುತ್ತಿರುವ ನಮ್ಮ ಬಂಧುಗಳ ಬಗ್ಗೆ ನಮಗಿಲ್ಲ ಯಾಕೆ ಕನಿಷ್ಠ ಕಾಳಜಿ? ಅವರ ಮೇಲೆ ನಾವು ಸವರ್ಣೀಯರು ನಡೆಸುವ ದಾಳಿ ದಮನಗಳಿಗೆ ನಾವು ಏಕೆ ಸ್ಪಂಧಿಸುವುದಿಲ್ಲ. ನಮ್ಮ ಮೇಲ್ಜಾತಿ ಮಠಾಧೀಶರು ತಮ್ಮ ಜಾತಿಯವರಿಗೆ ಸರ್ಕಾರದಿಂದ ಸೌಕರ್ಯಗಳನ್ನು ಸೌಲಭ್ಯಗಳನ್ನು ಒದಗಿಸಲು ತುಂಬಾ ಶ್ರಮಿಸುತ್ತಿರುವುದು ಇತ್ತೀಚಿನ ಹೊಸ ವಿದ್ಯಮಾನ. ಅವರಿಗೆ ಮೀಸಲಾತಿ ಒದಗಿಸಲು ಬಾರೀ ಪೈಪೋಟಿ ನಡೆಯುತ್ತಿದೆ. ಶಿಕ್ಷಣ ಮತ್ತು ಉದ್ಯೋಗಗಳಿಂದ ವಂಚಿತರಾದ ದಲಿತ ಜಾತಿಗಳವರಿಗೆ ಸಾಮಾಜಿಕ ನ್ಯಾಯ ಒದಗಿಸುವುದಕ್ಕಾಗಿ ಮೀಸಲಾತಿ ಒಂದು ಸಂವಿಧಾನಾತ್ಮಕ ಹಕ್ಕಾಗಿ ನೀಡಲಾಗಿದೆ. ಮೀಸಲಾತಿ ಬಡವರಿಗೆಲ್ಲ ನೀಡುವ ನಿವಾರಣಾ ಕ್ರಮವಲ್ಲ. ಬಡತನ ನಿವಾರಣೆಗೆ ಬೇರೆ ಕ್ರಮಗಳಿಗೆ. ದಲಿತರಿಗೆ ದೊರೆಯಬೇಕಾದ ಈ ಏಕೈಕ ಸೌಲಭ್ಯವನ್ನು ಕಬಳಿಸುವ ಪಿತೂರಿ ಸವರ್ಣಿಯರಿಂದ ನಡೆಯುತ್ತಿದ್ದರೆ ಬಲಾಢ್ಯ ಮಠಾಧೀಶರು ಯಾವುದೇ ಮುಲಾಜಿಲ್ಲದೆ ಬಲಢ್ಯ ಜಾತಿಗಳ ತಮ್ಮ ಶಿಷ್ಯ ವರ್ಗದ ಬೆಂಬಲಕ್ಕೆ ನಿಂತಿದ್ದಾರೆ. ಮೇಲ್ಜಾತಿಯವರಿಗೇ ಇಂತಹ ಸೌಲಭ್ಯಗಳನ್ನು ದೊರಕಿಸಿಕೊಳ್ಳಲು ತಾವು ಹೇಳುವವರೇ ಮುಖ್ಯಮಂತ್ರಿ ಆಗಬೇಕು, ತಮ್ಮ ಜಾತಿಗೆ ಸೇರಿದವರೆ ಮಂತ್ರಿಗಳಾಗಬೇಕು ಎಂದು ಒತ್ತಡ ಹೇರುತ್ತಾರೆ. ಇದನ್ನು ಗಮನಿಸುತ್ತಿರುವ ಮುಗ್ಧ ದಲಿತರು ದಲಿತರೇ ಮುಖ್ಯಮಂತ್ರಿ ಆಗಬೇಕು ಎಂದು ಆಗ್ರಹಿಸಲು ಒಂದಾಗುತ್ತಿದ್ದಾರೆ.

ನಮ್ಮ ದಲಿತ ಬಂಧುಗಳು ಸಹ ದಾರಿ ತಪ್ಪುತ್ತಿದ್ದಾರೆ. ಮೇಲ್ಜಾತಿಯರ ಆಮಿಷಗಳಿಗೆ ಒಳಗಾಗುತ್ತಿದ್ದಾರೆ. ತಮ್ಮ ಜಾತಿಗೆ ಸೇರಿದವರು ಮುಖ್ಯಮಂತ್ರಿ ಆದರೆ ತಮಗೆ ಅನುಕೂಲವಾಗಬಹುದೆಂಬ ಭ್ರಮೆಗೆ ಒಳಗಾಗುತ್ತಿದ್ದಾರೆ. ಜಾತಿಗಳೊಂದಿಗೆ ವರ್ಗಗಳು ತಳಕು ಹಾಕಿಕೊಂಡಿರುವುದನ್ನು ದಲಿತರು ಗಮನಿಸಲಾಗದೆ ಸೋಲುತ್ತಾರೆ. ದಲಿತರ ಹೆಸರು ಹೇಳಿ ಶಾಸಕರು, ಮಂತ್ರಿಗಳು ಆಗುವವರು ಆಸ್ತಿವಂತರಾಗಿದ್ದು ಅಕ್ರಮವಾಗಿ ಹಣ ಸಂಪಾದನೆ ಮಾಡುವವರು ಆಗಿರುತ್ತಾರೆ. ಅವರು ದುಡಿಯುವ ಜನರನ್ನು, ರೈತರನ್ನು, ಕಾರ್ಮಿಕರನ್ನು ಸುಲಿಗೆ ಮಾಡುವವರೇ ಆಗಿರುತ್ತಾರೆ. ನಮ್ಮ ಜಾತಿಗೆ ಸೇರಿದವರು ಯಾರೂ ಎನ್ನುವುದಕ್ಕಿಂತ ನಮ್ಮ ಸುಲಿಗೆ ಮಾಡುವವರು ಯಾರೂ ಎಂಬುದನ್ನು ಗುರುತಿಸಲು ದಲಿತರು ವಿಫಲರಾಗಬಾರದು. ಅವರು ಜಾತಿ ಪದ್ಧತಿ ವಿರುದ್ಧ ಹೋರಾಡುವ ಮನಸ್ಸಿನವರಾಗಿರಬೇಕು ಮಾತ್ರವಲ್ಲ ಒಂದು ವರ್ಗರಹಿತ ಸಮಾಜ ನಿರ್ಮಾಣದ ಪರವಾಗಿರಬೇಕು. ದಲಿತರಿಗೆ ಸ್ವಾತಂತ್ರ್ಯ ಸಿಗಬೇಕಾದರೆ ಅವರು ವರ್ಗ ಶೋಷಣೆಯಿಂದ ಹಾಗೂ ಜಾತಿ ದಮನದಿಂದ ವಿಮೋಚಿತರಾಗಬೇಕು. ಅದಕ್ಕಾಗಿ ಎಲ್ಲಾ ಶೋಷಿತರು ಮತ್ತು ದಮನಿತರು ಮನಪೂರ್ವಕವಾಗಿ ಒಂದಾಗಿ ಪರಸ್ಪರ ವಿಶ್ವಾಸದಿಂದ ಹೋರಾಡಬೇಕು.

ಐತಿಹಾಸಿಕ 'ಕ್ವಿಟ್ ಇಂಡಿಯಾ' ಚಳವಳಿ ನೆನಪಿನಲ್ಲಿ ಕಾರ್ಮಿಕರು–ರೈತರು–ಕೃಷಿಕೂಲಿಕಾರರ ಜಂಟಿ ಪ್ರತಿಭಟನಾ ಧರಣಿ

ಕ್ವಿಟ್ ಇಂಡಿಯಾ ಚಳುವಳಿಯ ನೆನಪಿನ ಅಂಗವಾಗಿ ದೇಶದ ಪ್ರಮುಖ ಕಾರ್ಮಿಕ–ರೈತ–ಕೃಷಿ ಕೂಲಿಕಾರರ ಸಂಘಟನೆಗಳು ಸರ್ಕಾರದ ನೀತಿಗಳ ವಿರುದ್ಧ ರಾಷ್ಟ್ರವ್ಯಾಪಿಯಾಗಿ ಸತತ ಎರಡು ವಾರಗಳು ಪ್ರಚಾರಾಂದೋನ ನಡೆಸಿ ರೈತರು, ಕೂಲಿಕಾರರು, ಕಾರ್ಮಿಕರ ಬೇಡಿಕೆಗಳನ್ನು ಪರಿಹರಿಸಬೇಕೆಂದು ಪ್ರತಿಭಟನಾ ಧರಣಿಯನ್ನು ನಡೆಸಿದರು.

ಕಳೆದ ಜುಲೈ 25 ರಿಂದ ಆಗಸ್ಟ್ 8 ರವರೆಗೆ ಪ್ರಚಾರಾಂದೋಲನವನ್ನು ನಡೆಸಿದ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು), ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್), ಅಖಿಲ ಭಾರತ ಕೃಷಿಕೂಲಿಕಾರರ ಸಂಘಟನೆ(ಎಐಎಡಬ್ಲ್ಯೂಯು) ವತಿಯಿಂದ ಕೋಟ್ಯಾಂತರ ಜನರಲ್ಲಿ ಜಾಗೃತಿ ಮೂಡಿಸಿದರು. ಹೋರಾಟದ ಮುಂದುವರೆದ ಭಾಗವಾಗಿ ಆಗಸ್ಟ್ 9, 2021 ರಂದು ರಾಜ್ಯದ ಎಲ್ಲಾ ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆಗಳನ್ನು ನಡೆಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿಪತ್ರವನ್ನು ಸಲ್ಲಿಸಿದರು.

ಬೆಂಗಳೂರು, ದಕ್ಷಿಣ ಕನ್ನಡ, ತುಮಕೂರು, ಮೈಸೂರು, ಮಂಡ್ಯ, ಉಡುಪಿ, ಉತ್ತರ ಕನ್ನಡ, ಬಳ್ಳಾರಿ, ಧಾರವಾಡ, ಚಿಕ್ಕಬಳ್ಳಾಪುರ ಸೇರಿದಂತೆ ಹಲವು ಜಿಲ್ಲೆ ತಾಲ್ಲೂಕು ಮಟ್ಟದಲ್ಲಿ ಪ್ರತಿಭಟನಾ ಧರಣಿಗಳು ನಡೆದಿವೆ.

ಪ್ರತಿಭಟನೆಯ ಹಕ್ಕೊತ್ತಾಯಗಳು

ಕೃಷಿ ರಂಗದಲ್ಲಿ ಸುಧಾರಣೆಗಳನ್ನು ಜಾರಿಗೆ ತರುವ ಹೆಸರಿನಲ್ಲಿ ಕೇಂದ್ರ ಸರ್ಕಾರ ಅಂಗೀಕರಿಸಿರುವ ಮೂರು ನೂತನ ಕೃಷಿ ಕಾನೂನುಗಳು ರೈತ ವಿರೋಧಿಯಾಗಿವೆ ಮಾತ್ರವಲ್ಲ ನಮ್ಮ ವ್ಯವಸಾಯ ರಂಗವನ್ನು ಕಬಳಿಸಲು ಹೊಂಚು ಹಾಕುತ್ತಿರುವ ಕಾರ್ಪೋರೇಟ್ ಕಂಪನಿಗಳ ಪರವಾಗಿವೆ ಎಂದು ಆರೋಪಿಸಲಾಗಿದೆ.

ಹೊಸ ಕೃಷಿ ಕಾನೂನುಗಳು ರೈತರಿಗೆ ತಮ್ಮ ಉತ್ಪನ್ನಗಳನ್ನು ಎಲ್ಲಿ ಬೇಕಾದಲ್ಲಿ, ಯಾರಿಗೆ ಬೇಕೋ ಅವರಿಗೆ ಮಾರಾಟ ಮಾಡುವ ಸ್ವಾತಂತ್ರ್ಯ ನೀಡುತ್ತದೆ. ರೈತರಿಗೆ ಇದರಿಂದ ಒಳ್ಳೆಯ ಬೆಲೆ ಸಿಗುತ್ತದೆ ಎಂದು ಪ್ರಚಾರ ಮಾಡಲಾಗುತ್ತಿದೆ. ಆದರೆ, ಕೃಷಿ ಕ್ಷೇತ್ರದೊಳಗೆ ಕಾರ್ಪೋರೇಟ್ ಕಂಪನಿಗಳ ಪ್ರವೇಶಕ್ಕೆ ಮುಕ್ತ ಅವಕಾಶ ನೀಡಲಾಗಿದೆ. ರೈತರ ಉತ್ಪನ್ನಗಳನ್ನು ಖರೀದಿ ಮಾಡುವ ಕಂಪನಿಗಳು ರೈತರೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು. ಒಪ್ಪಂದಕ್ಕೆ ತಕ್ಕಂತೆ ಬೆಲೆ ನೀಡಲು ಖರೀದಿದಾರ ಕಂಪನಿ ನಿರಾಕರಿಸಿದರೆ ರೈತರಿಗೆ ಯಾವುದೆ ರಕ್ಷಣೆ ಇಲ್ಲ. ದೈತ್ಯ ಕಂಪನಿಗಳ ವಿರುದ್ದ ನ್ಯಾಯ ಪಡೆಯಲು ರೈತರು ನ್ಯಾಯಾಲಯಗಳಿಗೆ ಅಲೆದಾಡಿ, ಸುಸ್ತಾಗಿ ಆತ್ಮಹತ್ಯೆಗಳಿಗೆ ಶರಣಾಗುತ್ತಿದ್ದಾರೆ. ಅಗತ್ಯ ವಸ್ತುಗಳ ಕಾಯ್ದೆಯನ್ನು ತಿದ್ದುಪಡಿ ಮಾಡಲಾಗಿದೆ. ಇದರಿಂದಾಗಿ ಅಗತ್ಯ ವಸ್ತುಗಳನ್ನು ಬೃಹತ್ ಪ್ರಮಾಣದಲ್ಲಿ ಖಾಸಗಿ ಉಗ್ರಾಣಗಳಲ್ಲಿ ಬಚ್ಚಿಟ್ಟು, ಮಾರುಕಟ್ಟೆಯಲ್ಲಿ ಕೃತಕವಾದ ಅಭಾವವನ್ನು ಉಂಟುಮಾಡಿ, ಅಗತ್ಯ ವಸ್ತುಗಳ ಬೆಲೆಗಳನ್ನು ಗಗನಕ್ಕೇರಿಸಿ ಶ್ರೀಮಂತರು ಲಾಭಮಾಡಿಕೊಳ್ಳಲು ಸರ್ಕಾರ ಈ ಕೃಷಿ ಕಾಯ್ದೆಯ ಮೂಲಕ ಅನುಕೂಲ ಮಾಡಿಕೊಟ್ಟಿದೆ.

ರೈತರ ಉತ್ಪನ್ನಗಳಿಗೆ ಡಾ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಲಾಭದಾಯಕ ಬೆಲೆ ಸಿಗುವುದಿಲ್ಲ. ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆ ದೊರೆಯುವಂತೆ ರೈತ ಪರ ಕಾನೂನು ಜಾರಿಗೆ ತರಲು ರೈತರು ಬೆಳೆದ ದವಸ ಧಾನ್ಯಗಳನ್ನು, ಹಣ್ಣು ಹಂಪಲು, ತರಕಾರಿಗಳನ್ನು ಸರ್ಕಾರವೇ ಖರೀದಿ ಮಾಡುವ ಪ್ರಸ್ತಾಪವೇ ಇಲ್ಲ. ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಗಳಿಗೆ ತರುವ ಅಗತ್ಯ ಇಲ್ಲದಂತಾಗಿ ನಿಧಾನವಾಗಿ ಎಲ್ಲಾ ಎಪಿಎಂಸಿಗಳು ಮುಚ್ಚಲ್ಪಡುತ್ತದೆ. ಹಾಗೂ ಸರ್ಕಾರವು ಆದಾಯ ಹಾಗು ಅಗತ್ಯ ವಸ್ತುಗಳ ಬೆಲೆಯನ್ನು ನಿಯಂತ್ರಣ ಮಾಡುವ ಪರಮಾಧಿಕಾರವನ್ನು ಕಳೆದುಕೊಳ್ಳುತ್ತದೆ.

ಪುಟ 4 ಕ್ಕೆ





ಐತಿಹಾಸಿಕ 'ಕ್ವಿಟ್ ಇಂಡಿಯಾ' ಚಳವಳಿ ನೆನಪಿನಲ್ಲಿ ಕಾರ್ಮಿಕರು–ರೈತರು–ಕೃಷಿಕೂಲಿಕಾರರ ಜಂಟಿ ಪ್ರತಿಭಟನಾ ಧರಣಿ.....

ಪುಟ 3 ರಿಂದ

ಬೇಸಾಯದಲ್ಲಿ ಕೃಷಿ ಕೂಲಿಕಾರರು ಮುಖ್ಯ ಪಾತ್ರ ನಿರ್ವಹಿಸುತ್ತಾರೆ. ಆದರೆ ಕೇಂದ್ರ ಸರ್ಕಾರ ಕೃಷಿ ಕೂಲಿಕಾರರನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ. ದೇಶದಲ್ಲಿ ಋಣಮುಕ್ತಿ ಕಾನೂನು ಇಲ್ಲದೆ ಇರುವುದರಿಂದ ಕೂಲಿಕಾರರು ಮಾಡಿದ ಸಾಲವನ್ನು ವಾಪಸ್ ಕೊಡಲಾಗದೆ ಆತ್ಮಹತ್ಯೆ ಹಾದಿ ತುಳಿಯುತ್ತಾರೆ. ರೈತರು ಬೆಳೆದ ದವಸ ಧಾನ್ಯಗಳನ್ನು ಸರ್ಕಾರವೇ ಕೊಂಡುಕೊಳ್ಳುವ ವ್ಯವಸ್ಥೆ ಇಲ್ಲದಿರುವುದರಿಂದ ಕ್ರಮೇಣ ಪಡಿತರ ಪದ್ಧತಿ ರದ್ದಾಗಲಿದೆ. ಇದರಿಂದ ಎಪಿಎಂಸಿಗಳು ಕ್ರಮೇಣ ಬಂದ್ ಆಗಿ ಅಲ್ಲಿ ಕೂಲಿಕಾರರಿಗೆ, ಹಮಾಲಿ ಕಾರ್ಮಿಕರಿಗೆ ಕೆಲಸ ಸಿಗದಂತಾಗಲಿದೆ. ಕೃಷಿ ರಂಗ ಕಾರ್ಪೋರೇಟೀಕರಣ ಗೊಳ್ಳುವುದರಿಂದ ಯಾಂತ್ರೀಕರಣವೂ ಹೆಚ್ಚಾಗಲಿದ್ದು ಕೂಲಿ ಕಾರ್ಮಿಕರಿಗೆ ಕೃಷಿ ರಂಗದಲ್ಲಿ ಕೆಲಸ ಇಲ್ಲದಂತಾಗಿ ಅವರು ಮತ್ತು ಅವರ ಕುಟುಂಬಗಳು ಬೀದಿಗೆ ಬೀಳಲಿವೆ.

ಕೈಗಾರಿಕಾ ರಂಗದ ಖಾಸಗೀಕರಣ ಮತ್ತು ಕಾರ್ಪೋರೇಟಿಕರಣ: 'ದೇಶದಲ್ಲಿ ಉದಾರೀಕರಣದ ನೀತಿಗಳು ಜಾರಿಯಾದ ಬಳಿಕ ಕೈಗಾರಿಕ ರಂಗದಲ್ಲಿ ಖಾಸಗೀಕರಣ ಮತ್ತು ಕಾರ್ಪೋರೇಟೀಕರಣ ರಭಸದಿಂದ ಅನುಸ್ಠಾನಗೊಳಿಸಲಾಗುತ್ತಾ ಬರಲಾಯಿತು. ತಮ್ಮ ಸರ್ಕಾರದ ಅವಧಿಯಲ್ಲಿ ಖಾಸಗೀಕರಣದ ವೇಗ ಹೆಚ್ಚಾಗಿದೆ. ಈ ದೇಶದ ನೆಲ, ಜಲ, ಇಂಧನ, ಖನಿಜ ಮೊದಲಾದವುಗಳನ್ನು ಉದಾರವಾಗಿ ಅತಿ ಕಡಿಮೆ ದರದಲ್ಲಿ ಕೈಗಾರಿಕೋಧ್ಯಮಿಗಳಿಗೆ ಪೂರೈಸಲು ಸರ್ಕಾರ ಮುಂದಾಯಿತು. ಈ ರೀತಿಯ ಮಾಲಿಕರನ್ನು ಓಲೈಸುವ ನೀತಿಗಳಿಂದಾಗಿ ನಿರುದ್ಯೋಗ ಹೆಚ್ಚಾಗಿದೆ, ಮೀಸಲಾತಿ ಅವಕಾಶಗಳು ಕಡಿತವಾಗಿವೆ. ದೇಶದ ಕಾರ್ಮಿಕ ಕಾನೂನುಗಳಲ್ಲಿ ಸುಧಾರಣೆಗಳನ್ನು ತರುವ ಹೆಸರಿನಲ್ಲಿ ಕಾರ್ಮಿಕ ಕಾನೂನುಗಳನ್ನು ಬಂಡವಾಳದ ಪರವಾಗಿ ಬದಲಾಯಿಸಲಾಗಿದೆ. ದೇಶದ ಕಾರ್ಮಿಕ ವರ್ಗ ಅನೇಕ ಹೋರಾಟಗಳಿಂದ ಗಳಿಸಿದ ಹಕ್ಕುಗಳನ್ನು ಕಿತ್ತುಕೊಳ್ಳುವ ಅಮಾನವೀಯ ಕ್ರಮ ಇದಾಗಿದೆ. ಸುಮಾರು 29 ಕಾರ್ಮಿಕ ಕಾನೂನುಗಳನ್ನು ಬದಲಾಯಿಸಿ ಕೇವಲ 4 ಸಂಹಿತೆಗಳಾಗಿ ಪರಿವರ್ತಿಸಲಾಗಿದೆ.

ದೇಶದ ಕಾರ್ಮಿಕರು ವಿಶೇಷವಾಗಿ ಅಸಂಘಟಿತ ವಲಯದ ಕಾರ್ಮಿಕರು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕೊರೊನಾ ಸಾಂಕ್ರಾಮಿಕಕ್ಕೆ ಬಾಧಿತರಾಗಿ ತೀವ್ರ ಸಂಕಷ್ಟಕ್ಕೆ ಒಳಗಾಗಿ ಕೋಟ್ಯಾಂತರ ಜನ ಕೆಲಸ ಕಳೆದುಕೊಂಡಿದ್ದಾರೆ. ಅವರು ನಿತ್ಯದ ಆದಾಯದಿಂದ ವಂಚಿತರಾಗಿದ್ದಾರೆ. ಊಟಕ್ಕಿಲ್ಲದೆ. ವಾಪಾಸ್ ಊರಿಗೆ ಹೋಗಲು ವಾಹನ ವ್ಯವಸ್ಥೆ ಇಲ್ಲದೆ ನರಕಯಾತನೆ ಅನುಭವಿಸಿದ್ದಾರೆ. ಬೀದಿಗೆ ಬಿದ್ದ ಇವರಿಗೆ ಸಮರ್ಪಕವಾದ ಪರಿಹಾರ, ಅಗತ್ಯ ಉಚಿತ ವೈದ್ಯಕೀಯ ಸೇವೆ ದೊರಕಿಸಲು ಸರ್ಕಾರ ವಿಫಲವಾಗಿದೆ. ಹೀಗಾಗಿ ಲಕ್ಷಾಂತರ ಜನ ಸಾಯುವಂತಾಯಿತು. ಮೃತಪಟ್ಟವರಿಗೆ ಗೌರವಯುತವಾದ ಅಂತ್ಯಸಂಸ್ಕಾರ ಮಾಡುವುದಕ್ಕೂ ಸರಕಾರ ಆಸಕ್ತಿ ವಹಿಸಲಿಲ್ಲ. ಯುದ್ಧ ಯೋಧರಂತೆ ಜೀವದ ಹಂಗುತೊರೆದು ಕೆಲಸ ಮಾಡಿದ ಆಶಾ, ಅಂಗನವಾಡಿ, ಮಕ್ಕಳಿಗೆ ಬಿಸಿಯೂಟ ಪೂರೈಸುವ ತಾಯಂದಿರು, ಗ್ರಾಮಪಂಚಾಯತಿ ನೌಕರರು, ಪುರಸಭಾ ಸಿಬ್ಬಂದಿಗಳು ಮುಂತಾದವರಿಗೆ ಈಗಲಾದರೂ ಕಾಯಂ ನೌಕರರಾಗಿ ಪರಿಗಣಿಸಿ ಸರಿಯಾದ ವೇತನ ಸಿಗುವಂತೆ ಮಾಡುವ ಮಾನವೀಯತೆ ಕೆಲಸವನ್ನು ಈ ಸರ್ಕಾರ ಮಾಡಲಿಲ್ಲ.

ಈ ಹಿಂದಿನ ಕೇಂದ್ರ ಸರ್ಕಾರಗಳು ಆರಂಭಮಾಡಿದ ನವ ಉದಾರೀಕರಣ ನೀತಿಗಳನ್ನೆ ಇವತ್ತಿನ ಸರ್ಕಾರ ತುಂಬಾ ವೇಗವಾಗಿ ಜಾರಿ ಮಾಡುತ್ತಿದೆ. ಸರ್ಕಾರ ಬದಲಾದರು ಜನರ ನಿರೀಕ್ಷೆಗಳನ್ನು ಪೂರೈಸುವ ನಿಟ್ಟಿನಲ್ಲಿ ನೀತಿಗಳು ಬದಲಾಗಿಲ್ಲ.

ಸರ್ಕಾರದ ದುರಾಡಳಿತದ ವಿರುದ್ಧ ದೇಶಾದ್ಯಂತ ಸಿಐಟಿಯು, ಎಐಕೆಎಸ್ ಮತ್ತು ಎಐಎಡಬ್ಲ್ಯೂಯು ಸಂಘಟನೆಗಳು ಜಂಟಿಯಾಗಿ ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಮತ ಪ್ರದರ್ಶನಗಳನ್ನು ನಡೆಸಿವೆ. ದೆಹಲಿ ಗಡಿಗಳಲ್ಲಿ ರೈತರು ನಡೆಸುತ್ತಿರುವ ತ್ಯಾಗಮಯ ಹೋರಾಟ ನಿಲ್ಲುವುದಿಲ್ಲ ಎಂದು ಅವರು ಘೋಷಿಸಿದ್ದಾರೆ. ಅವರ ಹೋರಾಟವನ್ನು ಬೆಂಬಲಿಸುವುದರೊಂದಿಗೆ ಈ ಕೆಳಕಂಡ ಜನಪರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಿದ್ದಾರೆ.

ಪ್ರತಿಭಟನೆಯ ಪ್ರಮುಖ ಬೇಡಿಕೆಗಳು

1. ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಸಂಹಿತೆಗಳು ಹಾಗೂ ಜನ ವಿರೋಧಿ ಕೃಷಿ ಕಾನೂನುಗಳು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆಯನ್ನು ರದ್ದುಪಡಿಸಬೇಕು.
2. ರೈತರ ಎಲ್ಲಾ ಬೆಳೆಗಳಿಗೂ ಖಾತರಿ ಖರೀದಿಯೊಂದಿಗೆ ಸಮಗ್ರ ಉತ್ಪಾದನಾ ವೆಚ್ಚ ಮತ್ತು ಶೇಕಡಾ 50% ಪ್ರಕಾರ (C2+50%) ನಿಗದಿಪಡಿಸಿದ ಕನಿಷ್ಠ ಬೆಂಬಲ ಬೆಲೆ (MSP) ಯನ್ನು ಖಾತರಿಯಾಗಿ ದೊರೆಯುವಂತೆ ಕಾಯ್ದೆ ಮಾಡಬೇಕು. ಮತ್ತು ಋಣಮುಕ್ತ ಕಾಯ್ದೆಯನ್ನು ಅಂಗೀಕರಿಸಿ ಜಾರಿಗೊಳಿಸಬೇಕು.
3. ರಾಜ್ಯ ಸರ್ಕಾರ ಶ್ರೀಮಂತರಿಗೆ ಅನುಕೂಲವಾಗುವಂತೆ ಭೂಸುಧಾರಣ ಕಾಯ್ದೆಗೆ ಮಾಡಿರುವ ತಿದ್ದುಪಡಿಯನ್ನು ಹಿಂಪಡೆಯಬೇಕೆಂದೂ, ಭೂಮಿ ಇಲ್ಲದ ಬಡವರು ಸಾಗುವಳಿ ಮಾಡುತ್ತಿರುವ ಸರ್ಕಾರಿ ಭೂಮಿಗೆ ಸಾಗುವಳಿ ಚೀಟಿನೀಡಿ ಸಕ್ರಮಗೊಳಿಸಬೇಕು ನಿವೇಶನ ರಹಿತರಿಗೆ ನಿವೇಶನ/ವಸತಿ ಹಂಚಿಕೆ ಮಾಡಲು "ಸಮಗ್ರ ಯೋಜನೆ" ಯೊಂದನ್ನು ಘೋಷಣೆ ಮಾಡಬೇಕು.
4. ರಾಜ್ಯದ ಭೂಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆ, ಜಾನುವಾರು ಹತ್ಯಾ ಕಾಯಿದೆಗಳ ಜನವಿರೋಧಿ ತಿದ್ದುಪಡಿಯನ್ನು ರಾಜ್ಯ ಸರ್ಕಾರ ವಾಪಸ್ಸು ಪಡೆಯಬೇಕು.
5. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಖಾದ್ಯ ತೈಲ ಇತ್ಯಾದಿ ಎಲ್ಲಾ ಅಗತ್ಯ ಸರಕುಗಳ ಬೆಲೆಯಲ್ಲಿ ಆಗಿರುವ ತೀವ್ರ ಏರಿಕೆಯನ್ನು ನಿವಾರಿಸಬೇಕು.
6. ಉದ್ಯೋಗ ಕಡಿತ ಅಥವಾ ವೇತನ ಕಡಿತ ಮಾಡಬಾರದು. ಕರೋನಾ ಪಿಡುಗಿನ ಅವಧಿಯಲ್ಲಿ ಆದ ಉದ್ಯೋಗ ಹಾಗೂ ವೇತನ ನಷ್ಟಕ್ಕೆ ಪರಿಹಾರ ನೀಡಬೇಕು. ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಬೇಕು. ಸರ್ಕಾರಿ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು. ಗ್ರಾಮಪಂಚಾಯಿತಿ ನೌಕರರನ್ನು ಖಾಯಂಗೊಳಿಸಬೇಕು. ಹಾಗೂ ಬಾಕಿ ಇರುವ ವೇತನವನ್ನು ಕೂಡಲೇ ಪಾವತಿಸಬೇಕು.
7. ಎಲ್ಲಾ ವಲಸೆ ಹಾಗೂ ಅಸಂಘಟಿತ ವಲಯಗಳ ಕಾರ್ಮಿಕರನ್ನು ನೊಂದಣಿ ಮಾಡಬೇಕು. ಮತ್ತು ಪರಿಹಾರ ನೀಡಬೇಕು. ದಿನಗೂಲಿ, ಗುತ್ತಿಗೆ, ಯೋಜನಾ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಕನಿಷ್ಠ ವೇತನ, ಸಾಮಾಜಿಕ ಸುರಕ್ಷೆ ಮತ್ತು ಪಿಂಚಣಿಯನ್ನು ಖಾತರಿಪಡಿಸಬೇಕು. ಆಹಾರ ಕಿಟ್‌ಗಳನ್ನು ನೀಡಬೇಕು. ಕರ್ನಾಟಕದಲ್ಲಿ ಕಟ್ಟಡ ಕಾರ್ಮಿಕರಿಗೆ ನೀಡಲಾದ ಆಹಾರ ಕಿಟ್, ಟೂಲ್ ಕಿಟ್‌ಗಳ ಅವ್ಯವಹಾರವನ್ನು ತನಿಖೆಗೊಳಪಡಿಸಬೇಕು ಮತ್ತು ಬೋಗಸ್ ಕಾರ್ಡ್ಗಳನ್ನು ನಿಯಂತ್ರಣಗೊಳಪಡಿಸಿ ಎಲ್ಲಾ ನೈಜ ಕಾರ್ಮಿಕರಿಗೆ ಎಲ್ಲ ಸೌಲಭ್ಯಗಳನ್ನು ಖಾತ್ರಿಗೊಳಿಸಬೇಕು.
8. ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಗೆ ಬಡ್ಜೆಟ್ ಅನುದಾನವನ್ನು ಹೆಚ್ಚಿಸಿ ದಿನಕ್ಕೆ 600 ರೂ. ನಂತೆ ಕನಿಷ್ಠ 200 ದಿನಗಳ ಕೆಲಸ ಖಾತರಿಪಡಿಸಬೇಕು. ನಗರ ಉದ್ಯೋಗ ಖಾತರಿ ಕಾಯ್ದೆಯನ್ನು ಅಂಗೀಕರಿಸಬೇಕು. ನರೇಗಾದಲ್ಲಿ ಜಾತಿ ಆಧಾರಿತ ಕೆಲಸ ಹಾಗೂ ಕೂಲಿ ಪಾವತಿಯ ತಾರತಮ್ಯದ ಸಲಹಾ ಪ್ರಸ್ತಾಪವನ್ನು ವಾಪಸ್ಸು ಪಡೆಯಬೇಕು.
9. ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲಾ ಕುಟುಂಬಗಳಿಗೆ ತಿಂಗಳಿಗೆ 10,000 ರೂ. ನಂತೆ ನಗದು ವರ್ಗಾವಣೆ ಮಾಡಬೇಕು.
10. ಕರೋನಾ ಪಿಡುಗಿನ ಅವಧಿ ಇರುವವರೆಗೂ ತಿಂಗಳಿಗೆ ಪ್ರತಿ ವ್ಯಕ್ತಿಗೆ 10 ಕೆಜಿ ಉಚಿತ ಆಹಾರ ಧಾನ್ಯ ಒದಗಿಸಬೇಕು.
11. ಎಲ್ಲ ಮುಂಚೂಣಿ ಕೋವಿಡ್ ದುಡಿಮೆಗಾರರಿಗೆ ಆದ್ಯತೆ ನೀಡಿ ತಕ್ಷಣವೇ ಎಲ್ಲರಿಗೂ ಉಚಿತ ಹಾಗೂ ಸಾರ್ವತ್ರಿಕ ಲಸಿಕೆ ಒದಗಿಸುವುದನ್ನು ಖಾತರಿಪಡಿಸಬೇಕು. ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಎಲ್ಲರೂ ಉಚಿತ ಲಸಿಕೆ ಪಡೆಯುವಂತಾಗಲೂ ಲಸಿಕೆ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಿ, ವಿತರಣೆಯನ್ನು ಸರ್ಕಾರದ ನಿಯಂತ್ರಣಕ್ಕೆ ಒಳಪಡಿಸಬೇಕು.
12. ಆರೋಗ್ಯ ಕ್ಷೇತ್ರಕ್ಕೆ ಜಿಡಿಪಿಯ ಶೇಕಡಾ 6 ರಷ್ಟನ್ನು ನಿಗದಿಪಡಿಸಬೇಕು. ಕೋವಿಡ್ ತೀವ್ರ ಏರಿಕೆ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವಂತಹ ಸಮರ್ಪಕ ಹಾಸಿಗೆ ಸೌಲಭ್ಯ, ಆಕ್ಸಿಜನ್ ಹಾಗೂ ಇತರೆ ವೈದ್ಯಕೀಯ ಸೌಲಭ್ಯಗಳನ್ನು ಖಾತರಿಪಡಿಸಲು ಅಗತ್ಯ ಆರೋಗ್ಯ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕು. ಕೋವೀಡ್ ಮತ್ತು ಕೋವಿಡ್ ಯೇತರ ಕಾರಣದಿಂದ ಮೃತಪಟ್ಟ ಎಲ್ಲ ಕುಟುಂಬಗಳಿಗೂ ಕನಿಷ್ಟ 5 ಲಕ್ಷ ಪರಿಹಾರ ನೀಡಬೇಕು. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಆರೋಗ್ಯ ಮೂಲಭೂತ ಸೌಕರ್ಯಗಳನ್ನು ಬಲಪಡಿಸಬೇಕು.
13. ಖಾಸಗೀಕರಣ ಹಾಗೂ ಸಾರ್ವಜನಿಕ ವಲಯಗಳ ಉದ್ದಿಮೆಗಳ, ಸರ್ಕಾರಿ ಇಲಾಖೆಗಳ ಬಂಡವಾಳ ವಾಪಸ್ಸಾತಿಗಳನ್ನು ನಿಲ್ಲಿಸಬೇಕು. ಕರಾಳ ಅಗತ್ಯ ರಕ್ಷಣಾ ಸೇವಾ ಸುಗ್ರೀವಾಜ್ಞೆ ಅನ್ನು (EDSO) ವಾಪಸ್ಸು ಪಡೆಯಬೇಕು. ಎಂದು ಒತ್ತಾಯಿಸಲಾಗಿದೆ.

ಸರ್ಕಾರವು ಈ ಮೇಲಿನ ಬೇಡಿಕೆಗಳನ್ನು ಈಡೇರಿಸದೇ ಇದ್ದಲ್ಲಿ ದೇಶದ ಜನತೆ ಮತ್ತಷ್ಟು ತೀವ್ರವಾದ ಜನಚಳುವಳಿಗಳಿಗೆ ಮುಂದಾಗಲಿದ್ದಾರೆ ಎಂದು ಪ್ರತಿಭಟನೆಯಲ್ಲಿ ಮಾತನಾಡಿದ ಮುಖಂಡರು ವಿಚಾರವನ್ನು ಮಂಡಿಸಿದರು.


ಚಿತ್ರದುರ್ಗ


ಮುಂಡಗೋಡ


ಬೀದರ್



ಶಿವಮೊಗ್ಗ


ದಾವಣಗೆರೆ

ಖಾಸಗೀ ಬಸ್ಸುಗಳ ಪ್ರಯಾಣ ದರ ವಿಪರೀತ ಏರಿಕೆಯನ್ನು ಖಂಡಿಸಿ ಜಿಲ್ಲಾಡಳಿತದ ಏಕಪಕ್ಷೀಯ ನಿರ್ಧಾರವನ್ನು ವಿರೋಧಿಸಿ ಐಕ್ಯ ಹೋರಾಟ



ಖಾಸಗಿ ಬಸ್ಸ್‌ಗಳ ಪ್ರಯಾಣ ದರದಲ್ಲಿ ವಿಪರೀತ ಏರಿಕೆಯನ್ನು ಹಾಗೂ ದ.ಕ. ಜಿಲ್ಲಾಡಳಿತದ ಏಕಪಕ್ಷೀಯ ನಿರ್ಧಾರವನ್ನು ಕಾಂಗ್ರೆಸ್, ಸಿಪಿಐ(ಎಂ), ಸಿಪಿಐ, ಜಾತ್ಯಾತೀತ ಜನತಾದಳ ಸೇರಿದಂತೆ ವಿದ್ಯಾರ್ಥಿ ಯುವಜನ ಮಹಿಳಾ ದಲಿತ ಸಂಘಟನೆಗಳ ಒಕ್ಕೂಟವು ಪ್ರಬಲವಾಗಿ ಖಂಡಿಸಿದ್ದು, ಸದ್ಯಕ್ಕೆ ದರ ಏರಿಕೆಯನ್ನು ತಡೆಹಿಡಿದು ಕೂಡಲೇ ಸಾರಿಗೆ ಪ್ರಾಧಿಕಾರದ ಸಭೆಯನ್ನು ಕರೆಯಬೇಕೆಂದು ಒತ್ತಾಯಿಸಿದೆ. ಇಲ್ಲದಿದ್ದಲ್ಲಿ ದ.ಕ. ಜಿಲ್ಲೆಯಾದ್ಯಂತ ವ್ಯಾಪಕ ಪ್ರತಿಭಟನೆ, ರಸ್ತೆ ತಡೆ ಚಳುವಳಿ, ಕರಪತ್ರ ಹಂಚಿಕೆ, ಮನೆ ಮನೆ ಪ್ರಚಾರ ಸೇರಿದಂತೆ ಐಕ್ಯ ಹೋರಾಟಗಳನ್ನು ನಡೆಸಲು ನಿರ್ಧರಿಸಲಾಗಿದೆ.

ಕನ್ನಡ ಜಿಲ್ಲೆಯಲ್ಲಿ ಸಂಚರಿಸುವ ಖಾಸಗಿ ಬಸ್ಸುಗಳ ಪ್ರಯಾಣ ದರವನ್ನು ಶೇಕಡಾ 25%ಕ್ಕಿಂತಲೂ ಜಾಸ್ತಿ ಮಾಡಲು ಅವಕಾಶ ನೀಡಿರುವುದು ತೀವ್ರ ಆಕ್ಷೇಪಾರ್ಹವಾಗಿದೆ. ಕಳೆದ ವರ್ಷ ಕೂಡಾ ಬಸ್ಸು ಮಾಲಕರು ಏಕಪಕ್ಷೀಯವಾಗಿ ಈ ಮೊದಲು ನಿರ್ಧರಿಸಲಾದ ದರದ ಮೇಲೆ 25% ಹೆಚ್ಚಳ ಮಾಡಿದ್ದು, ಈ ಬಾರಿ ಜಿಲ್ಲಾಡಳಿತವೇ ಮತ್ತೆ 25% ಹೆಚ್ಚಳಕ್ಕೆ ನೋಟಿಫಿಕೇಶ್ ಮಾಡಿರುವುದರಿಂದ ಬಡ, ಕೂಲಿ ಕಾರ್ಮಿಕರು ಹಾಗೂ ಜನಸಾಮಾನ್ಯರಿಗೆ ತೀವ್ರ ತೊಂದರೆಯಾಗಿದೆ. ದಿನದ ಸಂಪಾದನೆಯ 25% ಭಾಗವನ್ನು ಪ್ರಯಾಣದರಕ್ಕೆ ಖರ್ಚು ಮಾಡಬೇಕಾದ ಅನಿವಾರ್ಯತೆಯನ್ನು ಜಿಲ್ಲಾಡಳಿತ ನಿರ್ಮಿಸಿರುವುದು ತೀವ್ರ ಖಂಡನೀಯ ಎಂದಿವೆ.

ಜಿಲ್ಲೆಯಲ್ಲಿ ಸಾಮಾನ್ಯವಾಗಿ ಪ್ರತೀ ಎರಡು ವರ್ಷಕ್ಕೆ ಒಂದು ಬಾರಿ 7%ದಿಂದ 12.5%ದ ವರೆಗೆ ಹೆಚ್ಚಳಕ್ಕೆ ಅವಕಶವನ್ನು ನೀಡಲಾಗುತ್ತಿತ್ತು. ಈ ರೀತಿ ಹೆಚ್ಚಳ ಮಾಡುವಾಗ ಜಿಲ್ಲಾಧಿಕಾರಿಯವರು ಸಂಘ, ಸಂಸ್ಥೆಗಳು, ರಾಜಕೀಯ ಪಕ್ಷಗಳು ಹಾಗೂ ಬಸ್ಸು ಮಾಲಕರ ಸಭೆಗಳನ್ನು ಕರೆದು ಮುಕ್ತ ಚರ್ಚೆ ನಡೆದು ಸರ್ವ ಸಮ್ಮತದ ದರವನ್ನು ನಿಗದಿ ಮಾಡಲಾಗುತ್ತಿತ್ತು. ಈ ರೀತಿ ಮಾಡುವಾಗ ಮೊದಲಿನ ಎರಡು ಸ್ಟೇಜ್‌ಗಳಲ್ಲಿ ಕೇವಲ 7% ಮಾತ್ರ ಅವಕಾಶ ನೀಡಲಾಗುತ್ತಿತ್ತು. ಆ ರೀತಿ ನಿರ್ಧರಿತವಾಗುವಾಗ ಚಿಲ್ಲರೆ ಪೈಸೆಯನ್ನು ಕೆಳಗಿನ ರೂಪಾಯಿಗೆ ಹೊಂದಾಣಿಕೆ ಮಾಡಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲಾಗುತ್ತಿತ್ತು. ಆದರೆ ಈ ಬಾರಿ ಎಲ್ಲಾ ವಿಧದಲ್ಲೂ ಪ್ರಯಾಣಿಕರ ಜೇಬಿಗೆ ಕತ್ತರಿ ಪ್ರಯೋಗ ಮಾಡಲಾಗಿದೆ. ಈಗಾಗಲೇ ಕಳೆದ ಎರಡು ವರ್ಷಗಳಿಂದ ಕೊರೋನಾದಿಂದ ಉದ್ಯೋಗ ಕಡಿತ, ಕೆಲಸವಿಲ್ಲದೆ ಒಂದು ಹೊತ್ತಿನ ಊಟಕ್ಕಾಗಿ ಪರಿತಪಿಸುವಾಗ ಜಿಲ್ಲಾಡಳಿತಕ್ಕೆ ಕನಿಷ್ಟ ಮಾನವೀಯ ಸ್ಪರ್ಶ ಇಲ್ಲದಿರುವುದು ಆಘಾತಕಾರಿಯಾದ ಘಟನೆಯಾಗಿದೆ ಎಂದಿವೆ.

ಅವೈಜ್ಞಾನಿಕವಾದ ನೋಟಿಫಿಕೇಶನ್


1. ಜಿಲ್ಲಾ ಸಾರಿಗೆ ಪ್ರಾಧಿಕಾರದ ಶಿಫಾರಸ್ಸಿನ ಮೇರೆಗೆ ಘೋಷಿಸಿರುವ ನೋಟಿಫಿಕೇಶನ್ ಅವೈಜ್ಞಾನಿಕವಾಗಿದೆ. ಇದರಲ್ಲಿ ಮೊದಲಿನ ಎರಡು ಸ್ಟೇಜ್‌ಗಳ ದರ ಈಗ ಚಾಲ್ತಿಯಲ್ಲಿರುವ ಕೆ.ಎಸ್.ಆರ್.ಟಿ.ಸಿ. ದರಕ್ಕೆ ಸಮಾನಾಗಿ ಇದೆ. ಅನಂತರ ಯಾವ ಕಾರಣಕ್ಕಾಗಿ ವಿಪರೀತವಾದ ದರವನ್ನು ಏರಿಸಲಾಗಿದೆ ಎಂಬುದು ತಿಳಿದು ಬರುತ್ತಿಲ್ಲ.
2. ಈ ಮೊದಲು ನಗರ, ಗ್ರಾಮಾಂತರ ಹಾಗೂ ಸರ್ವಿಸ್ಸು, ಎಕ್ಸ್‌ಪ್ರೆಸ್ ಬಸ್ಸು ದರ ಎಂಬ ವಿಭಾಗವಿತ್ತು. ಸಿಟಿ ಬಸ್ಸಿನಲ್ಲಿ ಇದ್ದ ನಗರ ಮತ್ತು ಗ್ರಾಮಾಂತರ ಎಂಬ ವರ್ಗೀಕರಣವನ್ನು ಕೈಬಿಟ್ಟಿರುವುದು ಮಾಲಕರ ಪರವಾದ ಧೋರಣೆಯಾಗಿದೆ. ಗ್ರಾಮಾಂತರ ಸಾರಿಗೆಯಲ್ಲಿ 4 ಕಿ.ಮೀ. ವರೆಗೆ ಪ್ರಥಮ ಸ್ಟೇಜ್ ಇತ್ತು. ಈಗ ಅದನ್ನು 2 ಕಿ.ಮೀ.ಗೆ ಇಳಿಸಲಾಗಿದೆ. ಇದು ತೀರಾ ಖಂಡನೀಯ.
3. ಮೂರನೆಯದಾಗಿ ಈಗ ಘೋಷಿಸಿದ ಸಿಟಿ ಬಸ್ಸು ದರಪಟ್ಟಿಯಲ್ಲಿ ಎರಡನೇ ಸ್ಟೇಜನ್ನು ರದ್ದು ಮಾಡಿ ಅದರ ಮುಂದಿನ ಸ್ಟೇಜ್‌ನ ದರ ವಸೂಲಿಗೆ ಅವಕಾಶ ಕಲ್ಪಿಸಲಾಗಿದೆ. ಇದು ಕೂಡಾ ಮಾಲಕರ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಮಾಡಿರುವ ಕ್ರಮವಾಗಿದೆ.
4. ಬಸ್ಸು ಮಾಲಕರು ನಷ್ಟದಲ್ಲಿ ಉದ್ಯಮ ನಡೆಸುತ್ತಿದ್ದಾರೆ ಎಂಬ ಮಾಮೂಲೀ ಹೇಳಿಕೆಯನ್ನು, ಡೀಸೆಲ್, ಬಿಡಿ ಭಾಗಗಳ ದರ ಏರಿಕೆಯನ್ನು ಕಾರಣವನ್ನಾಗಿ ತೋರಿಸುತ್ತಿದ್ದಾರೆ. ಇದು ಸತ್ಯವೇ ಆಗಿದ್ದಲ್ಲಿ ಬಾಕಿ ಉಳಿದಿರುವ ನರ್ಮ್ ಬಸ್ಸುಗಳ ಸಂಚಾರವನ್ನು ತಡೆ ಹಿಡಿಯಲು ಹೈಕೋರ್ಟಿನಲ್ಲಿ ಪ್ರಕರಣವನ್ನು ವಾದಿಸಲು ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಉದ್ದೇಶವಾದರೂ ಏನು? ಲಕ್ಷಾಂತರ ರೂಪಾಯಿಯಲ್ಲಿ ಬಸ್ಸಿನ ಪರವಾನಿಗೆ ಅಕ್ರಮವಾಗಿ ಮಾರಾಟವಾಗುವುದು ಬಸ್ಸು ಉದ್ಯಮ ಸಾಲದಿಂದ ಇರುವ ಕಾರಣಕ್ಕಾಗಿಯಂತೂ ಅಲ್ಲ.
5. ಇಡೀ ದಿನದಲ್ಲಿ ಹೆಚ್ಚುವರಿ ಖರ್ಚಿನ ಸಂಪೂರ್ಣ ಪ್ರಮಾಣವನ್ನು ಬಸ್ಸು ಮಾಲಕರು ಹಾಗೂ ಜಿಲ್ಲಾಡಳಿತ ಪ್ರತಿಯೊಂದು ಟಿಕೇಟಿನ ಮೇಲೆ ಹೊರಿಸುವುದು ಎಷ್ಟು ಸರಿ?
6. ರಾಜ್ಯದ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ, ಕೇರಳದ ಹಾಗೂ ತಮಿಳುನಾಡಿನ ಸರಕಾರಿ ಮತ್ತು ಖಾಸಗಿ ಬಸ್ಸು ದರಗಳಲ್ಲಿ ಕನಿಷ್ಠ ದರ ರೂ. 5 ಇದೆ. ಅಲ್ಲಿನ ಬಸ್ಸು ಮಾಲಕರಿಗೆ ಲಾಭವಾಗುವಾಗ ಇಲ್ಲಿಯ ಬಸ್ಸು ಮಾಲಕರಿಗೆ ಹೇಗೆ ತಾನೇ ನಷ್ಟ ಸಂಭವಿಸಲು ಸಾಧ್ಯ?

ಒಟ್ಟಿನಲ್ಲಿ ನೂರಾರು ಸಂಖ್ಯೆಯಲ್ಲಿರುವ ಬಸ್ಸು ಮಾಲಕರ ಸಂಕಷ್ಟದ ಬಗ್ಗೆ ಭಾರೀ ಕಾಳಜಿ ವಹಿಸಿರುವ ಜಿಲ್ಲಾಡಳಿತವು ಈ ಜಿಲ್ಲೆಯ ಲಕ್ಷಾಂತರ ಜನತೆಯ ಸಂಕಷ್ಟದ ಬಗ್ಗೆ ದಿವ್ಯಮೌನ ವಹಿಸಿರುವುದು ಎಷ್ಟು ಸರಿ? ಈ ಬಗ್ಗೆ ಒಕ್ಕೂಟದ ನಿಯೋಗವು ದ.ಕ. ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಮನವಿಯನ್ನು ಅರ್ಪಿಸಲಾಯಿತು. ಇದಕ್ಕೆ ಜಿಲ್ಲಾಡಳಿತವು ಕೂಡಲೇ ಸಕಾರಾತ್ಮಕವಾಗಿ ಸ್ಪಂದಿಸದಿದ್ದಲ್ಲಿ ದ.ಕ. ಜಿಲ್ಲೆಯಾದ್ಯಂತ ವ್ಯಾಪಕ ಪ್ರತಿಭಟನೆ, ರಸ್ತೆ ತಡೆ ಚಳುವಳಿ, ಕರಪತ್ರ ಹಂಚಿಕೆ, ಮನೆ ಮನೆ ಪ್ರಚಾರ ಸೇರಿದಂತೆ ತೀವ್ರ ರೀತಿಯ ಹೋರಾಟಗಳನ್ನು ನಡೆಸಬೇಕಾದೀತು ಎಂಬ ಎಚ್ಚರಿಕೆಯನ್ನು ನೀಡಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬಜಾಲ್ ಶಾಖೆಯಲ್ಲಿ ಗ್ರಾಹಕರ ಕೆಲಸದ ನಿರ್ಲಕ್ಷ್ಯ, ಲೋಪಗಳ ಸರಿಪಡಿಸಲು ಡಿವೈಎಫ್ಐ ಒತ್ತಾಯ

ಮಂಗಳೂರು ನಗರ ಹೊರವಲಯ ಬಜಾಲ್ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ ಗ್ರಾಹಕರಿಗೆ ಅಗತ್ಯ ಸೇವೆ ನೀಡುವಲ್ಲಿ ಸಿಬ್ಬಂದಿಗಳ ನಿರ್ಲಕ್ಷತನ ಹಾಗೂ ವಿಳಂಬ ನೀತಿಯಿಂದಾಗಿ ಸ್ಥಳೀಯ ಜನಸಾಮಾನ್ಯರು, ವಿದ್ಯಾರ್ಥಿ, ಯುವಜನರು ಉಳಿತಾಯ ಖಾತೆ ತೆರೆಯುವಲ್ಲಿ ಬಹಳಷ್ಟು ಸಮಸ್ಯೆಗಳನ್ನು ಅನುಭವಿಸುತ್ತಿರುವ ದೂರುಗಳು ಕೇಳಿ ಬರುತ್ತಿದ್ದು ಇಂತಹ ಹಲವು ಸಮಸ್ಯೆಗಳನ್ನು ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳು ಕೂಡಲೇ ಸರಿಪಡಿಸಬೇಕೆಂದು ಡಿವೈಎಫ್ಐ ಪಕ್ಕಲಡ್ಕ ಘಟಕ ಒತ್ತಾಯಿಸಿದೆ.

ಯಾವುದೇ ಬ್ಯಾಂಕಾಗಲಿ, ಅದರ ಪ್ರಮುಖ ಗುರಿ ಗ್ರಾಹಕನಿಗೆ ಸೇವೆ ಸಲ್ಲಿಸುವುದೇ ಆಗಿದೆ. ಗ್ರಾಹಕನೇ ಬ್ಯಾಂಕಿನ ಬಂಡವಾಳ ಆದರೆ ಬಜಾಲ್ ಪ್ರದೇಶದ ಭಾರತೀಯ ಸ್ಟೇಟ್ ಬ್ಯಾಂಕ್ ಈ ಭಾಗದ ಸುತ್ತಮುತ್ತಲಿನ ಗ್ರಾಹಕರಿಗೆ ಸರಿಯಾದ ಸೇವೆಯನ್ನು ನೀಡದೆ ವಿನಾ ಕಾರಣ ಸತಾಯಿಸುವಂತಹ ಘಟನೆಗಳು ದಿನ ನಿತ್ಯ ನಡೆಯುತ್ತಿದೆ. ಕನಿಷ್ಟ ಹೊಸ ಖಾತೆ ತೆರೆಯುವ ಕೆಲಸಗಳಿಗೂ ತಿಂಗಳುಗಳ ಕಾಲ ವಿಳಂಬಿಸುವಂತಹ ದೂರುಗಳು ಜನ ಸಾಮಾನ್ಯರಿಂದ ಕೇಳಿಬರುತ್ತಿದೆ. ಇತ್ತೀಚೆಗೆ ಬಹಳಷ್ಟು ವಿದ್ಯಾರ್ಥಿಗಳು ತಮ್ಮ ಶಾಲೆ ವಿಚಾರಗಳಿಗೆ ಸಂಬಂಧಿಸಿ ಹೊಸ ಉಳಿತಾಯ ಖಾತೆ ತೆರೆಯಲು, ಮತ್ತು ಇತರೆ ಸಣ್ಣ ಪುಟ್ಟ ಕೆಲಸಗಳಿಗೆ ಸ್ಥಳೀಯ ಬ್ಯಾಂಕ್ ಮೊರೆ ಹೋದರೆ ಅಂತಹ ವಿದ್ಯಾರ್ಥಿಗಳನ್ನು ಮತ್ತವರ ಪೋಷಕರನ್ನು ವಿನಾಕಾರಣ ಸತಾಯಿಸುವುದು ಮತ್ತವರ ಖಾತೆ ತೆರೆಯುವ ಕೆಲಸದಲ್ಲಿ ಸಿಬ್ಬಂದಿಗಳ ನಿರ್ಲಕ್ಷತನ ಹಾಗೂ ವಿಳಂಬ ನೀತಿಯಿಂದಾಗಿ ಜನಸಾಮಾನ್ಯರು, ವಿದ್ಯಾರ್ಥಿಗಳು ಬಹಳಷ್ಟು ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಒಂದೇ ಒಂದು ದಿನದಲ್ಲಾಗುವ ಉಳಿತಾಯ ಖಾತೆ ತೆರೆಯುವ ಕ್ರಮಗಳಿಗೂ ಸುಮಾರು ನಾಲಕ್ಕು ತಿಂಗಳುಗಳವರೆಗೂ ನೀಡದೆ ಸತಾಯಿಸುತ್ತಿರುವುದು ಖಂಡನೀಯ. ಈ ಬಗ್ಗೆ ಡಿವೈಎಫ್ಐ ಸಂಘಟನೆ ಈಗಾಗಲೇ ಭಾರತೀಯ ಸ್ಟೇಟ್ ಬ್ಯಾಂಕಿನ ಮೇಲಾಧಿಕಾರಿಯವರ ಗಮನಕ್ಕೆ ತರಲಾಗಿದೆ. ಇಂತಹ ಹಲವು ಗಂಭೀರ ಸಮಸ್ಯೆಗಳನ್ನು ಸರಿಪಡಿಸಲು, ಬ್ಯಾಂಕ್ ಸಿಬ್ಬಂದಿಗಳು ಗ್ರಾಹಕರಲ್ಲಿ ಸೇವಾ ಮನೋಭಾವದಿಂದ ವರ್ತಿಸುವಂತೆ ಮತ್ತು ಗ್ರಾಹಕರ ಕೆಲಸಗಳನ್ನು ಶೀಘ್ರಗತಿಯಲ್ಲಿ ಇತ್ಯರ್ಥಗೊಳಿಸುವಂತೆ ಡಿವೈಎಫ್ಐ ಬಜಾಲ್ ಪಕ್ಕಲಡ್ಕ ಘಟಕವು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದೆವೆ ಎಂದು ಡಿವೈಎಫ್ಐ ಬಜಾಲ್ ಪಕ್ಕಲಡ್ಕ ಕಾರ್ಯದರ್ಶಿ ಧೀರಾಜ್ ಬಜಾಲ್ ತಿಳಿದ್ದಾರೆ.



ಆಗಸ್ಟ್ 17 ರಿಂದ ಗ್ರಾ.ಪಂ ನೌಕರರ ಅನಿರ್ದಿಷ್ಟ ಧರಣಿ- ಜಿ. ರಾಮಕೃಷ್ಣ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಆಗಸ್ಟ್ 17 ರಿಂದ ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಅನಿರ್ದಿಷ್ಟ ಧರಣಿ ನಡೆಯಲಿದ್ದು ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿದೆ ಎಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ರಾಮಕೃಷ್ಣ ಮನವಿ ಮಾಡಿದರು

ನಗರದ ಸರಕಾರಿ ನೌಕರರ ಭವನದಲ್ಲಿ ಗ್ರಾಮ ಪಂಚಾಯತಿ ನೌಕರರ ಸಂಘದ ಜಿಲ್ಲಾ ಮಟ್ಟದ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅವರು ದಿನನಿತ್ಯ ಹಳ್ಳಿಗಳಲ್ಲಿ ಜನರ ಸೇವೆ ಮಾಡುತ್ತೇವೆ ಆದರೆ ನಮಗೆ ಸರಿಯಾದ ಸಂಬಲ ನೀಡುವಂತೆ ಮೇಲಾಧಿಕಾರಿಗಳ ಆದೇಶವಿದ್ದರೂ ಪಿಡಿಒಗಳು ಸಂಬಳ ಸೌಲಭ್ಯಗಳನ್ನು ನೀಡುತ್ತಿಲ್ಲ ಇದರ ಬಗ್ಗೆ ಸರಕಾರದ ಗಮನಕ್ಕೆ ತಂದರು ಯಾವುದೇ ಪ್ರಯೋಜನವಾಗುತ್ತಾ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸರಕಾರವು ಗ್ರಾಮ ಪಂಚಾಯತಿ ನೌಕರರ ಯೋಗಕ್ಷೇಮ ವಿಚಾರಿಸುವುದು ಅವರ ಜವಾಬ್ದಾರಿ ಕೊರೊನಾ ಸಂದರ್ಭದಲ್ಲಿ ಅವರ ಸೇವೆ ಅನನ್ಯವಾಗಿದೆ ಆದರೆ ಅಂತಹ ನೌಕರರನ್ನು ಮರೆತಿದ್ದಾರೆ ಸರಕಾರ ಬಿಲ್ ಕಲೆಕ್ಟರ್ ಮತ್ತು ಗುಮಾಸ್ತ ಹುದ್ದೆಯಿಂದ ಗ್ರೇಡ್ –2 ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕ ಹುದ್ದೆಗೆ ಬಡ್ತಿ ನೀಡಬೇಕು ಹಾಗೂ 15 ನೇ ಹಣಕಾಸು ಯೋಜನೆಯಡಿ ಬಾಕಿವಿರುವ ವೇತನವನ್ನು ಈ ಕೂಡಲೇ ನೀಡುಬೇಕೆಂದು ಒತ್ತಾಯಿಸುವುದು ನಮ್ಮ ಧರಣಿಯ ಉದ್ದೇಶವಾಗಿದೆ ಎಂದರು.

ಗ್ರಾಮ ಪಂಚಾಯತಿ ನೌಕರರ ಸಂಘದ ಜಿಲ್ಲಾ ಗೌರವ ಅಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿ ಸರಕಾರದ ಆದೇಶದಂತೆ 15 ನೇ ಹಣಕಾಸು ಯೋಜನೆಯಡಿ ಆಡಳಿತ ವೆಚ್ಚದಲ್ಲಿ ಶೇ10, ಹಾಗೂ ಸ್ಥಳೀಯ ತೆರಿಗೆ ಸಂಗ್ರಹದಲ್ಲಿ ಶೇ.40 ಹಣವನ್ನು ಸಿಬ್ಬಂದಿ ವೇತನಕ್ಕೆ ಉಪಯೋಗಿಸಬೇಕು 2019 ಜುಲೈ 23 ರ ಸರ್ಕಾರಿ ಆದೇಶ ಪ್ರಕಾರ ಬಾಕಿ ಉಳಿದ ಎಲ್ಲಾ ನೌಕರರಿಗೂ ಜಿಲ್ಲಾ ಪಂಚಾಯಿತಿ ಅನುಮೋದನೆ ನೀಡಬೇಕು. ಕರವಸೂಲಿಗಾರ, ಗುಮಾಸ್ತ, ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಸಿ ಗ್ರೂಪ್ ಹಾಗೂ ವಾಟರ್ ಮ್ಯಾನ್, ಜವಾನ, ಸ್ವಚ್ಚತಗಾರರನ್ನು ಡಿ ಗ್ರೂಪ್ ನೌಕರರೆಂದು ಪರಿಗಣಿಸಿ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಗ್ರಾಮ ಪಂಚಾಯಿತಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರದ ಆದೇಶದಂತೆ ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಿಐಟಿಯು ಸಂಯೋಜಿತ ಗ್ರಾಮ ಪಂಚಾಯತಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಅಮರನಾರಾಯಣ, ಕಾರ್ಯದರ್ಶಿ ಯಲ್ಲಪ್ಪ, ಖಜಾಂಚಿ ಕೇಶವರಾವ್, ಸಂಘಟನಾ ಕಾರ್ಯದರ್ಶಿ ವಿಜಯಕೃಷ್ಣ ಸೇರಿದಂತೆ ನೌಕರರು ಭಾಗವಹಿಸಿದ್ದರು.

ಬೊಮ್ಮಾಯಿ ಅವರೇ! 'ಕಮಲಾಭಿಮುಖಿ'ಯಾಗಬೇಡಿ, 'ಅಭಿವೃದ್ಧಿಮುಖಿ'ಯಾಗಿ!

ಅತಿಥಿ ಅಂಕಣ



ಪ್ರೊ. ಟಿ.ಆರ್. ಚಂದ್ರಶೇಖರ

ಬೊಮ್ಮಾಯಿ ಅವರಾದರೂ (ಆಫರೇಶನ್) 'ಕಮಲಾಭಿಮುಖಿ'ಗಳಾಗದ 'ಅಭಿವೃದ್ಧಿಮುಖಿ'ಯಾಗುತ್ತಾರೆ ಎಂದು ಭಾವಿಸಲಾಗಿದೆ. ಕರ್ನಾಟಕದ ಅಭಿವೃದ್ಧಿಗೆ ಮಾದರಿಯಾಗಬೇಕಾದುದು 'ಕೇರಳ'ವೇ ವಿನಾ ಉತ್ತರ ಪ್ರದೇಶ–ಗುಜರಾತ್‌ಗಳಲ್ಲ. ಜನಸಂಖ್ಯೆಯ ಬೆಳವಣಿಗೆಯನ್ನು ಕರ್ನಾಟಕವು ತಡೆದುದು ಮುಗಿದಿದೆ. ಆದರೂ ಪರಿವಾರದ ಬಾಯಿ ಚಪಲ ಚೆನ್ನಿಗರು ಎರಡು ಮಕ್ಕಳ ಜನಸಂಖ್ಯಾ ನೀತಿಯನ್ನು ಅನುಸರಿಸುವುದರ ಬಗ್ಗೆ ಅಬ್ಬರಿಸುತ್ತಿದ್ದಾರೆ. ಇವರ ಅಭಿವೃದ್ಧಿ ಬಗೆಗಿನ ಅಜ್ಞಾನಕ್ಕೆ ಏನನ್ನಬೇಕು? ಇಂತಹ ಪ್ರಹಸನಗಳನ್ನು ಇನ್ನಾದರೂ ಕೊನೆಗೊಳಿಸಿ. ಅನೇಕ ಅಭಿವೃದ್ಧಿ ಸೂಚಿಗಳಲ್ಲಿ ಕರ್ನಾಟಕವು ಹಿಂದಿ ಜಗತ್ತಿಗಿಂತ ಸಾಕಷ್ಟು ಮುಂದಿದೆ. ರಾಜ್ಯದಲ್ಲಿ 1970–80ರ ದಶಕಗಳಲ್ಲಿ ಮುಂಚೂಣಿಯಲ್ಲಿದ್ದ ಕರ್ನಾಟಕದ ಕೃಷಿಯು ಇಂದು ನಿತ್ರಾಣ ಸ್ಥಿತಿಯಲ್ಲಿದೆ. ಇದರ ಪುನಶ್ಚೇತನವು ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಆದ್ಯತೆಯಾಗಬೇಕು. ಕೃಷಿ ಎಂದರೆ ಅಣೆಕಟ್ಟೆಗಳು, ರಾಸಾಯನಿಕ ಗೊಬ್ಬರ, ಕಬ್ಬು–ಬತ್ತ ಬೆಳೆಯುವುದು ಮಾತ್ರವಲ್ಲ. ಇಲ್ಲಿ ಹೈನುಗಾರಿಕೆಯಿದೆ, ಜಾನುವಾರು ಆರ್ಥಿಕತೆಯಿದೆ, ಕೃಷಿ ಅರಣ್ಯಗಾರಿಕೆಯಿದೆ, ಜಾನುವಾರು–ಕುರಿ–ಕೋಳಿ ಸಾಕಣಿಕೆಯಿದೆ, ಮೀನುಗಾರಿಕೆಯಿದೆ. ಇವುಗಳಿಗೆ ಹೋಲಿಸಿದರೆ ಪರಿಸರಕ್ಕೆ ವಿಷವುಣಿಸುವ, ಜನರ ಆರೋಗಕ್ಕೆ ಕಡುಮಾರಕವಾದ' ಗಣಿ–ಕಲ್ಲು ಗಣಿಗಾರಿಕೆಯ ಕೊಡುಗೆ ರೂ. 7827 ಕೋಟಿ(ಶೇ. 0.52). ಹಾಗಾದರೆ ಯಾವುದಕ್ಕೆ ಆದ್ಯತೆ ನೀಡಬೇಕು?



CHART 1
Relative human development ranking of 17 major Indian states

PLAIN FACTS

	HDI RANK 2007-08*	HDI RANK 2014	CHANGE
Kerala	1	1	↔
Himachal Pradesh	2	2	↔
Tamil Nadu	5	3	↑
Maharashtra	4	4	↔
Punjab	3	5	↓
Haryana	6	6	↔
Jammu and Kashmir	7	7	↔
Karnataka	9	8	↑
Andhra Pradesh	11	9	↑
Gujarat	8	10	↓
West Bengal	10	11	↓
Rajasthan	13	12	↑
Odisha	17	13	↑
Madhya Pradesh	15	14	↑
Assam	12	15	↓
Uttar Pradesh	14	16	↓
Bihar	16	17	↓

*the methodology to calculate 2007-08 HDI was slightly different, owing to data constraints for education, as explained by Mehrotra and Gandhi (2012) here: www.iamrindia.gov.in/IHDR-epw.pdf

Sources: Institute of Applied Manpower Research (for 2007-08 HDI); RBI (for state per capita income); Desai, Sonalde, and Reeve Vanneman. India Human Development Survey-II, 2011-12 (for education indicators); SRS Based Life Tables 2009-13 and Mint calculations

ಕೋಷ್ಟಕ–1 ಮಾನವ ಅಭಿವೃದ್ಧಿ ಸೂಚಕ ದಲ್ಲಿ ಕರ್ನಾಟಕ ಯು.ಪಿ. ಗುಜರಾತ್, ಉತ್ತರ ಭಾರತದ ಇತರ ರಾಜ್ಯಗಳಿಗಿಂತ ಮುಂದಿದೆ. ಅವುಗಳಿಂದ ಕಲಿಯುವುದು ಏನೂ ಇಲ್ಲ!

ಇಂದಿನ ಆಳುವ ವರ್ಗಕ್ಕೆ/ಪಕ್ಷಕ್ಕೆ ಅಭಿವೃದ್ಧಿ ಆದ್ಯತೆಯ ಸಂಗತಿಯಾಗಿಲ್ಲ. ಇವರ ವಕ್ತಾರರಾದ ಸಂಬಿತ್ ಪಾತ್ರ ಒಮ್ಮೆಯಾದರೂ ಅಭಿವೃದ್ಧಿಯ ಬಗ್ಗೆ, ಉದ್ಯೋಗದ ಬಗ್ಗೆ, ಆಹಾರ ಭದ್ರತೆಯ ಬಗ್ಗೆ ಟಿ.ವಿ. ಕಾರ್ಯಕ್ರಮಗಳಲ್ಲಿ ಅಬ್ಬರಿಸಿದ್ದು–ಚರ್ಚಿಸಿದ್ದು ಉಂಟ? ಕಾರ್ಮಿಕರ ದುಡಿಮೆಯಾಗಲಿ, ರೈತಾಪಿ ವರ್ಗದ ಕಷ್ಟಕಾರ್ಪಣ್ಯಗಳಾಗಲಿ, ಮಹಿಳೆಯರ ದುಸ್ಥಿತಿಯಾಗಲಿ, ದಲಿತರ ಜಾತಿ ಅಸಮಾನತೆಯಾಗಲಿ–ಶೋಷಣೆಯಾಗಲಿ, ಹಿಂದುಳಿದ ವರ್ಗಗಳ–ಬುಡಕಟ್ಟು ವರ್ಗದ ದುಮ್ಮಾನವಾಗಲಿ, ಮಕ್ಕಳ ಅಪೌಷ್ಟಿಕತೆಯಾಗಲಿ – ಇಂತಹ ಜನಮುಖಿಯಾದ ಸಮಸ್ಯೆಗಳು ಆಳುವ ಪಕ್ಷಕ್ಕೆ ಮುಖ್ಯವಾಗಿಲ್ಲ. ಈ ದೇಶದ ಬಡಕೂಲಿಕಾರರ ಉದ್ಯೋಗದ ಹಕ್ಕನ್ನು ಮಾನ್ಯ ಮಾಡಿದ ಮನರೇಗಾ(ಎಂ.ಜಿ.ಎನ್.ಆರ್.ಈ.ಜಿ.ಎ) ಕಾರ್ಯಕ್ರಮದ ಬಗ್ಗೆ ಸಂಸತ್ತಿನಲ್ಲಿ ನಮ್ಮ ಪ್ರಧಾನಮಂತ್ರಿ ಏನು ಹೇಳಿದರು? ತಮ್ಮ ಪಕ್ಷದ ಹೊಟ್ಟೆ ತುಂಬಿದ ಎಂ.ಪಿ.ಗಳು ಮೇಜು ಕುಟ್ಟಿ ವ್ಯಕ್ತ ಪಡಿಸಿದ ಹರ್ಷೋದ್ಗಾರಗಳ ನಡುವೆ 'ಇದೊಂದು ಮಾನ್ಯುಮೆಂಟಲ್ ವೈಫಲ್ಯ' ಎಂದು ಘೋಷಿಸಿದರು. ಲಾಕ್‌ಡೌನ್ ಸಂದರ್ಭದಲ್ಲಿನ ಕಡುಬಡ ಕೂಲಿಕಾರರ/ವ;ಲಸೆ ಕಾರ್ಮಿಕರ ಬದುಕನ್ನು ಕಾದಿದ್ದು ಇದೇ ಕಾರ್ಯಕ್ರಮ ಎಂಬುದನ್ನು ಮರೆಯುವ ಹಾಗಿಲ್ಲ. ಇದರ ಮಹತ್ವವನ್ನು ಅರಿತುಕೊಂಡು 'ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂಬಂತೆ ಇದೇ ಸರ್ಕಾರವು 2020–21ರಲ್ಲಿ ಸದರಿ ಕಾರ್ಯಕ್ರಮಕ್ಕೆ ಬಜೆಟ್ಟಿನಲ್ಲಿ ನೀಡಲಾಗಿದ್ದ ಅನುದಾನ ಸಾಕಾಗದಿದ್ದಾಗ ಹೆಚ್ಚುವರಿಯಾಗಿ ಅನುದಾನ ನೀಡಲಾಯಿತು(ಎಂಜಿಎನ್‌ಆರ್‌ಈಜಿಎ:2020–21ರ ಬಜೆಟ್ ಅನುದಾನ ರೂ.61500 ಕೋಟಿ. ಪರಿಷ್ಕೃತ ಅನುದಾನ: ರೂ. 1,11,500 ಕೋಟಿ). 'ಹಕ್ಕುಗಳು' ಭಾರತೀಯ ಪರಂಪರೆಯ ಭಾಗವಲ್ಲ ಎನ್ನುವ ಇಂದಿನ ಆಳುವ ಪಕ್ಷಕ್ಕೆ ಅಭಿವೃದ್ಧಿ ಎನ್ನುವುದು ವಾಮವಾದಿಗಳ ಕಾರ್ಯಕ್ರಮವಾಗಿ ಕಾಣುತ್ತದೆ. ಈ ಕಾರಣಕ್ಕೆ ಇಡೀ ವಿಶ್ವದಲ್ಲಿ ಅನುಕರಣೀಯ ಅಭಿವೃದ್ಧಿ ಮಾದರಿಯಾಗಿ ಹೆಸರು ಗಳಿಸಿರುವ ಕೇರಳ ಮಾದರಿಯ ಬಗ್ಗೆ ಪ್ರಧಾನಮಂತ್ರಿ ಸೌಜನ್ಯಕ್ಕಾದರೂ ಕಳೆದ 7 ವರ್ಷಗಳಲ್ಲಿ ಒಂದೇ ಒಂದು ಮೆಚ್ಚುಗೆಯ ಮಾತನಾಡಿಲ್ಲ.

'ಕಲ್ಯಾಣ ಕರ್ನಾಟಕ' ಎಂದರೇನು?

ಕರ್ನಾಟಕದಲ್ಲಿ ಕಳೆದ ಎರಡು–ಮೂರು ವರ್ಷಗಳ ಕಾಲಾವಧಿಯಲ್ಲಿ ಸರ್ಕಾರವು ಅಭಿವೃದ್ಧಿಯನ್ನು ಮೂಲೆಗುಂಪಾಗಿಸಿರುವುದನ್ನು ಕಾಣಬಹುದು. ಈ ಸರ್ಕಾರದಲ್ಲಿ ಒಬ್ಬರು ಲೌ–ಜಿಹಾದ್ ನಿಷೇಧಿಸಬೇಕು ಎಂದರೆ ಮತ್ತೊಬ್ಬರು ಉತ್ತರ ಪ್ರದೇಶದಲ್ಲಿ ಜಾರಿಯಾಗಿರುವ ಎರಡು ಮಕ್ಕಳು ಜನಸಂಖ್ಯಾ ನೀತಿಯನ್ನು ಅನುಸರಿಸಬೇಕು ಎನ್ನುತ್ತಾರೆ. ಮಸೀದಿಗಳನ್ನು ಕಡವಿ ಗುಡಿ ಕಟ್ಟುವುದರ ಬಗ್ಗೆ ಕೆಲವರು ಮಾತನಾಡುತ್ತಾರೆ. ಜನರ ಭಾವನೆಗಳ ಜೊತೆ ಆಟವಾಡುವುದನ್ನು ಕರಗತ ಮಾಡಿಕೊಂಡಿರುವ ಈ ಸರ್ಕಾರವು 2019ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶವಕ್ಕೆ 'ಕಲ್ಯಾಣ ಕರ್ನಾಟಕ' ಎಂದು ನಾಮಕರಣ ಮಾಡಿತು. ಆದರೆ ಎಲ್ಲಿಯೂ 'ಕಲ್ಯಾಣ ಕರ್ನಾಟಕ' ಎಂದರೇನು ಎಂಬುದನ್ನು ಬಸವ ಸಂವಿಧಾನದ ಚೌಕಟ್ಟಿನಲ್ಲಿ ನಿರ್ವಚಿಸಲಿಲ್ಲ. ಉದಾ: ಎನ್‌ಎಚ್‌ಎಫ್‌ಎಸ್–5(2019–2020)ರ ವರದಿ ಪ್ರಕಾರ ರಾಯಚೂರು, ಕಲಬುರಗಿ, ಕೊಪ್ಪಳ, ಯಾದಗಿರಿ ಜಿಲ್ಲೆಗಳಲ್ಲಿನ 0–6 ವಯೋಮಾನದ ಒಟ್ಟು ಮಕ್ಕಳಲ್ಲಿ ಶೇ. 70 ಕ್ಕಿಂತ ಅಧಿಕ ಮಕ್ಕಳು (ಅನಿಮಿಯಾ) ರಕ್ತಹೀನತೆಯಿಂದ ನರಳುತ್ತಿದ್ದಾರೆ. 'ಕಲ್ಯಾಣ'ದ ಬಗ್ಗೆ ಮಾತನಾಡುವ ಸರ್ಕಾರದ ಯಾರಾದರೂ ಒಬ್ಬ ಸಚಿವರು ಇಂತಹ ಸಮಸ್ಯೆಯ ಬಗ್ಗೆ ಮಾತನಾಡಿದ್ದು ಉಂಟೆ?. ಇದೇನಾ ನಿಮ್ಮ 'ಕಲ್ಯಾಣ ಕರ್ನಾಟಕ'?. ಕಲ್ಯಾಣ ಕರ್ನಾಟಕದ ಜನರ ಬದುಕನ್ನು ಉತ್ತಮಪಡಿಸುವ ದಿಶೆಯಲ್ಲಿ ಸರ್ಕಾರ ಕಾರ್ಯೋನ್ಮುಖವಾಗಲಿಲ್ಲ. ಇಂದಿನ ಸರ್ಕಾರಗಳಿಗೆ (ಒಕ್ಕೂಟ ಮತ್ತು ರಾಜ್ಯ) ಊರು–ನಗರಗಳ, ಪ್ರಶಸ್ತಿ–ಪುರಸ್ಕಾರಗಳ ಹೆಸರು ಬದಲಾಯಿಸುವುದೇ ಅಭಿವೃದ್ಧಿ ಎನ್ನುವಂತಾಗಿದೆ. ಪ್ರಜಾವಾಣಿಯು ತನ್ನ ಆಗಸ್ಟ್ 9, 2021ರ ಸಂಪಾದಕೀಯದಲ್ಲಿ 'ಸರ್ಕಾರಿ ಕಾರ್ಯಕ್ರಮ ಅಥವಾ ಆಟದ ಮೈದಾನಗಳಿಗೆ ಹಿಂದಿನ ಸರ್ಕಾರಗಳು ಮಾಡಿದ ನಾಮಕರಣವನ್ನು ಅಧಿಕಾರದಲ್ಲಿರುವ ಪಕ್ಷ ಬದಲಾಯಿಸುವ ಕ್ಷುಲ್ಲಕ ರಾಜಕಾರಣದಿಂದ ಜನರಿಗೆ ಅಥವಾ ದೇಶದ ಅಭಿವೃದ್ಧಿಗೆ ಉಪಯೋಗವೇನೂ ಇಲ್ಲ' ಎಂದು ಸರಿಯಾಗಿ ಹೇಳಿದೆ.

ಬಲವಂತದ–ದಮನಕಾರಿ ಕ್ರಮಗಳನ್ನು ಅನುಸರಿಸದೆ ಕರ್ನಾಟಕಕವು ಈಗಾಗಲೆ ಜನಸಂಖ್ಯೆಯ ಬೆಳವಣಿಗೆಯನ್ನು ಸಮತೋಲನ ಬೆಳವಣಿಗೆಯ ಹಂತಕ್ಕೆ ತಂದಿರುವುದರ ಬಗ್ಗೆ ಪರಿಜ್ಞಾನವೇ ಇಲ್ಲದ ಶಾಸಕರು ಮತಾಂಧತೆಯಿಂದ ಉತ್ತೇಜಿತರಾಗಿ ಉತ್ತರ ಪ್ರದೇಶದಲ್ಲಿ ರೂಪಿಸಿರುವ ಎರಡು ಮಕ್ಕಳು ಜನಸಂಖ್ಯಾ ನೀತಿಯನ್ನು ನಾವು ಅಳವಡಿಸಿಕೊಳ್ಳಬೇಕು ಎಂದು ಹರಿಹಾಯುತ್ತಾರೆ. ಇದನ್ನು ಕೇಳಿ ನಗಬೇಕೋ–ಅಳಬೇಕೋ ನಮಗೆ ತಿಳಿಯದಾಗಿದೆ. ಏಕೆಂದರೆ ಕರ್ನಾಟಕದಲ್ಲಿ(ಇಡೀ ದಕ್ಷಿಣ ಭಾರತದ ರಾಜ್ಯಗಳಲ್ಲಿ) ಜನಸಂಖ್ಯೆಯ ಬೆಳವಣಿಗೆಯನ್ನು ಸಹಕಾರವಾದಿ ಕ್ರಮಗಳಿಂದ, ಉತ್ತೇಜನ–ನಿರುತ್ತೇಜನ ಕಾರ್ಯಸೂಚಿಯಿಲ್ಲದೆ ನಿಯಂತ್ರಿಸಲಾಗಿದೆ. ಇವರ ಪ್ರಕಾರ ಇಲ್ಲಿ ಈಗ ಇನ್ನೂ ಏನನ್ನು ನಿಯಂತ್ರಿಸಬೇಕು? 'ಜನಸಂಖ್ಯೆ' ನುಡಿಯಲ್ಲಿ ಮುಖ್ಯವಾಗಬೇಕಾದುದು 'ಸಂಖ್ಯೆ'ಯಲ್ಲ. ಅಭಿವೃದ್ಧಿಯ ದೃಷ್ಟಿಯಿಂದ ಮುಖ್ಯವಾಗಬೇಕಾದುದು 'ಜನ', ಜನರ ಜೀವನೋಪಾಯ, ಅವರ ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ. ಅಪ್ಪಿತಪ್ಪಿಯಾದರೂ ಸಮಾನತೆ ಮೌಲ್ಯದ ಬಗ್ಗೆ ಪ್ರಧಾನಮಂತ್ರಿಗಳು, ನಮ್ಮ ಮುಖ್ಯಮಂತ್ರಿಗಳು, ಲೌವ್ ಜಿಹಾದ್ ಬಗ್ಗೆ ವಿಷಕಾರುವವರು ಮಾತನಾಡಿದ್ದುಂಟ? ನಮ್ಮ ಸಂದರ್ಭದಲ್ಲಿ ಸಮಾನತೆಯು ಸಂವಿಧಾನಾತ್ಮಕ ಮೌಲ್ಯ(ಸಂವಿಧಾನದ ಭಾಗ 4, ಪರಿಚ್ಛೇದ 38 ಸೆಕ್ಷನ್ 2 ರಲ್ಲಿ ಸಂಪತ್ತಿನ ಕೇಂದ್ರೀಕರಣವನ್ನು, ವರಮಾನದಲ್ಲಿನ ಅಸಮಾನತೆಯನ್ನು ತಡೆಯುವುದು ಒಂದು ಮಹತ್ವದ ರಾಜ್ಯ ನಿರ್ದೇಶನ ತತ್ವವಾಗಿದೆ).

ಬೊಮ್ಮಾಯಿ 'ಕಮಲಾಭಿಮುಖಿ'ಗಳಾಗದೆ 'ಅಭಿವೃದ್ಧಿಮುಖಿ'ಯಾಗಲಿ!


ಬೊಮ್ಮಾಯಿ ಅವರಾದರೂ (ಆಫರೇಶನ್)'ಕಮಲಾಭಿಮುಖಿ'ಗಳಾಗದೆ 'ಅಭಿವೃದ್ಧಿಮುಖಿ'ಯಾಗುತ್ತಾರೆ ಎಂದು ಭಾವಿಸಲಾಗಿದೆ. ಕರ್ನಾಟಕದ ಅಭಿವೃದ್ಧಿಗೆ ಮಾದರಿಯಾಗಬೇಕಾದುದು 'ಕೇರಳ'ವೇ ವಿನಾ ಉತ್ತರ ಪ್ರದೇಶ–ಗುಜರಾತ್‌ಗಳಲ್ಲ. ಜನಸಂಖ್ಯೆಯ ಬೆಳವಣಿಗೆಯನ್ನು ಕರ್ನಾಟಕವು ತಡೆದುದು ಮುಗಿದಿದೆ. ಆದರೂ ಪರಿವಾರದ ಬಾಯಿ ಚಪಲ ಚೆನ್ನಿಗರು ಎರಡು ಮಕ್ಕಳ ಜನಸಂಖ್ಯಾ ನೀತಿಯನ್ನು ಅನುಸರಿಸುವುದರ ಬಗ್ಗೆ ಅಬ್ಬರಿಸುತ್ತಿದ್ದಾರೆ. ಇವರ ಅಭಿವೃದ್ಧಿ ಬಗೆಗಿನ ಅಜ್ಞಾನಕ್ಕೆ ಏನನ್ನಬೇಕು? ಇಂತಹ ಪ್ರಹಸನಗಳನ್ನು ಇನ್ನಾದರೂ ಕೊನೆಗೊಳಿಸಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಯವರು ಆರ್ಥಿಕ–ಸಾಮಾಜಿಕ ಅಭಿವೃದ್ಧಿಯನ್ನು ಆದ್ಯತೆಯನ್ನಾಗಿ ಮಾಡಿಕೊಂಡು ಅಧಿಕಾರ ನಡೆಸುತ್ತಾರೆ ಎಂದು ಭಾವಿಸೋಣ.

ಕೋಷ್ಟಕ – 1 ಮಾನವ ಅಭಿವೃದ್ಧಿ ಸೂಚಕ ದಲ್ಲಿ ಕರ್ನಾಟಕ ಯು.ಪಿ. ಗುಜರಾತ್, ಉತ್ತರ ಭಾರತದ ಇತರ ರಾಜ್ಯಗಳಿಗಿಂತ ಮುಂದಿದೆ. ಅವುಗಳಿಂದ ಕಲಿಯುವುದು ಏನೂ ಇಲ್ಲ!

ಕೋಷ್ಟಕ – 2 ಜನಸಂಖ್ಯಾ ನಿಯಂತ್ರಣದಲ್ಲಿ ಸಹ ಕರ್ನಾಟಕ ಯು.ಪಿ. ಗುಜರಾತ್, ಉತ್ತರ ಭಾರತದ ಇತರ ರಾಜ್ಯಗಳಿಗಿಂತ ಮುಂದಿದೆ. ಅವುಗಳಿಂದ ಕಲಿಯುವುದು ಏನೂ ಇಲ್ಲ!

ಅನೇಕ ಅಭಿವೃದ್ಧಿ ಸೂಚಿಗಳಲ್ಲಿ ಕರ್ನಾಟಕವು ಹಿಂದಿ ಜಗತ್ತಿಗಿಂತ ಸಾಕಷ್ಟು ಮುಂದಿದೆ. ಆದರೆ ಕಳೆದ ಅನೇಕ ವರ್ಷಗಳಿಂದ ಅಧಿಕಾರವನ್ನು ಗಳಿಸಿಕೊಳ್ಳುವುದು ಹೇಗೆ ಮತ್ತು ಗಳಿಸಿಕೊಂಡ ಅಧಿಕಾರವನ್ನು ಉಳಿಸಿಕೊಳ್ಳುವುದು ಹೇಗೆ ಎಂಬುದರ ಕಾಯಕದಲ್ಲಿಯೇ ಕುಂಕುಮಧಾರಿ ಮುಖ್ಯಮಂತ್ರಿಯ ಆಳ್ವಿಕೆಯು ಮುಗಿದುಹೋಯಿತು. ಬೊಮ್ಮಾಯಿ ಅವರೇ, ಇದನ್ನು ಸುಮ್ಮನೆ ಪಕ್ಕಕ್ಕೆ ಬಿಸಾಕಿ ಬಿಡಿ. ರಾಜ್ಯದಲ್ಲಿ 1970–80ರ ದಶಕಗಳಲ್ಲಿ ಮುಂಚೂಣಿಯಲ್ಲಿದ್ದ ಕರ್ನಾಟಕದ ಕೃಷಿಯು ಇಂದು ನಿತ್ರಾಣ ಸ್ಥಿತಿಯಲ್ಲಿದೆ. ಇದರ ಪುನಶ್ಚೇತನವು

ಪುಟ 15 ಕ್ಕೆ



ಕೋಷ್ಟಕ–2: ಜನಸಂಖ್ಯಾ ನಿಯಂತ್ರಣದಲ್ಲಿ ಸಹ ಕರ್ನಾಟಕ ಯು.ಪಿ. ಗುಜರಾತ್, ಉತ್ತರ ಭಾರತದ ಇತರ ರಾಜ್ಯಗಳಿಗಿಂತ ಮುಂದಿದೆ. ಅವುಗಳಿಂದ ಕಲಿಯುವುದು ಏನೂ ಇಲ್ಲ!



ಕೋವಿಡ್-19 ನಿರ್ವಹಣೆಯಲ್ಲಿ ಕೇರಳದ್ದು ಈಗಲೂ ಮಾದರಿ ದಾಖಲೆ



ಕೋವಿಡ್ –19 ಅನ್ನು ನಿರ್ವಹಿಸುವಲ್ಲಿ ಕೇರಳವು ಅತ್ಯಂತ ಯಶ್ವಿ ಮಾದರಿಯೇನಲ್ಲ, ಬದಲಿಗೆ ವಿಫಲ ಮಾದರಿ, ಎರಡನೇ ಅಲೆಯಲ್ಲಿ ಇದು ಚೆನ್ನಾಗಿ ಕಾಣುತ್ತಿದೆ ಎಂಬ ಪ್ರಚಾರ ಭರದಿಂದ ಸಾಗಿದೆ. ಇದು ಎಂತಹ ಅಪಪ್ರಚಾರ ಎಂಬುದನ್ನು ಈ ಗಾಗಲೇ ಹೆಚ್ಚಿನ ಪರಿಣಿತರು ಹೇಳಿದ್ದಾರೆ. ಆದರೂ ಅದು ನಿಂತಿಲ್ಲ. ಈ ಕುರಿತ ಕೂಲಂಕುಷ ಅಧ್ಯಯನ ಮಾಡಿರುವ ಈ ಲೇಖನ ಇದನ್ನು ಮತ್ತಷ್ಟು ವಿಷದ ಪಡಿಸುತ್ತದೆ. ಈ ಅಪಪ್ರಚಾರದ ಹಿಂದಿರುವ ಹುನ್ನಾರ ಎಂದರೆ ಉತ್ತರಪ್ರದೇಶದಂತಹ ಕಡೆಗಳಲ್ಲಿ ಕಾಣುತ್ತಿರುವ ಸಾವು ನೋವುಗಳಲ್ಲಿ ವಿಶೇಷವೇನಿಲ್ಲ, ಅವು ಸಾಮಾನ್ಯ ಸಂಗತಿಗಳು ಎಂದು ಬಿಂಬಿಸುವ ಮೂಲಕ ಬಿಜೆಪಿ ಆಳ್ವಿಕೆಯ ರಾಜ್ಯಗಳ ವಾಸ್ತವಿಕ ವಿಫಲತೆಯನ್ನು ಮುಚ್ಚಿಕೊಳ್ಳುವುದು.

ಪ್ರೊ. ಆರ್. ರಾಂಕುಮಾರ್
ಅನು: ರಾಮು ಎಸ್.ಕೆ.

ಕಳೆದ ಎರಡು ವಾರಗಳಿಂದ, ಕೇರಳದಲ್ಲಿ ಕೋವಿಡ್ –19ರ ಪರಿಸ್ಥಿತಿ, ರಾಷ್ಟ್ರೀಯ ಚರ್ಚೆಯ ವಿಷಯವಾಗಿದೆ. ಕೇರಳದ ಮೇಲಿನ ಈ ಅಸಾಮಾನ್ಯ ಮಾಧ್ಯಮ ಗಮನವು ಭಾರತೀಯ ಜನತಾ ಪಕ್ಷದ (ಬಿಜೆಪಿ) ಬೆಂಬಲಿಗರು ಆರಂಭಿಸಿದ ದೊಡ್ಡ ಪ್ರಮಾಣದ ಸಾಮಾಜಿಕ ಮಾಧ್ಯಮ ಅಭಿಯಾನದಿಂದ ಸ್ಫೂರ್ತಿ ಪಡೆದಿದೆ. ಕೋವಿಡ್ –19 ಅನ್ನು ನಿರ್ವಹಿಸುವಲ್ಲಿ ಕೇರಳವು "ವಿಫಲ ಮಾದರಿ" ಎಂಬುದು ಅವರ ವಾದವಾಗಿತ್ತು. ಅದಕ್ಕೆ ಸಾಕ್ಷಿಯಾಗಿ, ಅವರು ಹೆಚ್ಚುತ್ತಿರುವ ದೈನಂದಿನ ಸೋಂಕುಗಳು ಮತ್ತು ಕೇರಳದಲ್ಲಿ ಹೆಚ್ಚಿನ ತಪಾಸಣಾ– ಪಾಸಿಟಿವ್ ದರಗಳನ್ನು (ಟಿಪಿಆರ್) ಉಲ್ಲೇಖಿಸಿದ್ದಾರೆ. ಚರ್ಚೆಯಲ್ಲಿ ಕೋಮು ದೃಷ್ಟಿಕೋನವನ್ನು ಕೂಡ ಸೇರಿಸಲಾಗಿದೆ; ಬಕ್ರೀದ್ ಆಚರಣೆಯ ಸಮಯದಲ್ಲಿ ಮೂರು ದಿನಗಳವರೆಗೆ ನಿರ್ಬಂಧಗಳನ್ನು ಸಡಿಲ ಮಾಡಿದ್ದರಿಂದ ಸೋಂಕುಗಳ ಹೆಚ್ಚಳಕ್ಕೆ ಕಾರಣವೆಂದು ಹೇಳಲಾಗುತ್ತಿದೆ.

ದುರದೃಷ್ಟವಶಾತ್, ಈ ರಾಜಕೀಯ ಪ್ರೇರಿತ ಅಭಿಯಾನದಲ್ಲಿ ವಿಜ್ಞಾನ ಮತ್ತು ವಿವೇಚನೆಗಳನ್ನು ಮರೆಮಾಚಲಾಗಿದೆ. ಯಾವುದೇ ಒಬ್ಬ ಗೌರವಾನ್ವಿತ ಸಾರ್ವಜನಿಕ ಆರೋಗ್ಯ ವೃತ್ತಿಪರರು ಕೂಡ ಈ ಅಭಿಯಾನಕ್ಕೆ ತಮ್ಮ ಬೆಂಬಲವನ್ನು ನೀಡಿಲ್ಲ. ವಾಸ್ತವವಾಗಿ, ಅನೇಕ ತಜ್ಞರು – ಡಾ. ಗಗನ್ ದೀಪ್ ಕಾಂಗ್ ಮತ್ತು ಡಾ ರಿಜೊ ಎಂ. ಜಾನ್ – ತಮಗೆ ಕಾದಿರುವ ಟೀಕೆಗಳ ಹೊರತಾಗಿಯೂ ಮುಂದೆ ಬಂದು ಕೇರಳದ ದಾಖಲೆಯನ್ನು ಸಮರ್ಥಿಸಿಕೊಂಡಿದ್ದಾರೆ. ಈ ಲೇಖನದಲ್ಲಿ, ಸಾಂಕ್ರಾಮಿಕ ರೋಗವನ್ನು ಪರಿಹರಿಸಲು ಮತ್ತು ಅದರ ವಿರುದ್ಧದ ಆರೋಪಗಳ ಆಧಾರರಹಿತತೆಯನ್ನು ದಾಖಲಿಸಲು ಕೇರಳದ ಕಾರ್ಯತಂತ್ರದ ಮೇಲೆ ದಾಖಲೆಯನ್ನು ನೇರಗೊಳಿಸಲು ನಾನು ಪ್ರಯತ್ನಿಸುತ್ತೇನೆ.

ಕುತ್ತು ಇದೆ, ಆದರೆ ಸಜ್ಜಾಗಿದೆ

ಕೇರಳಕ್ಕೆ ಕೋವಿಡ್ –19 ಕುತ್ತು ಇದೆ; ಈಗಾಗಲೇ ಇರುವ ರೋಗಗಳು ಮತ್ತು ಹೊಸ ಸೋಂಕುಗಳ ಹರಡುವಿಕೆಗೆ ಒಳಗಾಗುವ ಪರಿಸ್ಥಿತಿ ಇದೆ ಮೊದಲನೆಯದಾಗಿ, ಕೇರಳವು ಜೀವಿತಾವಧಿಯನ್ನು ಹೆಚ್ಚಿಸುವಲ್ಲಿ ಅದರ ಹಿಂದಿನ ಪ್ರಗತಿಯಿಂದಾಗಿ ಜನಸಂಖ್ಯೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಿರಿ ವಯಸ್ಸಿನವರಿದ್ದಾರೆ. 2015 ರಲ್ಲಿ, ಕೇರಳದ ಜನಸಂಖ್ಯೆಯ ಶೇಕಡ 13.1 ರಷ್ಟು ಜನರು 60 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದರೆ, ಭಾರತದಲ್ಲಿ ಇಂತವರು ಶೇ 8.3 ಇತ್ತು. ಎರಡನೆಯದಾಗಿ, ಕೇರಳವು ಭಾರತದಲ್ಲಿ ಅತಿ ಹೆಚ್ಚು ಜನಸಂಖ್ಯೆಯ ಸಾಂದ್ರತೆ ಹೊಂದಿದೆ. 2011 ರಲ್ಲಿ ಇದರ ಜನಸಂಖ್ಯಾ ಸಾಂದ್ರತೆಯು ಪ್ರತಿ 2 ಕಿಮೀ ಗೆ 859 ಜನರಿದ್ದರು, ಇದು ರಾಷ್ಟ್ರೀಯ ಸರಾಸರಿಗಿಂತ ಮೂರು ಪಟ್ಟು ಹೆಚ್ಚಾಗಿದೆ. ಮೂರನೆಯದಾಗಿ, ಕೇರಳದ ಭೌಗೋಳಿಕ ಮತ್ತು ವಾಸಸ್ಥಳಗಳ ವಿಧಗಳ ದೃಷ್ಟಿಯಿಂದ ನಗರ ಮತ್ತು ಗ್ರಾಮಾಂತರ ಇವೆರಡೂ ಪರಸ್ಪರ ಬೆರೆತು ಹೋಗಿರುವಂತದ್ದು. ಸಮುದಾಯಗಳು ಪರಸ್ಪರ ಮುಕ್ತವಾಗಿ ಬೆರೆಯುತ್ತವೆ. ನಾಲ್ಕನೆಯದಾಗಿ, ಕೇರಳವು ಹೆಚ್ಚು ಚರ ಜನಸಂಖ್ಯೆಯನ್ನು ಹೊಂದಿದ್ದು, ಹೆಚ್ಚಿನ ಮಟ್ಟದ ವಲಸೆ ಮತ್ತು ಹೊರ–ವಲಸೆಯನ್ನು ಹೊಂದಿದೆ.

ಅದೇ ಸಮಯದಲ್ಲಿ, ಕೇರಳವು ಸಾಂಕ್ರಾಮಿಕ ರೋಗಗಳನ್ನು ಎದುರಿಸಲು ಸುಸಜ್ಜಿತವಾಗಿದೆ. ಇದರ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ – ಸಾರ್ವಜನಿಕ ಆರೋಗ್ಯ ಸೇವೆಗಳ ಗುಣಮಟ್ಟ ಮತ್ತು ಆಸ್ಪತ್ರೆಯ ಹಾಸಿಗೆಗಳು, ವೈದ್ಯರು, ದಾದಿಯರು ಮತ್ತು ಆರೈಕೆ ಸಿಬ್ಬಂದಿಗಳ ಸಂಖ್ಯೆಯಲ್ಲಿ ಭಾರತದಲ್ಲಿಯೇ ಅತ್ಯುತ್ತಮವಾಗಿದೆ. ಕೇರಳದ ಆರೋಗ್ಯ ವ್ಯವಸ್ಥೆಯು ವ್ಯಾಪಕವಾಗಿ ವಿಕೇಂದ್ರೀಕೃತವಾಗಿದೆ, ಇದು ಆರೋಗ್ಯದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸಿದೆ. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಮಾನಸಿಕ ಆರೋಗ್ಯವನ್ನು ಸಂಯೋಜಿಸುವಲ್ಲಿ ಕೇರಳವು ಪಥ ಪ್ರದರ್ಶಕ ರಾಜ್ಯವಾಗಿದೆ. ಇವುಗಳ ಹೊರತಾಗಿ, 2018 ರಲ್ಲಿ ನಿಪಾಹ್ ವೈರಸ್ ಏಕಾಏಕಿ ಸಂಭವಿಸಿದಂತೆ ಕೇರಳವು ಸಾಂಕ್ರಾಮಿಕ ರೋಗಗಳನ್ನು ಎದುರಿಸುವ ಅನುಭವವನ್ನು ಹೊಂದಿದೆ. ಅಂತಹ ಅನುಭವದಿಂದ ಸಿದ್ಧತೆ, ಕಾರ್ಯತಂತ್ರ ಮತ್ತು ತುರ್ತು ಸ್ಪಂದನೆ ಕುರಿತು ಪ್ರಮುಖ ಪಾಠಗಳು ಕೇರಳ ರಾಜ್ಯಕ್ಕೆ ಲಭಿಸಿದವು.

ಹೆಚ್ಚು ಪರೀಕ್ಷೆ, ಉತ್ತಮ ಪರೀಕ್ಷೆ.

ಭಾರತದ ಮೊದಲ ಕೋವಿಡ್ –19 ಪ್ರಕರಣವು ಕೇರಳದಿಂದ ಜನವರಿ 30, 2020 ರಂದು ವರದಿಯಾಗಿದೆ. ಅಂದಿನಿಂದ, ರಾಜ್ಯದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಸೋಂಕಿನ ಹರಡುವಿಕೆಯ ವಿವಿಧ ಹಂತಗಳಿಗೆ ಅತ್ಯಂತ ಪರಿಣಾಮಕಾರಿಯಾಗಿ ಸ್ಪಂದಿಸಿತು.

ಕೇರಳದ ತಂತ್ರವು ಸೋಂಕುಗಳನ್ನು ತಡೆಗಟ್ಟುವಲ್ಲಿ ಮತ್ತು ಸೋಂಕಿನ ಹರಡುವಿಕೆಯನ್ನು ನಿಧಾನಗೊಳಿಸಲು ನಡವಳಿಕೆಯ ಬದಲಾವಣೆಗಳನ್ನು ಪ್ರೇರೇಪಿಸುವತ್ತ ಗಮನಹರಿಸಿದೆ. ಹೀಗಾಗಿ, ಕಳೆದ ವರ್ಷದಲ್ಲಿ, ಕೇರಳವು ತನ್ನ ಜನಸಂಖ್ಯೆಯನ್ನು ಪರೀಕ್ಷಿಸುವ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಿದೆ. ಏಪ್ರಿಲ್ 2020 ರ ಮೊದಲ ವಾರದಲ್ಲಿ ಪ್ರತಿದಿನ ಸುಮಾರು 500 ತಪಾಸಣೆಗಳಿಂದ, ಪ್ರತಿ ದಿನದ ಸಂಖ್ಯೆಯನ್ನು ಆಗಸ್ಟ್ 2020 ರಲ್ಲಿ ಸುಮಾರು 35,000ಕ್ಕೆ , 2020 ರ ಅಕ್ಟೋಬರ್‌ನಲ್ಲಿ ಸುಮಾರು 65,000 ಕ್ಕೆ ಫೆಬ್ರವರಿ 2021 ರಲ್ಲಿ ಸುಮಾರು 90,000 ಕ್ಕೆ, ಮೇ 2021 ರಲ್ಲಿ ಸುಮಾರು 150,000 ಕ್ಕೆ ಮತ್ತು ಜುಲೈ 2021 ರಲ್ಲಿ ಸುಮಾರು 190,000 ಕ್ಕೆ ಏರಿದೆ ಜುಲೈ 2021 ರ ಅಂತ್ಯದ ವೇಳೆಗೆ, ಪ್ರತಿ ಮಿಲಿಯನ್ ಜನಸಂಖ್ಯೆಗೆ ತಪಾಸಣೆಗಳ ಸಂಖ್ಯೆ ಕೇರಳದಲ್ಲಿ 7.7 ಲಕ್ಷಗಳಾಗಿದ್ದರೆ, ಭಾರತೀಯ ಸರಾಸರಿ ಕೇವಲ 3.3 ಲಕ್ಷಗಳು.

ಕೇರಳವು ಗೊತ್ತುಗುರಿ ಇಲ್ಲದೆ ತಪಾಸಣೆಗಳ ಸಂಖ್ಯೆಯನ್ನು ಹೆಚ್ಚಿಸಲಿಲ್ಲ. ಇದು ಒಂದು ವರ್ಧಿತ ಪರೀಕ್ಷಾ ತಂತ್ರವನ್ನು ಅನುಸರಿಸಿತು, ಇದು ಆ ಪ್ರದೇಶಗಳು ಮತ್ತು ವಿಭಾಗಗಳನ್ನು ಗುರಿಯಾಗಿಸಿಕೊಂಡು ಹೆಚ್ಚು ದುರ್ಬಲ ಮತ್ತು ಸೋಂಕುಗಳಿಗೆ ತುತ್ತಾಗುವ ಪ್ರದೇಶ ಮತ್ತು ವಿಭಾಗಗಳನ್ನು ಗುರಿಯಾಗಿಸಿತು. ಜಿಲ್ಲಾ ಕಣ್ಗಾವಲು ಅಧಿಕಾರಿಗಳಿಗೆ 60 ವರ್ಷಕ್ಕಿಂತ ಮೇಲ್ಪಟ್ಟ, ಶೀತ ಜ್ವರ ತರಹದ ಕಾಯಿಲೆಗಳು, ತೀವ್ರ ಉಸಿರಾಟದ ಸೋಂಕು, ಅನಾರೋಗ್ಯ, ಗರ್ಭಧಾರಣೆ ಮತ್ತು ಲಸಿಕೆಯಿಲ್ಲದ ಹೆಚ್ಚಿನ ಜನರನ್ನು ಪರೀಕ್ಷಿಸುವ ಕೆಲಸ ವಹಿಸಲಾಯಿತು. ಕೋವಿಡ್–ಪಾಸಿಟಿವ್ ಪ್ರಕರಣಗಳ ತಿಳಿದಿರುವ ಎಲ್ಲಾ ಸಂಪರ್ಕಗಳು, ಆಸ್ಪತ್ರೆಗಳ ಹೊರ ರೋಗಿಗಳ ವಿಭಾಗಗಳಲ್ಲಿರುವ ಎಲ್ಲಾ ರೋಗಿಗಳು, ಎಲ್ಲಾ ಹೊಸ ಕೋವಿಡ್ ಅಲ್ಲದ ದಾಖಲಾತಿಗಳು ಮತ್ತು ಜನಸಾಮಾನ್ಯರೊಂದಿಗೆ ನಿಯಮಿತವಾಗಿ ಸಂಪರ್ಕದಲ್ಲಿರುವ ಎಲ್ಲರನ್ನು ಪರೀಕ್ಷೆಗೆ ಗುರಿಪಡಿಸಲಾಯಿತು. ದೊಡ್ಡ ಕ್ಲಸ್ಟರ್‌ಗಳು ಮತ್ತು ಕಂಟೈನ್‌ಮೆಂಟ್ ವಲಯಗಳಲ್ಲಿ, ಡೆಲ್ಟಾ ಮತ್ತು ಡೆಲ್ಟಾ+ ರೂಪಾಂತರಗಳು ಪತ್ತೆಯಾದ ಪ್ರದೇಶಗಳಲ್ಲಿ ಮತ್ತು 15 ಕ್ಕಿಂತ ಹೆಚ್ಚು ಟಿಪಿಆರ್ ಹೊಂದಿರುವ ಪಂಚಾಯತ್‌ಗಳಲ್ಲಿ ಹೆಚ್ಚಿನ ಪರೀಕ್ಷೆಗಳನ್ನು ನಡೆಸಲಾಯಿತು. ಇಂತಹ ತಂತ್ರವು ರಾಜ್ಯ ಸರ್ಕಾರವು ಹೊಸ ಸೋಂಕಿನ ವರ್ಗಗಳನ್ನು ಉತ್ತಮವಾಗಿ ಗುರುತಿಸಲು ಮತ್ತು ಜನಸಂಖ್ಯೆಯ ಹೊಸ ವಿಭಾಗಗಳು ಸೋಂಕಿಗೆ ಒಳಗಾಗುವುದನ್ನು ಗುರುತಿಸಲು ಸಹಾಯವಾಯಿತು.

ಸಂಪರ್ಕದ ಪತ್ತೆ ಮತ್ತು ಕ್ವಾರೆಂಟಿನ್

ಗುರುತಿಸಲಾದ ನಂತರ ನಿರಂತರ ಸಂಪರ್ಕ ಪತ್ತೆಹಚ್ಚುವಿಕೆಯನ್ನು ಹಮ್ಮಿಕೊಳ್ಳಲಾಯಿತು; ಇದು ಹೆಚ್ಚು ಸೋಂಕಿತ ವ್ಯಕ್ತಿಗಳನ್ನು ಪ್ರತ್ಯೇಕಿಸಲು ರಾಜ್ಯಕ್ಕೆ ಸಹಾಯ ಮಾಡಿತು. ಸ್ಥಳೀಯ ಸ್ವ–ಸರ್ಕಾರಗಳ ಸಕ್ರಿಯ ನೆರವಿನೊಂದಿಗೆ, ಎರಡು ರೀತಿಯ ಕ್ಯಾರೆಂಟೈನ್ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಯಿತು: ಮನೆ ಕ್ವಾರಂಟೈನ್ ಮತ್ತು ಸಾಂಸ್ಥಿಕ ಕ್ವಾರಂಟೈನ್. ಗಂಭೀರ ರೋಗಲಕ್ಷಣವಿಲ್ಲದವರನ್ನು ಮನೆಯಲ್ಲಿಯೇ ನಿರ್ಬಂಧಿಸಲಾಯಿತು. ತೀವ್ರ ರೋಗಲಕ್ಷಣ ಹೊಂದಿದವರನ್ನು ಮತ್ತು ಮನೆಯಲ್ಲಿ ಕ್ವಾರಂಟ್ ಆಗಲು ಸೌಲಭ್ಯ ಹೊಂದಿಲ್ಲದವರನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ನಿರ್ದೇಶಿಸಲಾಯಿತು. ಅಗತ್ಯವಿರುವ ಎಲ್ಲ ವಿಭಾಗಗಳಿಗೆ ಸಾಂಸ್ಥಿಕ ಸಂಪರ್ಕತಡೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರಿ ಕಚೇರಿಗಳು, ಅತಿಥಿ ಗೃಹಗಳು, ವಿಶ್ವವಿದ್ಯಾಲಯದ ಹಾಸ್ಟೆಲ್‌ಗಳು ಮತ್ತು ಖಾಸಗಿ ವಲಯದ ಸೌಲಭ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಲಾಯಿತು. ಸಾಧ್ಯವಿದ್ದಲ್ಲಿ, ಪ್ರತಿ ವ್ಯಕ್ತಿಗೆ ಸ್ನಾನವ್ಯವಸ್ಥೆ–ಜೋಡಿಸಲಾದ ಏಕ ಕೊಠಡಿಗಳನ್ನು ಒದಗಿಸಲಾಯಿತು.

ಕೇರಳವು ಪರಿಣಾಮಕಾರಿಯಾಗಿ ರಿವರ್ಸ್ ಕ್ಯಾರೆಂಟೈನ್ ಕ್ರಮಗಳನ್ನು ಸ್ಥಾಪಿಸಿತು. ಮನೆ ಮತ್ತು ಸಾಂಸ್ಥಿಕ ಸಂಪರ್ಕತಡೆ ಸೋಂಕಿತ ವ್ಯಕ್ತಿಗಳಿಂದ ಸಮಾಜವನ್ನು ರಕ್ಷಿಸಿದರೆ, ರಿವರ್ಸ್ ಕ್ಯಾರೆಂಟೈನ್ ದುರ್ಬಲ ವ್ಯಕ್ತಿಗಳನ್ನು ಸಮಾಜದಿಂದ ರಕ್ಷಿಸುತ್ತದೆ. ಸ್ಥಳೀಯ ಆರೋಗ್ಯ ಕಾರ್ಯಕರ್ತರು ವಯಸ್ಸಾದವರು ಅಥವಾ ಮಧುಮೇಹ, ಅಧಿಕ ರಕ್ತದೊತ್ತಡ, ಕ್ಯಾನ್ಸರ್, ಹೃದಯರಕ್ತನಾಳದ ಕಾಯಿಲೆಗಳು, ಮೂತ್ರಪಿಂಡದ ರೋಗಗಳು ಮತ್ತು ಶ್ವಾಸಕೋಶದ ಕಾಯಿಲೆಗಳಂತಹ ಸಾಂಕ್ರಾಮಿಕ ಮತ್ತು ಮರಣಕ್ಕೆ ಒಳಗಾಗುವ ಪ್ರತಿಯೊಬ್ಬರ ಪಟ್ಟಿಯನ್ನು ಮಾಡಿದರು. ಅಂತಹ ವ್ಯಕ್ತಿಗಳನ್ನು ಇತರ ಕುಟುಂಬ ಸದಸ್ಯರಿಂದ ಬೇರ್ಪಡಿಸಿ ಮತ್ತು ಸಾರ್ವಜನಿಕ ಕೂಟಗಳಿಗೆ ಹಾಜರಾಗುವುದನ್ನು ಅಥವಾ ಜನರೊಂದಿಗೆ ಬೆರೆಯುವುದನ್ನು ತಡೆಯಲಾಯಿತು. ಅಗತ್ಯ ಸೌಲಭ್ಯಗಳು ಮನೆಯಲ್ಲಿ ಲಭ್ಯವಿಲ್ಲದಿದ್ದರೆ ಅವರಿಗೆ ಪ್ರತ್ಯೇಕ ವಾಸ ಸ್ಥಳಗಳನ್ನು ವ್ಯವಸ್ಥೆ ಮಾಡಲಾಯಿತು.

ಕೋವಿಡ್ –19 ಸೂಕ್ತ ನಡವಳಿಕೆಯನ್ನು ಖಚಿತಪಡಿಸಿಕೊಳ್ಳಲು ಈ ಕ್ರಮಗಳಿಗೆ ಪ್ರಚಾರದ ಬೆಂಬಲ ಒದಗಿಸಲಾಗಿದೆ. ಈ ಅಭಿಯಾನಗಳನ್ನು 2020 ರಲ್ಲಿ "ಬ್ರೇಕ್ ದಿ ಚೈನ್" ಮತ್ತು 2021 ರಲ್ಲಿ "ಕ್ರಶ್ ದಿ ಕರ್ವ್" ಎಂದು ಹೆಸರಿಸಲಾಯಿತು. ದೈನಂದಿನ ಮಾಸ್ಕ್, ನೈರ್ಮಲ್ಯ ಮತ್ತು ದೈಹಿಕ ದೂರವನ್ನು ಜನಪ್ರಿಯಗೊಳಿಸುವುದು ಇದರ ಉದ್ದೇಶವಾಗಿತ್ತು.

ಮೇಲಿನ ಎಲ್ಲಾ ಕ್ರಮಗಳು–ಇದರಲ್ಲಿ ಸ್ಥಳೀಯ ಸ್ವ–ಸರ್ಕಾರಗಳು ಪ್ರಮುಖ ಪಾತ್ರ ವಹಿಸಿವೆ–ಕೇರಳವು ಸೋಂಕು ಹರಡುವಿಕೆಯನ್ನು ನಿಧಾನಗೊಳಿಸಲು ಸಹಾಯ ಮಾಡಿತು. ಇಂಡಿಯನ್ ಕೌನ್ಸಿಲ್ ಫಾರ್ ಮೆಡಿಕಲ್ ರಿಸರ್ಚ್ (ಐಸಿಎಂಆರ್)ನ ಸೆರೋ–ಎಪಿಡೆಮಿಯಾಲಾಜಿಕಲ್ ಸಮೀಕ್ಷೆಗಳು ನಮಗೆ ಪುರಾವೆಗಳನ್ನು ಒದಗಿಸುತ್ತವೆ. ಮೇ 2020 ರಲ್ಲಿ, ಪ್ರತಿಕಾಯಗಳನ್ನು ಹೊಂದಿರುವ ವ್ಯಕ್ತಿಗಳ ಶೇಕಡಾವಾರು ಭಾರತದಲ್ಲಿ ಶೇಕಡಾ 0.73 ಮತ್ತು ಕೇರಳದಲ್ಲಿ ಶೇಕಡಾ 0.33 ರಷ್ಟಿತ್ತು. ಆಗಸ್ಟ್ 2020 ರಲ್ಲಿ, ಈ ಪ್ರಮಾಣ ಕೇರಳದಲ್ಲಿ 0.8 ಶೇಕಡಾ ಮತ್ತು ಭಾರತದಲ್ಲಿ 6.6 ಶೇ. ಡಿಸೆಂಬರ್ 2020 ರಲ್ಲಿ, ಈ ಪ್ರಮಾಣ ಕೇರಳದಲ್ಲಿ 11.6 ಶೇಕಡಾ ಮತ್ತು ಭಾರತದಲ್ಲಿ 21 ಶೇಕಡಾ. ಮೇ 2021 ರಲ್ಲಿ, ಈ ಪ್ರಮಾಣ ಕೇರಳದಲ್ಲಿ ಶೇಕಡಾ 42.7 ಮತ್ತು ಭಾರತದಲ್ಲಿ ಶೇಕಡ

ಪುಟ 10 ನೋಡಿ



ಪ್ರತಿ ಮಿಲಿಯನ್ ಜನಸಂಖ್ಯೆಗೆ ತಪಾಸಣೆಗಳ ಸಂಖ್ಯೆ ಕೇರಳದಲ್ಲಿ 7.7 ಲಕ್ಷಗಳಾಗಿದ್ದರೆ, ಭಾರತೀಯ ಸರಾಸರಿ ಕೇವಲ 3.3 ಲಕ್ಷಗಳು.

ಸಂದಿಗ್ಧ ಕಾಲಘಟ್ಟದಲ್ಲಿ ಸ್ವಾತಂತ್ರ್ಯ ದಿನ





ನರೇಂದ್ರ ಮೋದಿ ತಮ್ಮ 2018ರ ಆಗಸ್ಟ್ 15ರ ಭಾಷಣದಲ್ಲಿ, 2022ರೊಳಗೆ, ಅಂದರೆ ಸ್ವಾತಂತ್ರ್ಯದ 75ನೇ ವರ್ಷಾಚರಣೆ ಹೊತ್ತಿಗೆ 'ನಯಾ ಭಾರತ್'' ನಿರ್ಮಿಸುವ ಬಗ್ಗೆ ಮಾತನಾಡಿದ್ದರು. ಈ 'ನಯಾ ಭಾರತ್' ಎಂದರೆ ಏನೆಂಬುದು ಕಳೆದ ಎರಡು ವರ್ಷಗಳಲ್ಲಿ ಅನಾವರಣಗೊಂಡಿವೆ: ಅಯೋಧ್ಯೆಯ ರಾಮ ಮಂದಿರ, ಹೊಸ ಸಂಸತ್ ಭವನ ಕಟ್ಟಡದೊಂದಿಗೆ ಸೆಂಟ್ರಲ್ ವಿಸ್ಟಾ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಸರ್ಜನೆ ಇದರ ಸಂಕೇತಗಳು .ಇದು ಹಿಂದುತ್ವ ಸರ್ವಾಧಿಕಾರಶಾಹಿ ಹಾಗೂ ಕಾರ್ಪೊರೇಟ್ ನವ-ಉದಾರವಾದದ ಒಂದು ವಿಷಕಾರಿ ಮಿಶ್ರಣ. ಈಗ ಇವೆಲ್ಲವುಗಳ ವಿರುದ್ಧ ವರ್ಗ ಹಾಗೂ ಸಾಮೂಹಿಕ ಹೋರಾಟಗಳಲ್ಲಿ ಇದಕ್ಕೆ ಹೊಸದೊಂದು ಪರ್ಯಾಯ ರೂಪುಗೊಳ್ಳುತ್ತಿದೆ.



ಪ್ರಕಾಶ ಕಾರಟ್

ಭಾರತ ಸ್ವಾತಂತ್ರ್ಯದ 74 ವರ್ಷಗಳನ್ನು ಪೂರ್ಣಗೊಳಿಸಿ 2022 ರಲ್ಲಿ 75ನೇ ಸ್ವಾತಂತ್ರ್ಯ ವಾರ್ಷಿಕೋತ್ಸವದತ್ತ ಸಾಗುವ ಅವಧಿಯನ್ನು ಪ್ರವೇಶಿಸುತ್ತಿರುವಾಗ ದೇಶ ನಿಜವಾಗಿಯೂ ಒಂದು ಸಂದಿಗ್ದ ಕಾಲಘಟ್ಟದಲ್ಲಿದೆ.

ಒಂದು ಗಣತಂತ್ರ ಸಂವಿಧಾನವನ್ನು ತುಂಬಿಕೊಟ್ಟ ಹಾಗೂ ನಮ್ಮ ಸಂಸದೀಯ ಪ್ರಜಾಪ್ರಭುತ್ವಕ್ಕೆ ಬುನಾದಿ ಹಾಕಿದ ಸ್ವಾತಂತ್ರ್ಯ ಹೋರಾಟದ ಆದರ್ಶಗಳು ಈ ಹಲವು ದಶಕಗಳಲ್ಲಿ ನಶಿಸುತ್ತಾ ಬಂದಿವೆ. ಆದರೆ, ಬಿಜೆಪಿ-ಆರ್‌ಎಸ್‌ಎಸ್ ಕೂಟ ಪ್ರಭುತ್ವ ಅಧಿಕಾರದ ಚುಕ್ಕಾಣಿ ಹಿಡಿದಾಗಿನಿಂದ ಇದರಲ್ಲಿ ಒಂದು ಗುಣಾತ್ಮಕ ಬದಲಾವಣೆ ಆಗಿದೆ. 2014 ರಿಂದೀಚೆಗೆ ಹಿಂದುತ್ವ ಮತ್ತು ನವ-ಉದಾರವಾದಿ ಬಂಡವಾಳಶಾಹಿಯ ಒಂದು ವಿಷಭರಿತ ಬೆಸುಗೆ ನಡೆದಿದ್ದು, ಅದು ಸ್ವಾತಂತ್ರ್ಯ ಸಮರದ ಎಲ್ಲ ಆದರ್ಶಗಳಿಗೆ, ಪ್ರಜಾಪ್ರಭುತ್ವ, ಜಾತ್ಯತೀತತೆ ಹಾಗೂ ರಾಷ್ಟ್ರೀಯ ಸಾರ್ವಭೌಮತೆಗೆ ಭಾರೀ ಅಪಾಯವನ್ನು ಒಡ್ಡಿದೆ.

ಬಿಜೆಪಿ-ಆರ್‌ಎಸ್‌ಎಸ್ 'ಹಿಂದೂ ರಾಷ್ಟ್ರ' ಗುರಿ ಸಾಧನೆಗೆ ಎಲ್ಲ ಪ್ರಭುತ್ವ ಸಂಸ್ಥೆಗಳನ್ನು ವಶಕ್ಕೆ ಪಡೆಯುವ ಹಾಗೂ ಅವುಗಳನ್ನು ಒಳಗಿನಿಂದಲೇ ಬುಡಮೇಲು ಮಾಡುವ ದೀರ್ಘ ಪಯಣವನ್ನು ಆರಂಭಿಸಿದೆ. ನರೇಂದ್ರ ಮೋದಿಯವರ ಕಳೆದ ಮೂರು ವರ್ಷಗಳ ಸ್ವಾತಂತ್ರ್ಯ ದಿನಾಚರಣೆ ಭಾಷಣಗಳನ್ನು ಕೇಳಿದವರಿಗೆ ಅವು ಕಂಡರಿಸುವ 'ನಯಾ ಭಾರತ್' ಪರಿಕಲ್ಪನೆಯ ರೂಪುರೇಷೆಯ ಇಣುಕುನೋಟ ಸಿಕ್ಕೇ ಸಿಗುತ್ತದೆ.

ಮೋದಿಯವರ 'ನಯಾಭಾರತ್'

ನರೇಂದ್ರ ಮೋದಿ ತಮ್ಮ 2018ರ ಆಗಸ್ಟ್ 15ರ ಭಾಷಣದಲ್ಲಿ, 2022ರೊಳಗೆ, ಅಂದರೆ ಸ್ವಾತಂತ್ರ್ಯದ 75ನೇ ವರ್ಷಾಚರಣೆ ಹೊತ್ತಿಗೆ 'ನಯಾ ಭಾರತ್' ನಿರ್ಮಿಸುವ ಬಗ್ಗೆ ಮಾತನಾಡಿದ್ದರು. ಈ 'ನಯಾ ಭಾರತ್' ಎಂದರೆ ಏನೆಂಬುದು ಕ್ರಮೇಣ ಅನಾವರಣಗೊಳ್ಳಲು ಆರಂಭವಾಯಿತು. 2019ರಲ್ಲಿ, ಆಗಸ್ಟ್ 5ರಂದು ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಕಳಚಿ ಹಾಕಿ, ಆ ರಾಜ್ಯವನ್ನು ರದ್ದುಪಡಿಸಿದ 10 ದಿನಗಳ ನಂತರ ತನ್ನ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಮೋದಿ, 'ಒಂದು ದೇಶ, ಒಂದು ಸಂವಿಧಾನ'ದ ಚಿಂತನೆ ಹಾಗೂ ಸರ್ದಾರ್ ಪಟೇಲ್‌ರ 'ಒಂದು ಭಾರತ, ಶ್ರೇಷ್ಠ ಭಾರತ'ದ ಕನಸನ್ನು ತಾನು ಸಾಕಾರಗೊಳಿಸಿರುವುದಾಗಿ ಹೆಮ್ಮೆಯಿಂದ ಪ್ರಕಟಿಸಿದರು. ಇದು ಹೆಚ್ಚೂ ಕಮ್ಮಿ ಆರ್‌ಎಸ್‌ಎಸ್‌ನ 'ಅಖಂಡ ಭಾರತ' ಘೋಷಣೆಯಂತೇ ಧ್ವನಿಸಿತ್ತು.

ಅದೇ ವರ್ಷ ಡಿಸೆಂಬರ್‌ನಲ್ಲಿ ಸಂಸತ್ತಿನಲ್ಲಿ ಪೌರತ್ವ ತಿದ್ದುಪಡಿ ಕಾನೂನು ತರಲಾಯಿತು. ಆ ಮೂಲಕ ಅದೇ ಮೊದಲ ಬಾರಿಗೆ ಪೌರತ್ವಕ್ಕೆ ಧಾರ್ಮಿಕ ಮಾನದಂಡವನ್ನು ಅನ್ವಯಿಸಲಾಯಿತು. ಇದು ಒಂದು ಜಾತ್ಯತೀತ ದೇಶದಲ್ಲಿ ಪೌರತ್ವದ ಮೂಲ ಕಲ್ಪನೆಗೇ ವಿರುದ್ಧವಾದುದಾಗಿದೆ.

ಮರುವರ್ಷ, ಅಂದರೆ 2020ರಲ್ಲಿ, ಕೋವಿಡ್ ಸಾಂಕ್ರಾಮಿಕತೆಯ ನಡುವೆಯೇ ಆಗಸ್ಟ್ 5ರಂದು ಅಯೋಧ್ಯೆಯಲ್ಲಿ ಪ್ರಧಾನ ಮಂತ್ರಿಗಳು ಆರ್‌ಎಸ್‌ಎಸ್ ಮುಖ್ಯಸ್ಥರ ಸಮ್ಮುಖದಲ್ಲಿ ರಾಮ ಮಂದಿರ ನಿರ್ಮಾಣದ ಶಂಕುಸ್ಥಾಪನೆ ನೆರವೇರಿಸಿದರು. ಅದು ಒಂದು ಸ್ವಾತಂತ್ರ್ಯದ ದಿನವೆಂದು ಮೋದಿ ಘೋಷಿಸಿದರು. ಹತ್ತು ದಿನಗಳ ನಂತರ ಸ್ವಾತಂತ್ರ್ಯ ದಿನದ ಭಾಷಣದಲ್ಲಿ 'ದೀರ್ಘ ಕಾಲದ ರಾಮ ಜನ್ಮಭೂಮಿ ವಿವಾದ ಒಂದು ಶಾಂತಿಯುತ ಅಂತ್ಯ ಕಂಡಿದೆ' ಎಂದರು. ಈ 'ಶಾಂತಿಯುತ' ಅಂತ್ಯದ ಹಿಂದೆ ಹಿಂಸೆ ಹಾಗೂ ರಕ್ತದೋಕುಳಿಯ ಒಂದು ದೊಡ್ಡ ಜಾಡು ಇದೆ. 1992 ಡಿಸೆಂಬರ್‌ನಲ್ಲಿ ಬಾಬರಿ ಮಸೀದಿ ಧ್ವಂಸದ ಹಿನ್ನೆಲೆಯಲ್ಲಿ ಸ್ಫೋಟಗೊಂಡ ಹಿಂಸಾಚಾರದಲ್ಲಿ ಸಾವಿರಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಆದರೆ, ಮೋದಿಯವರಿಗೆ ಮಂದಿರ ಇನ್ಯಾವುದರದ್ದೋ ಮಹತ್ವದ ಸಂಕೇತವಾಗಿಯೂ ಕಾಣುತ್ತದೆ. "ಅಭಿವೃದ್ಧಿಯ ಮಹಾ ಯಜ್ಞದಲ್ಲಿ ಪ್ರತಿಯೊಬ್ಬ ಭಾರತೀಯ ಏನನ್ನಾದರೂ ತ್ಯಾಗ ಮಾಡಬೇಕಾಗುತ್ತದೆ" ಎಂದವರು ಹೇಳಿದರು. ಹೀಗಾಗಿ, ಅವರ ಲೆಕ್ಕದಲ್ಲಿ ಮಂದಿರವು ರಾಷ್ಟ್ರೀಯ ಅಭಿವೃದ್ಧಿಯ ಒಂದು ಸಂಕೇತವಾಗುತ್ತದೆ, ಅದಕ್ಕಾಗಿ ಪ್ರತಿ ಭಾರತೀಯನೂ ತ್ಯಾಗ ಮಾಡಬೇಕು.

ಹೀಗೆ ಕಳೆದ ಎರಡು ವರ್ಷಗಳಲ್ಲಿ 'ನಯಾ ಭಾರತ್'ನ ಸಂಕೇತಗಳು ಅನಾವರಣಗೊಂಡಿವೆ: ಅಯೋಧ್ಯೆಯ ರಾಮ ಮಂದಿರ, ಹೊಸ ಸಂಸತ್ ಭವನ ಕಟ್ಟಡದೊಂದಿಗೆ ಸೆಂಟ್ರಲ್ ವಿಸ್ಟಾ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಸರ್ಜನೆ. ಇವು ಅನುಕ್ರಮವಾಗಿ ಜಾತ್ಯತೀತತೆ, ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲಿನ ವಿಕೃತ ಆಕ್ರಮಣವನ್ನು ಸಂಕೇತಿಸುತ್ತವೆ.

ವಿಷಮಯ ಮಿಶ್ರಣ

'ನಯಾ ಭಾರತ್' ಹಿಂದುತ್ವ ಸರ್ವಾಧಿಕಾರಶಾಹಿ ಹಾಗೂ ಕಾರ್ಪೊರೇಟ್ ನವ-ಉದಾರವಾದದ ಒಂದು ವಿಷಕಾರಿ ಮಿಶ್ರಣವಾಗಿದೆ. ಮೋದಿ 'ನಯಾ ಭಾರತ್'ದ ಗುರಿಯನ್ನು ಘೋಷಿಸಿದ ಮೂರು ವರ್ಷಗಳಲ್ಲಿ ಕಾರ್ಪೊರೇಟ್ ತೆರಿಗೆಗಳಲ್ಲಿ ಭಾರೀ ಕಡಿತಗಳಾಗಿವೆ, ದೊಡ್ಡ ಕಾರ್ಪೊರೇಟ್‌ಗಳ ಲಕ್ಷಾಂತರ ಕೋಟಿ ರೂಪಾಯಿಗಳ ಸಾಲಗಳನ್ನು ಮನ್ನಾ ಮಾಡಲಾಗಿದೆ. ದೊಡ್ಡ ಪ್ರಮಾಣದ ಖಾಸಗೀಕರಣದ ಮೂಲಕ ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಕಳಚಿ ಹಾಕುವ ಯೋಜನೆಗಳನ್ನು ಹಾಕಲಾಗಿದೆ. ಕೃಷಿ ವ್ಯಾಪಾರ ಮತ್ತು ಮಾರುಕಟ್ಟೆ ಕ್ಷೇತ್ರದಲ್ಲಿ ಕಾರ್ಪೊರೇಟ್ ಪ್ರವೇಶಕ್ಕೆ ಅನುಕೂಲ ಮಾಡಲು ಸಂಸತ್ತಿನ ಮೂಲಕ ಮೂರು ಕೃಷಿ ಕಾನೂನುಗಳನ್ನು ಬಲವಂತದಿಂದ ತರಲಾಗಿದೆ. ಅಸಹ್ಯ ಮಟ್ಟಗಳ ಅಸಮಾನತೆಗಳ ಭಾರತವನ್ನು ನಿರ್ಮಿಸಲಾಗುತ್ತಿದೆ. 'ಕ್ರೆಡಿಟ್ ಸುಯ್ಸ್'ನ 2021ರ ಸಂಪತ್ತು ಕುರಿತ ವರದಿಯ ಪ್ರಕಾರ, 2020ರ ಅಂತ್ಯದಲ್ಲಿ ತುದಿಯಲ್ಲಿನ ಒಂದು ಶೇಕಡ ಜನರ ಸಂಪತ್ತಿನ ಪಾಲು 40.5% ವರೆಗೆ ಏರಿದೆ. ಫೋರ್ಬ್ಸ್ ವರದಿ ಪ್ರಕಾರ, ಭಾರತದಲ್ಲಿ 2020ರಲ್ಲಿದ್ದ 102 ಇದ್ದ ಬಿಲಿಯಾಧಿಪತಿಗಳ ಸಂಖ್ಯೆ 2021ರಲ್ಲಿ 140ಕ್ಕೆ ಏರಿದೆ. ಕೋವಿಡ್ ಸಾಂಕ್ರಾಮಿಕತೆಯ ಕಾಲದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ಬಡತನ ಕಾಡುತ್ತಿದ್ದಾಗ ಈ ಅಭೂತಪೂರ್ವ ಏರಿಕೆ ಆಗಿರುವುದನ್ನು ಗಮನಿಸಬೇಕು.

ಕಳೆದ ವರ್ಷ, ಅಂದರೆ 2020ರ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಮೋದಿ 'ಆತ್ಮನಿರ್ಭರ ಭಾರತ'ದ ಘೋಷಣೆ ಕೊಟ್ಟರು. 'ನಯಾ ಭಾರತ್' ಸ್ವಾವಲಂಬಿ ಭಾರತವಾಗಿರುತ್ತದೆ ಎಂದು ಸೂಚಿಸಿದರು. "ಸ್ವಾತಂತ್ರ್ಯದ 75ನೇ ವರ್ಷಾಚರಣೆಗೆ ನಾವು ಕೇವಲ ಒಂದು ಹೆಜ್ಜೆ ದೂರವಿರುವುದರಿಂದ ಭಾರತದಂಥ ದೇಶ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವುದು ಹಾಗೂ ಸ್ವಾವಲಂಬಿಯಾಗುವುದು ಅಗತ್ಯ' ಎಂದವರು ಹೇಳಿದ್ದರು.

ಬೂಟಾಟಿಕೆಯ ಪರಮಾವಧಿ

ಬೂಟಾಟಿಕೆಯ ಈ ಪ್ರಮಾಣ ಏದುಸಿರು ಬಿಡುಂತೆ ಮಾಡುವಂತದ್ದು. ಸ್ವಾವಲಂಬನೆಯ ಘೋಷಣೆ ಮಾಡಿದ ನಂತರ, ಸರಕಾರ ತನ್ನ 'ಆತ್ಮನಿರ್ಭರ್ ಭಾರತ್ ಅಭಿಯಾನ' ಪ್ಯಾಕೇಜಿನ ಭಾಗವಾಗಿ ಆಯಕಟ್ಟಿನ ವಲಯಗಳನ್ನು ಹೊರತುಪಡಿಸಿ ಇತರೆಲ್ಲ ಕ್ಷೇತ್ರಗಳ ಎಲ್ಲ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗೀಕರಿಸುವುದಾಗಿ ಘೋಷಿಸಿತು. ಆಯಕಟ್ಟಿನ ಕ್ಷೇತ್ರಗಳಲ್ಲೂ ಕೂಡ ಪ್ರತಿ ಕ್ಷೇತ್ರದಲ್ಲಿ ಗರಿಷ್ಠ ನಾಲ್ಕು ಸಾರ್ವಜನಿಕ ಉದ್ದಿಮೆಗಳಷ್ಟೇ ಉಳಿಯುತ್ತವೆ. ಅದಕ್ಕೂ ಮುನ್ನ ರಕ್ಷಣಾ ಉತ್ಪಾದನೆಯಲ್ಲಿ ಶೇಕಡ 100ರಷ್ಟು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆ ಅವಕಾಶವನ್ನು ಸರ್ಕಾರ ಘೋಷಿಸಿತ್ತು. ಇವೆಲ್ಲವೂ ಜನರ ಸಂಪನ್ಮೂಲಗಳಿಂದ ಕಟ್ಟಲಾಗಿರುವ ಸಾರ್ವಜನಿಕ ವಲಯವನ್ನು ದೊಡ್ಡ ಭಾರತೀಯ ಕಾರ್ಪೊರೇಟ್‌ಗಳು ಹಾಗೂ ವಿದೇಶಿ ಕಂಪೆನಿಗಳು ಸಲೀಸಾಗಿ ಕಬಳಿಸಲು ಅವಕಾಶ ಕಲ್ಪಿಸಲು ಹೊಸೆದ ಕ್ರಮಗಳು. ಈ ಹೆಜ್ಜೆಗಳು ದೇಶದ ಆರ್ಥಿಕ ಸಾರ್ವಭೌಮತ್ವವನ್ನು ದುರ್ಬಲಗೊಳಿಸಲಿವೆ.

ಸರ್ಕಾರಿ ಉದ್ದಿಮೆಗಳ ಖಾಸಗೀಕರಣವೂ ಒಂದು ಭಾಗವಾಗಿರುವ ನವ-ಉದಾರವಾದಿ ನೀತಿಗಳ ಆಕ್ರಮಣಕಾರೀ ಅನುಸರಣೆ ರಾಜಕೀಯ ವ್ಯವಸ್ಥೆಯ ಮೇಲೆ ದುಷ್ಟ ಪ್ರಭಾವಗಳನ್ನು ಬೀರಿವೆ ಹಾಗೂ ಪ್ರಜಾಪ್ರಭುತ್ವವನ್ನು ಕ್ಷೀಣಗೊಳಿಸಿವೆ. ರಾಜಕಾರಣ ಮತ್ತು ದೊಡ್ಡ ಬಂಡವಾಳದ ನಡುವಿನ ಶಾಮೀಲು ಹೆಚ್ಚು ಸ್ಫುಟವಾಗಿ ಕಾಣುತ್ತಿದೆ. ಚುನಾವಣಾ ಬಾಂಡ್ ವ್ಯವಸ್ಥೆಯು ಈ ಕೂಟಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಸಂಸತ್ತು ಅಪಮೌಲ್ಯಗೊಂಡಿದೆ. ಚುನಾವಣೆಯಲ್ಲಿ ಜನಾದೇಶಗಳನ್ನು ಬುಡಮೇಲು ಮಾಡಿ ರಾಜ್ಯ ಸರ್ಕಾರಗಳನ್ನು ರಚಿಸಲು ದೊಡ್ಡ ಪ್ರಮಾಣದಲ್ಲಿ ಪಕ್ಷಾಂತರವನ್ನು ಪ್ರಚೋದಿಸಲಾಗುತ್ತಿದೆ. 'ನಯಾ ಭಾರತ್' ಮತ್ತು 'ಅರೆ-ಪ್ರಜಾಪ್ರಭುತ್ವ' ಎಂಬುದು ಸಮಾನಾರ್ಥಕ ಪದಗಳಾಗಿ ಬಿಟ್ಟಿವೆ.

ಮೋದಿ ಸರಕಾರ ಆಂಕ್ರಾಮಿಕವನ್ನು ನಿರ್ವಹಿಸಿದ ರೀತಿಯಿಂದಾಗಿ, ಅದರ ಈ ಯೋಜನೆ ಜಾಳಾಗಿ ಬಿಟ್ಟರೂ, ಈ ರೀತಿಯಾಗಿ ಭಾರತದ ಪುನಾರಚನೆ ಪ್ರಕ್ರಿಯೆ ಭರದಿಂದ ಸಾಗಿದೆ. 'ನಯಾ ಭಾರತ್'ಗೂ ಒಂದು ವೈಜ್ಞಾನಿಕ ಮನೋಭಾವದೊಂದಿಗಿನ ಆಧುನಿಕ, 'ಜಾತ್ಯತೀತ ಭಾರತದ ನಿರ್ಮಾಣಕ್ಕೂ ಯಾವ ಸಂಬಂಧವೂ ಇಲ್ಲ. ಅದು 'ಹಿಂದೂ ರಾಷ್ಟ್ರ'ದ ನೀಲನಕ್ಷೆಯನ್ನು ಆಧರಿಸಿದ್ದಾಗಿದೆ. ಸ್ವಾತಂತ್ರ್ಯ ಹೋರಾಟದಿಂದ ದೂರ ನಿಂತಿದ್ದ ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಜಾತ್ಯತೀತ ಸಾಮ್ರಾಜ್ಯಶಾಹಿ-ವಿರೋಧಿ ಮೌಲದ ಬಗ್ಗೆ ಯಾವುದೇ ರೀತಿಯ ಒಲವೇ ಇಲ್ಲದ ಶಕ್ತಿಗಳು ಈ ಯೋಜನೆಯನ್ನು ರೂಪಿಸುತ್ತಿವೆ.

ಹೊಸ ಪರ್ಯಾಯ ಮೂಡಿಬರುತ್ತಿದೆ

ಈಗಿನ್ನು ಬೂರ್ಜ್ವಾ ಉದಾರವಾದಿ "ಭಾರತದ ಕಲ್ಪನೆ"ಗೆ ಮರಳಲು ಸಾಧ್ಯವಿಲ್ಲ. 'ಹಿಂದುತ್ವ'ದ 'ನಯಾಭಾರತ್'ಗೆ ಪರ್ಯಾಯವು ಜನತೆಯ ಪ್ರತಿರೋಧ ಮತ್ತು ಹೋರಾಟಗಳ ಮೂಲಕ ಬೆಸೆಯುವ ಒಂದು ಹೊಸ ಸಾಮಾಜಿಕ ಒಡಂಬಡಿಕೆಯಿಂದ ಮೂಡಿ ಬರುತ್ತದೆ.

ವರ್ಗ ಹಾಗೂ ಸಾಮೂಹಿಕ ಹೋರಾಟಗಳಲ್ಲಿ 'ನಯಾ ಭಾರತ್'ಗೆ ಸವಾಲು ರೂಪುಗೊಳ್ಳುತ್ತಿದೆ. ಒಂಬತ್ತು ತಿಂಗಳಿಂದ ನಡೆಯುತ್ತಿರುವ ರೈತರ ಐತಿಹಾಸಿಕ ಹೋರಾಟವು ಕಾರ್ಪೊರೇಟ್ ಹಿಂದುತ್ವ ಆಳ್ವಿಕೆಯ ಬುಡಕ್ಕೇ ಸವಾಲು ಒಡ್ಡಿದೆ. ಇದಕ್ಕೆ ಮೊದಲು ಪೌರತ್ವ ತಿದ್ದುಪಡಿ ಕಾನೂನು (ಸಿಎಎ) ಹಾಗೂ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ವಿರುದ್ಧ ನಡೆದ ಸಾಮೂಹಿಕ ಪ್ರತಿಭಟನೆಗಳು ಒಂದು ಪ್ರಜ್ಞಾವಂತ ನಾಗರಿಕತ್ವದ ಅಸ್ತಿತ್ವವನ್ನು, ಅದು ಬಹುಸಂಖ್ಯಾತವಾದಿ ಕೋಮುವಾದದ ಕೈಮೇಲಾಗಲು ಬಿಡುವುದಿಲ್ಲ ಎಂದು ತೋರಿಸಿತ್ತು. ವಿಶಾಖಪಟ್ಟಣಂ ಉಕ್ಕು ಕಾರ್ಖಾನೆಯ ಖಾಸಗೀಕರಣದ ವಿರುದ್ಧ ಜನಪ್ರಿಯ ಹೋರಾಟದಂತಹ ಒಟ್ಟು ಖಾಸಗೀಕರಣದ ವಿರುದ್ಧ ಕಾರ್ಮಿಕ ವರ್ಗದ ಹೋರಾಟಗಳು ಒಂದು ಹೊಸ ಮಟ್ಟವನ್ನೇ ಸೃಷ್ಟಿಸುತ್ತಿವೆ. ರಕ್ಷಣಾ ಉತ್ಪಾದನೆ ಕ್ಷೇತ್ರದ ಕಾರ್ಮಿಕರು, ವಿಮಾ ನೌಕರರು ಮತ್ತು ಇತರೇ ಕ್ಷೇತ್ರಗಳ ಹೋರಾಟಗಳೆಲ್ಲವೂ ನವ-ಉದಾರವಾದಿ ನೀತಿಗಳ ವಿರುದ್ಧ ಪ್ರತಿರೋಧವನ್ನು ವಿಸ್ತಾರಗೊಳಿಸುವಲ್ಲಿ ಕೊಡುಗೆ ನೀಡುತ್ತಿವೆ.

ಈ ಪ್ರತಿರೋಧ'ಗಳು ಹಾಗೂ ಜನ ಚಳವಳಿಗಳ ನಡುವಿನಿಂದ ಪರ್ಯಾಯವೊಂದು ಹೊರಹೊಮ್ಮಲಿದೆ. ಅದೊಂದು ಎಡ ಹಾಗೂ ಪ್ರಜಾಸತ್ತಾತ್ಮಕ ಕಾರ್ಯಕ್ರಮವನ್ನು ಆಧರಿಸಿದ ಪರ್ಯಾಯ ವಾಗಿರಬೇಕು. ಅಂಥ ಕಾರ್ಯಕ್ರಮವು ಸ್ವಾತಂತ್ರ್ಯ ಹೋರಾಟದ ಗುರಿಗಳನ್ನು, ಅಂದರೆ ಜನತೆಯ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಮೋಚನೆಯ ಗುರಿಗಳನ್ನು ಮುಂದಕ್ಕೆ ಒಯ್ಯುತ್ತದೆ. ಇಂತಹ ಒಂದು ಪರ್ಯಾಯದ ಸುತ್ತ ವ್ಯಾಪಕ ದುಡಿಯುವ ಜನವಿಭಾಗಗಳನ್ನು ಹಾಗೂ ಎಲ್ಲ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳನ್ನು ಸಂಘಟಿಸಬೇಕಾಗಿದೆ, ಅಣಿನೆರೆಯಿಸಬೇಕಾಗಿದೆ.

ಅನು: ವಿಶ್ವ



ಮಗುವಿನ ತಾಯಿ ನ್ಯಾಯಕ್ಕಾಗಿ ಕಾಯುತ್ತಿದ್ದಾಳೆ ಅಮಿತ್ ಷಾ ಏಕೆ ಮೌನವಾಗಿದ್ದಾರೆ?



ಚಿತ್ರಕೃಪೆ: ನ್ಯೂಸ್‌ಲಾಂಡ್ರಿ

ದಿಲ್ಲಿಯ ಅತ್ಯಂತ ಸುರಕ್ಷಿತ ಕಂಟೋನ್ಮೆಂಟ್ ಪಕ್ಕದ ಪುರಾನೀ ನಾಂಗಲ್‌ನಲ್ಲಿ ನಡೆದ ಭೀಕರ ಅಪರಾಧಕ್ಕೆ ಬಲಿಯಾದದ್ದು ಒಂದು ನಿರ್ಬಲ ದಲಿತ ಮಗು. ಆ ಅಪರಾಧ ಅತ್ಯಾಚಾರ ಮತ್ತು ಕೊಲೆಯದ್ದು ಇರಬಹುದು. ಆದರೆ ಬಲವಂತದ ದಹನ ಸಂಸ್ಕಾರದ್ದು, ಸಂತ್ರಸ್ತೆಯ ಪೋಷಕರನ್ನು ಕಾನೂನುಬಾಹಿರವಾಗಿ ಬಂಧಿಸಿಟ್ಟದ್ದು, ಜಾತಿವಾದಿ ಅಭಯಹಸ್ತದ್ದು ಹಾಗೂ ಪೋಲೀಸರ ತಪ್ಪಿನದ್ದು ಎಂಬುದಂತೂ ಬಹುಪಾಲು ಖಚಿತ. ಆ ಮಗುವಿನ ಸಾವು ಭಾರತದ ಬಡವರಿಗೆ ಮತ್ತು ವಂಚಿತರಿಗೆ ನಾಗರಿಕತ್ವದ ಹಕ್ಕುಗಳ ನಿರಾಕರಣೆ ಮುಂದುವರೆಯುತ್ತಿರುವ, ಅಥವ ಅದು ಇನ್ನಷ್ಟು ತೀವ್ರಗೊಳ್ಳುತ್ತಿರುವ, ಮತ್ತು ದೇಶದ ರಾಜಧಾನಿಯಲ್ಲೂ ವರ್ಗ ಮತ್ತು ಜಾತಿ-ಆಧಾರಿತ ಹಿಂಸಾಚಾರಕ್ಕೆ ದಾರಿ ಮಾಡಿಕೊಡುತ್ತಿರುವ ಒಂದು ಬಹು ಗಹನ ಪ್ರಶ್ನೆಯನ್ನು ಎತ್ತಿದೆ. ದೆಹಲಿಯಲ್ಲಿ, ಪೋಲೀಸರು ನೇರವಾಗಿ ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿದ್ದಾರೆ. ಆದರೆ ಶ್ರೀ ಅಮಿತ್ ಷಾ ಮೌನವಾಗಿದ್ದಾರೆ. ಮಗು ಮತ್ತು ಆಕೆಯ ಪೋಷಕರ ಬಗ್ಗೆ ಒಂದೇ ಒಂದು ಅನುಕಂಪದ ಮಾತಿಲ್ಲ, ಮಗುವಿನ ಬಲವಂತದ ದಹನಕ್ರಿಯೆಯ ಕೃತ್ಯಕ್ಕೆ ಒಂದೇ ಒಂದು ಖಂಡನೆಯಿಲ್ಲ.



ಬೃಂದಾ ಕಾರಟ್

(ಎನ್ ಡಿ ಟಿ ವಿ. ಕಾಂ ನಲ್ಲಿ ಪ್ರಕಟವಾದ ಲೇಖನದ ಕನ್ನಡ ಅನುವಾದ. ಅನು: **ಲವಿತ್ರ**)

ವಂದನಾ ಕಟಾರಿಯ, ಪ್ರತಿಭಾಶಾಲಿ ಯುವ ಹಾಕಿ ಆಟಗಾರ್ತಿ, ಭಾರತದ ಹಾಕಿ ತಂಡದ ಭಾಗವಾಗಿ ಭಾರತಕ್ಕಾಗಿ ಒಲಿಂಪಿಕ್‌ನಲ್ಲಿ ಹೃದಯಪೂರ್ವಕಾಗಿ ಆಡುತ್ತಿದ್ದಳು. ಅದೇ ಸಂದರ್ಭದಲ್ಲಿ ಹರಿದ್ವಾರದಲ್ಲಿದ್ದ ಅವಳ ಕುಟುಂಬ ಜಾತಿ ನಿಂದನೆಯನ್ನು ಎದುರಿಸುತ್ತಿತ್ತು. ವಂದನಾ ಒಂದು ದಲಿತ ಸಮುದಾಯಕ್ಕೆ ಸೇರಿದವಳು. ತಂಡದಲ್ಲಿ ದಲಿತರನ್ನು ಸೇರಿಸಿಕೊಂಡಿರುವುದರಿಂದಲೇ ಭಾರತ ಸೋತಿದೆ ಎಂದು ಮೇಲ್ಜಾತಿಯ ಪುರುಷರು ದೂಷಿಸುತ್ತಿದ್ದರು. ನಿಜ, ಈಗ ಅವರನ್ನು ಬಂಧಿಸಲಾಗಿದೆ ಮತ್ತು, ಹೌದು, ಹಳ್ಳಿಯ ಇತರರು ಈ ಜಾತಿವಾದಿ ಕೃತ್ಯಗಳನ್ನು ಖಂಡಿಸಿದ್ದಾರೆ. ಆದರೆ ಈ ಅಪರಾಧಿಗಳಿಗೆ ಇದನ್ನು ಹೇಳುವ ಭಂಡತನವಾದರೂ ಹೇಗೆ ಬಂತು? ಒಂದು ಜಾತಿ-ಶ್ರೇಣಿ ವ್ಯವಸ್ಥೆ ಕೊಡಮಾಡಿರುವ ಅರ್ಹತೆಯಿಂದ ಮತ್ತು ಅಭಯದಿಂದ-ಕಾನೂನು ಪ್ರಕಾರ ನಿರ್ಮೂಲವಾಗಿದ್ದರೂ, ಧರ್ಮದ ಹೆಸರಿನಲ್ಲಿ, ಸಂಪ್ರದಾಯದ ಹೆಸರಿನಲ್ಲಿ ಉಳಿದುಕೊಂಡಿರುವ ಒಂದು ವ್ಯವಸ್ಥೆಯಿಂದ. ಈ ಅಭಯ ತಮ್ಮ ಶಕ್ತಿಯನ್ನು ಹೆಚ್ಚಿಸುವ ಸಾಧನವಾಗಿ ಜಾತಿ ಹೆಸರಲ್ಲಿ ಅಪರಾಧ ಎಸಗುವವರನ್ನು ರಕ್ಷಿಸುವ ಒಂದು ರಾಜಕಾರಣದಿಂದಲೂ ಸಿಗುತ್ತದೆ. ರಾಜಧಾನಿಯ ಹೃದಯಭಾಗದಲ್ಲಿ ಒಂದು ದಲಿತ ಮಗುವಿನ ಮೇಲೆ ಎಸಗಿದ ಅಪರಾಧಕ್ಕೆ ಭಾರತವನ್ನು ಇಂದು ಆಳುತ್ತಿರುವವರಿಂದ ಒಂದಾದರೂ ಅನುಕಂಪದ ಮಾತು ಬರದೇ ಹೋಗಿರುವುದು ಕೂಡ ಇದರಿಂದಾಗಿಯೇ,

ಅವಳು ಕೇವಲ 9 ವರ್ಷದ ಹುಡುಗಿ. ಅವಳ ತಾಯಿ ಹೇಳುತ್ತಾಳೆ, ಒಂದು ಮಗುವನ್ನು ಪಡೆಯುತ್ತೇನೆ ಎಂಬ ಭರವಸೆಯನ್ನೇ ತ್ಯಜಿಸಿದ ಎಷ್ಟೋ ಸಮಯದ ನಂತರ ಅನಿರೀಕ್ಷಿತವಾಗಿ ಕೊಡುಗೆಯಾಗಿ ಜನಿಸಿದ ಏಕೈಕ ಮಗು ಅವಳು. ಅದರಿಂದಾಗಿ ಇನ್ನಷ್ಟು ಅಮೂಲ್ಯ ಮತ್ತು ಇನ್ನಷ್ಟು ಪ್ರಿಯ. ಅವರ ಈ ದುಃಖದ ಸಂದರ್ಭದಲ್ಲಿ ನಮ್ಮ ಬೆಂಬಲವನ್ನು ಸೂಚಿಸಲು, ನಮ್ಮ ಸೌಹಾರ್ದವನ್ನು ವ್ಯಕ್ತಪಡಿಸಲು ನಾನು ಮತ್ತು ನನ್ನ ಸಂಗಾತಿಗಳು ಭೇಟಿಯಾಗಲು ಹೋಗಿದ್ದೆವು. ನಮ್ಮ ಸುತ್ತಮುತ್ತ ಹತ್ತಾರು ಮಂದಿ ಇದ್ದರು, ಅವರ ಬಗ್ಗೆ ಕಾಳಜಿ ಇರುವ ನಾಗರಿಕರು, ಮುಖ್ಯವಾಗಿ ಆ ಮಗು ವಾಸಿಸುತ್ತಿದ್ದ ಕಾಲೋನಿಯವರು, ಮತ್ತು ಅವರನ್ನು ಬೆಂಬಲಿಸಿ ನಗರದ ವಿವಿಧ ಭಾಗಗಳಿಂದ ಬಂದಿದ್ದವರು, ಈ ಅನಾಗರಿಕ ಅಪರಾಧದ ವಿರುದ್ಧ ಹೋರಾಟ ಮಾಡಲು ಬೀದಿಗಿಳಿದಿದ್ದವರು. ಅವರಿಲ್ಲದಿದ್ದರೆ, ಅವರು ಸಾಮೂಹಿಕವಾಗಿ ದನಿಯೆತ್ತಿರದಿದ್ದರೆ ಈ ಅಪರಾಧವನ್ನು ಶಾಶ್ವತವಾಗಿ ಸಮಾಧಿ ಮಾಡಲಾಗುತ್ತಿತ್ತು.

ಬಹುಶಃ ಆ ಅಪರಾಧ ಅತ್ಯಾಚಾರ ಮತ್ತು ಕೊಲೆಯದ್ದು, ಆದರೆ ಖಂಡಿತವಾಗಿಯೂ ಬಲವಂತದ ದಹನ ಸಂಸ್ಕಾರದ್ದು, ಸಂತ್ರಸ್ತೆಯ ಪೋಷಕರನ್ನು ಕಾನೂನುಬಾಹಿರವಾಗಿ ಬಂಧಿಸಿಟ್ಟದ್ದು, ಜಾತಿವಾದಿ ಅಭಯದ್ದು ಹಾಗೂ ಪೋಲೀಸರ ತಪ್ಪಿನದ್ದು

ಬಲಿಯಾದದ್ದು ಒಂದು ನಿರ್ಬಲ ದಲಿತ ಮಗು. ಆಕೆಯ ಸಾವು ಭಾರತದ ಬಡವರಿಗೆ ಮತ್ತು ವಂಚಿತರಿಗೆ ನಾಗರಿಕತ್ವದ ಹಕ್ಕುಗಳ ನಿರಾಕರಣೆ ಮುಂದುವರೆಯುತ್ತಿರುವ, ಅಥವ ಇನ್ನಷ್ಟು ತೀವ್ರಗೊಳ್ಳುತ್ತಿರುವ, ಅದು ದೇಶದ ರಾಜಧಾನಿಯಲ್ಲೂ ಅವರ ವಿರುದ್ಧ ವರ್ಗ ಮತ್ತು ಜಾತಿ-ಆಧಾರಿತ ಹಿಂಸಾಚಾರಕ್ಕೆ ದಾರಿ ಮಾಡಿಕೊಡುತ್ತಿರುವ ಒಂದು ಬಹು ಗಹನ ಪ್ರಶ್ನೆಯನ್ನು ಎತ್ತಿದೆ.


ಆ ಭಾನುವಾರ, ಆಗಸ್ಟ್ ಒಂದರಂದು ತಾಯಿ ಮತ್ತು ಮಗಳು ಎಂದಿನಂತೆ "ಸೈಯದ್ ಜಲಾಲುದ್ದೀನ್ ಸಾಹಿಬ್" ಮಸೀದಿ ಬಳಿ ಭಿಕ್ಷೆಗಾಗಿ ಕುಳಿತಿದ್ದರು. ಈ ಸ್ಥಳವು ಅವರಿಗೆ ಆಶ್ರಯವಾಗಿತ್ತು. ಅಲ್ಲಿನ ಸ್ಥಳವನ್ನು ಸ್ವಚ್ಛಗೊಳಿಸುತ್ತಿದ್ದರು, ಸ್ವಲ್ಪ ಹಣವನ್ನೂ ಸಂಪಾದಿಸುತ್ತಿದ್ದರು, ಅಲ್ಲಿ ಅವರು ತಮ್ಮ ಅನೇಕ ದಿನಗಳನ್ನು ಕಳೆದಿದ್ದಾರೆ ಎಂದು ಆ ತಾಯಿ ಹೇಳುತ್ತಾಳೆ. ಚಿಂದಿ ಆಯುವುದರಿಂದ ಜೀವನ ಸಾಗಿಸುತ್ತಿರುವ ಮಗುವಿನ ತಂದೆ ಹಗಲಿನಲ್ಲಿ ಸಂಗ್ರಹಿಸಿದ ಪ್ಲಾಸ್ಟಿಕ್ ತ್ಯಾಜ್ಯವನ್ನು ಮಾರಾಟಮಾಡಲು ಪಕ್ಕದ ಮಾರುಕಟ್ಟೆಯಲ್ಲಿದ್ದ. ಈ ಕುಟುಂಬವು ವಾಲ್ಮೀಕಿ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ್ದು ಹಲವು ವರ್ಷಗಳಿಂದ ಕಾಲನಿಯಲ್ಲಿ ಶೋಚನೀಯ ಸ್ಥಿತಿಯಲ್ಲಿ ವಾಸಿಸುತ್ತಿದೆ. ಮಗುವಿಗೆ ಶಾಲೆಗೆ ಹೋಗುವ ಅವಕಾಶವೇ ದೊರೆಯಲಿಲ್ಲ. "ನಾವು ಈಗ ಸ್ವಲ್ಪ ಮಟ್ಟಿಗೆ ನೆಲೆಯಾಗಿದ್ದೇವೆ, ಶಾಲೆಗಳು ತೆರೆದ ನಂತರ ನನ್ನ ಮಗಳನ್ನು ಶಾಲೆಗೆ ಸೇರಿಸುತ್ತೇನೆ ಎಂದುಕೊಂಡಿದ್ದೆ" ಎನ್ನುತ್ತಾಳೆ ಅವಳ ತಾಯಿ.

ಸಂಜೆ ಸುಮಾರು ಐದು ಗಂಟೆ, ಮಗು ಹತ್ತಿರದ ಸ್ಮಶಾನದ ದೊಡ್ಡ ವಾಟರ್ ಕೂಲರ್‌ನಿಂದ ನೀರು ತರಲು ಹೋಗಿದ್ದಳು. ಅಂತ್ಯಕ್ರಿಯೆಗಳ ಉಸ್ತುವಾರಿ ನೋಡಿಕೊಳ್ಳುವ ಪೂಜಾರಿಯು ಕುಟುಂಬಕ್ಕೆ ಪರಿಚಯದವನಾಗಿದ್ದ. ದೆಹಲಿಯ ವಿವಿಧ ಭಾಗಗಳಲ್ಲಿ ಸಾಮಾನ್ಯವಾಗಿರುವಂತೆ ದಾರಿಹೋಕರ ಬಾಯಾರಿಕೆಯನ್ನು ನೀಗಿಸಲು ರಸ್ತೆಯಲ್ಲಿ ಇರಿಸಲಾದ ಕೂಲರ್‌ಗೆ ವಿದ್ಯುತ್ ಸಂಪರ್ಕವನ್ನೂ ಸಹ ಏರ್ಪಡಿಸಲಾಗಿದ್ದ ಕಾಲವೊಂದಿತ್ತು ಎಂದು ಆ ಪ್ರದೇಶದ ಹಿರಿಯರು ಹೇಳುತ್ತಾರೆ. ಅದನ್ನು ಸ್ಮಶಾನಕ್ಕೆ ಏಕೆ ಮತ್ತು ಯಾವಾಗ ಸ್ಥಳಾಂತರಿಸಲಾಯಿತು ಎಂದು ಯಾರಿಗೂ ಗೊತ್ತಿಲ್ಲ. ಇದೊಂದು ಸಣ್ಣ ವಿಷಯ ನಿಜ, ಆದರೆ ಇದು ಮಗುವಿನ ಬದುಕು ಮತ್ತು ಸಾವಿನ ನಡುವಿನ ಅಂತರವಾಗಿ ಬಿಟ್ಟಿತು.

ಅವತ್ತು ಅದಾಗಲೇ ಅವಳು ಒಂದು ಬಾರಿ ನೀರಿನ ಬಾಟಲಿಯನ್ನು ತುಂಬಿಸಿಕೊಂಡು ಬಂದಿದ್ದಳು. ಹಾಗಾಗಿ ತಾಯಿಗೆ ಯಾವುದೇ ಆತಂಕವಿರಲಿಲ್ಲ. ಆದರೆ ಸ್ವಲ್ಪ ಸಮಯದ ನಂತರ, ಪೂಜಾರಿಯು ನಿನ್ನ ಮಗಳು ಅಸ್ವಸ್ಥಳಾಗಿದ್ದಾಳೆ, ಸ್ಮಶಾನಕ್ಕೆ ಬಾ ಎಂದ. ಯಾವುದೇ ಸಂದೇಹ ಪಡದೆ ತಾಯಿ ಒಬ್ಬಳೇ ಅಲ್ಲಿಗೆ ಹೋದಳು. ಪೂಜಾರಿ ನಿರ್ಜೀವ ಮಗುವಿನ ದೇಹವನ್ನು ತೋರಿಸಿದ, "ವಿದ್ಯುತ್ ಹರಿದಿದೆ" ಎಂದ – ಎನ್ನುತ್ತಾಳೆ ತಾಯಿ. ಅಲ್ಲಿ ನಾಲ್ಕು ಜನ ಗಂಡಸರಿದ್ದರು. ಅವರು ಯಾರನ್ನಾದರೂ ಕರೆಯಲು ಅವಳನ್ನು ಬಿಡಲಿಲ್ಲ. ಅವಳು ಸಂಪೂರ್ಣ ಆಘಾತದಲ್ಲಿದ್ದಳು. ಅವರು ಎಲ್ಲ ವ್ಯವಸ್ಥೆಗಳನ್ನು ಮಾಡುವುದಾಗಿ ಹೇಳಿದರು ಮತ್ತು ಆಕೆಯ ಹೆಬ್ಬೆಟ್ಟು ಗುರುತನ್ನು ಒಂದು ಕಾಗದದ ಮೇಲೆ ತಗೊಂಡರು. ಮಗುವಿನ ತಂದೆಗೂ ಅದೇ ಸಂದೇಶವನ್ನು ಕಳುಹಿಸಲಾಗಿತ್ತು. ತಂದೆ ಅಲ್ಲಿಗೆ ತಲುಪಿ ಸ್ಮಶಾನದ ಒಳಗೆ ಹೋದನಂತರ ಗೇಟುಗಳನ್ನು ಮುಚ್ಚಲಾಯಿತು ಎನ್ನುತ್ತಾನೆ ಆತ. ಕೆಲವೇ ನಿಮಿಷಗಳಲ್ಲಿ, ಮಗುವಿನ ದೇಹವನ್ನು ಮರದ ದಿಮ್ಮಿಗಳ ಮೇಲೆ ಇಡಲಾಯಿತು ಮತ್ತು ಚಿತೆಗೆ ಅಗ್ನಿಯನ್ನು ಹಚ್ಚಲಾಯಿತು. ಮಗುವಿನ ದೇಹವು ಸುಮಾರಾಗಿ ಸಂಪೂರ್ಣವಾಗಿ ಸುಟ್ಟು ಹೋದ ನಂತರವೇ ಪೋಷಕರನ್ನು ಅಲ್ಲಿಂದ ಹೋಗಲು ಅನುಮತಿ ನೀಡಿದರು.

ದುಃಖದಲ್ಲಿದ್ದ ಪೋಷಕರಿಂದ ನಡೆದ ಸಂಗತಿ ತಿಳಿದ ಕಾಲೋನಿಯ ನಿವಾಸಿಗಳು ಸ್ಮಶಾನಕ್ಕೆ ಧಾವಿಸಿ ಉರಿಯುತ್ತಿದ್ದ ಚಿತೆಯಿಂದ ಮಗುವಿನ ಉಳಿದ ದೇಹವನ್ನು ಹೊರಗೆಳೆದರು. ಪೊಲೀಸರು ಬಂದರು, ಎಚ್ಚರದಿಂದಿದ್ದ ನಾಗರಿಕರ ಕೈಗೆ ಸಿಕ್ಕಿಬಿದ್ದ ವ್ಯಕ್ತಿಗಳನ್ನು ಬಂಧಿಸಿದರು. ಆದರೆ ಪೊಲೀಸರು ಪೋಷಕರೊಂದಿಗೆ ಅವರೇ ಅಪರಾಧಿಗಳೆಂಬಂತೆ ವರ್ತಿಸಿದರು. ಅಲ್ಲಿ ಹಾಜರಿದ್ದ ಜನರ ಪ್ರಕಾರ, ಆ ಪ್ರದೇಶದ ಕುಖ್ಯಾತ ಪೊಲೀಸ್ ಮಾಹಿತಿದಾರನೊಬ್ಬ ಪೊಲೀಸರ ಸಮ್ಮುಖದಲ್ಲಿಯೇ, ಮಗುವಿನ ತಂದೆಯನ್ನು ತಳ್ಳಾಡಿದ, ಸುಳ್ಳು ಆರೋಪ ಮಾಡುತ್ತಿದ್ದಾನೆ ಎಂದು ಆರೋಪಿಸಿ ನಿಂದನೆಯ ಭಾಷೆಯನ್ನು ಬಳಸುತ್ತ ಕಪಾಳಕ್ಕೆ ಹೊಡೆದ. ಪೊಲೀಸರಿಗೆ ದೂರು ನೀಡದಂತೆ ಕುಟುಂಬದ ಮೇಲೆ ಒತ್ತಡ ಹೇರಲಾಯಿತು. ಇದೇ ಕಾರಣದಿಂದ ಪೊಲೀಸರು ದುಃಖತಪ್ತ ಪೋಷಕರನ್ನು ಮರುದಿನ ಸಂಜೆಯವರೆಗೂ ಬಂಧಿಸಿಟ್ಟಿದ್ದರು. ಬೇರೆ ರೀತಿಯಲ್ಲಿ ಹೇಳುವುದಾದರೆ, ತಮ್ಮ ಏಕೈಕ ಮಗಳ ಸಾವಿಗೆ ಅಳುವ ಹಕ್ಕನ್ನೂ ಸಹ ಕಿತ್ತುಕೊಳ್ಳಲಾಯಿತು.

ಪುಟ 15 ನೋಡಿ



ಒಲಿಂಪಿಕ್ಸ್‌ನಲ್ಲಿ ಮಹಿಳಾ ಹಾಕಿ ಸೆಮಿಫೈನಲ್‌ನಲ್ಲಿ ಸೋತಾಗ ಹಾಕಿ ಆಟಗಾರ್ತಿಯ ಕುಟುಂಬದ ವಿರುದ್ಧ ಜಾತಿವಾದಿ ದೂಷಣೆ

ಜಾತೀವಾದ ಭಾರತದ ಅತ್ಯಂತ ಕೆಟ್ಟ ಬಹಿರಂಗ ಗುಟ್ಟು

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಕೇರಳದ್ದು ಈಗಲೂ ಮಾದರಿ ದಾಖಲೆ



ಮಟ 8 ರಿಂದ 67.6 ರಷ್ಟಿತ್ತು. ಬೇರೆ ರೀತಿಯಲ್ಲಿ ಹೇಳುವುದಾದರೆ, ಕೇರಳದ ಅರ್ಧದಷ್ಟು ಜನಸಂಖ್ಯೆಯು ಮೇ 2021 ರಲ್ಲಿ ಕೋವಿಡ್–19 ಸೋಂಕಿನಿಂದ ರಕ್ಷಿಸಲ್ಪಟ್ಟಿದ್ದರು.

ಕೋವಿಡ್ –19 ಪರೀಕ್ಷೆಗಳಲ್ಲಿ ಧನಾತ್ಮಕ ಪರೀಕ್ಷೆ ಮಾಡಿದ ವ್ಯಕ್ತಿಗಳ ಸಂಖ್ಯೆಯೊಂದಿಗೆ ಸೆರೋ ಸಮೀಕ್ಷೆಗಳಲ್ಲಿ ಪ್ರತಿಕಾಯಗಳನ್ನು ಹೊಂದಿರುವ ವ್ಯಕ್ತಿಗಳ ಸಂಖ್ಯೆಯನ್ನು ಹೋಲಿಸುವ ಮೂಲಕ ನಾವು ಪರೀಕ್ಷೆಯ ದಕ್ಷತೆಯನ್ನು ಪರೀಕ್ಷಿಸಬಹುದು. ಡಿಸೆಂಬರ್ 2020 ರಲ್ಲಿ, ಕೇರಳವು ಆರು ನೈಜ ಪ್ರಕರಣಗಳಲ್ಲಿ ಒಂದನ್ನು ಗುರುತಿಸುತ್ತಿದ್ದರೆ, ಭಾರತವು 28 ನೈಜ ಪ್ರಕರಣಗಳಲ್ಲಿ ಒಂದನ್ನು ಗುರುತಿಸುತ್ತಿದೆ. ಮೇ 2021 ರಲ್ಲಿ, ಕೇರಳವು ಇನ್ನೂ ಆರು ನೈಜ ಪ್ರಕರಣಗಳಲ್ಲಿ ಒಂದನ್ನು ಗುರುತಿಸುತ್ತಿದೆ, ಆದರೆ ಭಾರತವು 33 ನೈಜ ಪ್ರಕರಣಗಳಲ್ಲಿ ಒಂದನ್ನು ಗುರುತಿಸುತ್ತಿದೆ.

ಉತ್ತಮ ಆರೋಗ್ಯ ಮೂಲರಚನೆ ಜೀವಗಳನ್ನು ಉಳಿಸುತ್ತದೆ

ಸೋಂಕುಗಳನ್ನು ನಿಧಾನಗೊಳಿಸುವುದರಿಂದ ಬೇಗನೇ ಸೋಂಕಿಗೆ ಒಳಗಾಗಬಹುದಾದ ವ್ಯಕ್ತಿಗಳನ್ನು ಸೋಂಕಿನಿಂದ ಮತ್ತು ಸಾವಿನಿಂದ ಉಳಿಸಬಹುದಷ್ಟೇ ಅಲ್ಲ, ಸರಕಾರಕ್ಕೆ ಆರೋಗ್ಯ ಮೂಲರಚನೆಯನ್ನು ಉತ್ತಮ ಪಡಿಸಲು ಅವಕಾಶ ಮತ್ತು ಸಮಯ ಕೂಡ ಸಿಗುತ್ತದೆ.

ಕೇರಳ ಎಲ್ಲ ಕೊವಿಡ್–19 ರೋಗಿಗಳಿಗೆ ಉನ್ನತ ಗುಣಮಟ್ಟದ ಶುಶ್ರೂಷೆಯನ್ನು ಒದಗಿಸಿದೆ. ಕಾಸರಗೋಡಿನಲ್ಲಿ ಒಂದು ಹೊಸ ಕೊವಿಡ್ ಆಸ್ಪತ್ರೆಯನ್ನು ರಚಿಸಲಾಯಿತು. ಎಲ್ಲ ಜಿಲ್ಲೆಗಳಲ್ಲಿ ಕೊವಿಡ್ ಶುಶ್ರೂಷೆ ಕೇಂದ್ರ(ಸಿಸಿಸಿ)ಗಳನ್ನು ಸ್ಥಾಪಿಸಲಾಗಿತ್ತು. ಅಲ್ಪ ಲಕ್ಷಣಗಳ ರೋಗಿಗಳ ಶುಶ್ರೂಷೆಗೆ ಪ್ರತಿ ಜಿಲ್ಲೆಯಲ್ಲಿ 'ಕೊವಿಡ್ ಫಸ್ಟ್‌ಲೈನ್ ಟ್ರೀಟ್‌ಮೆಂಟ್ ಸೆಂಟರ್'(ಸಿಎಫ್‌ಎಲ್‌ಟಿಸಿ–ಕೊವಿಡ್ ಮೊದಲ ಸಾಲಿನ ಶುಶ್ರೂಷಾ ಕೇಂದ್ರ)ಗಳನ್ನು ಸ್ಥಾಪಿಸಲಾಗಿತ್ತು. ಹಗುರ ಲಕ್ಷಣಗಳಿರುವ ರೋಗಿಗಳ ಶುಶ್ರೂಷೆಗೆ ಪ್ರತಿ ಜಿಲ್ಲೆಯಲ್ಲಿ 'ಕೊವಿಡ್ ಎರಡನೇ ಸಾಲಿನ ಶುಶ್ರೂಷಾ ಕೇಂದ್ರ'(ಸಿಎಸ್‌ಎಲ್‌ಟಿಸಿ) ಗಳನ್ನು ಸ್ಥಾಪಿಸಲಾಯಿತು. ರೋಗಲಕ್ಷಣಗಳು ಇಲ್ಲದ ರೋಗಿಗಳ ಶುಶ್ರೂಷೆಗೆ 'ವಸತಿ ಶುಶ್ರೂಷಾ ಕೇಂದ್ರ'(ಡಿಸಿಸಿ)ಗಳನ್ನು ರಚಿಸಲಾಯಿತು. ಹೆಚ್ಚು ಐ.ಸಿ.ಯು. ಹಾಸಿಗೆಗಳನ್ನು ಮತ್ತು ವೆಂಟಿಲೇಟರುಗಳನ್ನು ಸೇರಿಸಲಾಯಿತು. ಆಕ್ಸಿಜನ್ ಲಭ್ಯತೆಯನ್ನು ಸುಮಾರು ದ್ವಿಗುಣಗೊಳಿಸಲಾಯಿತು– ಮಾರ್ಚ್ 30, 2020 ರಂದು 129.1 ಮೆಟ್ರಿಕ್ ಟನ್ ಇದ್ದದ್ದು ಜುಲೈ 30, 2021ರ ವೇಳೆಗೆ 249.2 ಮೆಟ್ರಿಕ್ ಟನ್ ಆಯಿತು. ರೋಗಿಗಳ ಸಂಖ್ಯಾಭಾರವನ್ನು ನಿಭಾಯಿಸಲು ಹೆಚ್ಚು ಡಾಕ್ಟರುಗಳನ್ನು, ನರ್ಸುಗಳನ್ನು ನೇಮಿಸಿಕೊಳ್ಳಲಾಯಿತು. (ವಿವರವಾದ ವರದಿಗೆ ಕೇರಳ ಅಭಿವೃದ್ಧಿ ವರದಿ, 2021, ಕೇರಳ ರಾಜ್ಯ ಯೋಜನಾ ಮಂಡಳಿ ನೋಡಿ).

ಇಂತಹ ಒಂದು ಕಾರ್ಯವ್ಯೂಹದ ಯಶಸ್ಸಿಗೆ ರಾಜ್ಯದಲ್ಲಿನ ಕಡಿಮೆ ಮರಣ ದರಕ್ಕಿಂತ ಉತ್ತಮ ಸಾಕ್ಷ್ಯವೇನೂ ಬೇಕಿಲ್ಲ. ಜುಲೈ 31, 2021ರಂದು ಲಭ್ಯವಿರುವ ಮಾಹಿತಿಯ ಪ್ರಕಾರ ಕೇರಳದ 'ಪ್ರಕರಣ ಸಾವಿನ ದರ'(ಸಿಎಫ್‌ಆರ್) 0.5ಶೇ. ಭಾರತದ ಸಿ.ಎಫ್.ಆರ್. ಆ ವೇಳೆಗೆ 1.34ಶೇ. ಇತ್ತು. ಆಕ್ಸಿಜನ್ ಕೊರತೆಯಿಂದ ಕೇರಳದಲ್ಲಿ ಒಂದೇ ಒಂದು ಸಾವು ಇರಲಿಲ್ಲ.

ಈ ಮಹಾಸೋಂಕಿನ ವೇಳೆಯಲ್ಲಿ ಸಾವುಗಳ ಸಂಖ್ಯೆಯ ಅಂದಾಜು ಒಂದು ವಿವಾದಾತ್ಮಕ ವಿಷಯವಾಗಿದೆ. ಬಹಳಷ್ಟು ರಾಜ್ಯ ಸರಕಾರಗಳು ಕೊವಿಡ್–19 ಸಾವುಗಳ ವಾಸ್ತವ ಸಂಖ್ಯೆಯನ್ನು ಮುಚ್ಚಿಟ್ಟಿವೆ ಎಂಬ ಆಪಾದನೆಯಿದೆ. ಇಲ್ಲಿಯೂ, ಹೆಚ್ಚಿನ ತನಿಖಾ ವರದಿಗಳು ಸಾವುಗಳನ್ನು ವರದಿ ಮಾಡುವಲ್ಲಿ ಪಾರದರ್ಶಕತೆ ಮತ್ತು ಕಡಿಮೆ ಮರಣದರದ ವಿಷಯದಲ್ಲಿ ಕೇರಳವನ್ನು ಬೇರೆ ರಾಜ್ಯಗಳಿಗಿಂತ ಮೇಲೆ ಇಟ್ಟಿವೆ. ನಾನಿಲ್ಲಿ ಕೇರಳ ನಾಗರಿಕ ನೋಂದಾವಣೆ ವ್ಯವಸ್ಥೆ(ಸಿಆರ್‌ಎಸ್)ಯಿಂದ "ಹೆಚ್ಚುವರಿ ಸಾವುಗಳು" ಕುರಿತ ಮಾಹಿತಿಯನ್ನು ಬಳಸುತ್ತೇನೆ. ನಿಜ, ಎಲ್ಲ ಹೆಚ್ಚುವರಿ ಸಾವುಗಳು ಕೊವಿಡ್ ಸಾವುಗಳಲ್ಲ. ಆದಾಗ್ಯೂ, ಸಿಆರ್‌ಎಸ್ ದತ್ತಾಂಶ ಕೊವಿಡ್ ಸಾವುಗಳ ಎಣಿಕೆಯನ್ನು ಎಷ್ಟರ ಮಟ್ಟಿಗೆ ಇಳಿಸಲಾಗಿದೆ ಎಂಬುದರ ಒಂದು ಸುಮಾರಾದ ಮತ್ತು ಪರೋಕ್ಷ ಅಂದಾಜನ್ನು ಮಾಡಲು ನೆರವಾಗುತ್ತದೆ.

ಎಪ್ರಿಲ್–ಡಿಸೆಂಬರ್ 2020ರ ಮೊದಲ ಅಲೆಯನ್ನು ಪರಿಶಿಲಿಸೋಣ. 2020ರಲ್ಲಿ ಅಧಿಕೃತ ಕೊವಿಡ್ ಸಾವುಗಳ ಸಂಖ್ಯೆ 3073. 2015ರಿಂದ 2019ರ ವರೆಗೆ ಕೇರಳ ಈ ಅವಧಿಯಲ್ಲಿ ಸರಾಸರಿ 190,499 ಸಾವುಗಳನ್ನು ನೋಂದಾಯಿಸಿತ್ತು.. 2019 ಮತ್ತು 2020ರಲ್ಲಿ ಈ ತಿಂಗಳುಗಳಲ್ಲಿ 199,962 ಮತ್ತು 192,050 ಸಾವುಗಳನ್ನು ನೋಂದಾಯಿಸಿತು. ಹೀಗೆ 2020ರಲ್ಲಿ 2015–19ರ ಸರಾಸರಿಯನ್ನು ತಗೊಂಡರೆ 1551 ರಷ್ಟು ಹೆಚ್ಚಿತ್ತು. ಆದರೆ 2019ನ್ನು ಆಧಾರವಾಗಿ ತಗೊಂಡರೆ 7912 ರಷ್ಟು ಕಡಿಮೆಯಿತ್ತು. ಇದಕ್ಕೆ ಕಾರಣ, 2020ರಲ್ಲಿ ಕೋವಿಡೇತರ ಸಾವುಗಳ ಸಂಖ್ಯೆಯಲ್ಲಿ ಇಳಿಕೆ ಎಂಬುದು ಸ್ವಯಂವೇದ್ಯ. ಹೀಗೆ 2019ನ್ನು ಆಧಾರವಾಗಿ ತಗೊಂಡರೆ ಹೆಚ್ಚುವರಿ ಸಾವುಗಳ ಪ್ರಮಾಣ ಋಣಾತ್ಮಕ, ಆದರೆ 2015–19ರ ಸರಾಸರಿಯನ್ನು ತಗೊಂಡರೆ +0.5.

ಈಗ 2021ರ ಜನವರಿ–ಜೂನ್ ಅವಧಿಯನ್ನು, ಅಂದರೆ ಎರಡನೇ ಅಲೆಯನ್ನು ನೋಡೋಣ. ಅಧಿಕೃತ ಕೊವಿಡ್ ಸಾವುಗಳ ಸಂಖ್ಯೆ ಈ ಅವಧಿಯಲ್ಲಿ 10,287. 2015ರಿಂದ 2019ರ ನಡುವೆ ಈ ಅವಧಿಯಲ್ಲಿ ಕೇರಳದಲ್ಲಿ ಸರಾಸರಿ 119,292 ಸಾವುಗಳು ನೋಂದಾಯಿಸಲ್ಪಟ್ಟವು. 2021ರಲ್ಲಿ ಇದು 141,736. 2015–19ರ ಸರಾಸರಿಯನ್ನು ಆಧಾರವಾಗಿ ತಗೊಂಡರೆ ಜನವರಿ–ಜೂನ್ 2021ರಲ್ಲಿ ಹೆಚ್ಚುವರಿ ಸಾವು 22,444. ಅಂದರೆ ಕಡಿಮೆ ಎಣಿಕೆಯ ಪ್ರಮಾಣ 2.2..

2020 ಮತ್ತು 2021ರ ದತ್ತಾಂಶಗಳನ್ನು ಒಟ್ಟು ಸೇರಿಸಿದರೆ, ಕಡಿಮೆ ಎಣಿಕೆಯ ಪ್ರಮಾಣ ಕೇರಳದಲ್ಲಿ 2.2. ಇದು 2020ರಲ್ಲಿ ಅಥವ 2021ರಲ್ಲಿ ಯಾವುದೇ ಭಾರತೀಯ ರಾಜ್ಯದಲ್ಲಿ ('ದಿ ಹಿಂದು ಮತ್ತು ಸ್ಕ್ರಾಲ್ ನಲ್ಲಿ) ವರದಿಯಾದ ಕಡಿಮೆ ಎಣಿಕೆಗಿಂತ ಕಡಿಮೆ. 2018 ಮತ್ತು 2019ರ ಸರಾಸರಿಯನ್ನು ಆಧಾರವಾಗಿ ತಗೊಂಡರೆ ಮಧ್ಯಪ್ರದೇಶದಲ್ಲಿ ಇದು 23.8, ಆಂಧ್ರಪ್ರದೇಶದಲ್ಲಿ 17.9, ಪಶ್ಚಿಮ ಬಂಗಾಲದಲ್ಲಿ 11.1, ಹರ್ಯಾಣದಲ್ಲಿ7.3, ತಮಿಳುನಾಡಿನಲ್ಲಿ 6.4 ಮತ್ತು ಕರ್ನಾಟದಲ್ಲಿ 4.3. ಕೇರಳದಲ್ಲಿ ಬೇರೆಲ್ಲಾ ರಾಜ್ಯಗಳಿಗಿಂತ ಹೆಚ್ಚು ಪಾರದರ್ಶಕವಾದ ಸಾವುಗಳ ವರದಿಯ ವ್ಯವಸ್ಥೆ ಇದೆ.

ಲಸಿಕೀಕರಣದ ದಾಖಲೆ

ಸೋಂಕುಗಳ ಏರಿಕೆಯ ದರವನ್ನು, ಆರೋಗ್ಯ ಮೂಲರಚನೆಯನ್ನು ಮೇಲ್ಮಟ್ಟಕ್ಕೇ ಏರಿಸಲು ಸಮಯಾವಕಾಶ ಪಡೆಯಲಿಕ್ಕಾಗಿ ನಿಧಾನಗೊಳಿಸಬಹುದಾದರೂ ಅದನ್ನು ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಲು ಸಾಧ್ಯವಿಲ್ಲ. ಪ್ರತಿಯೊಂದು ಸಮಾಜವು ಒಂದು ಸಾಂಕ್ರಾಮಿಕವನ್ನು ಮೀರಿ ನಿಲ್ಲಲು ಅಂತಿಮವಾಗಿ 70ರಿಂದ 80ಶೇ. ಮಟ್ಟದ ಹಿಂಡು ಪ್ರತಿರೋಧ(ಹರ್ಡ್ ಇಮ್ಯೂನಿಟಿ)ವನ್ನು ತಲುಪಬೇಕಾಗುತ್ತದೆ.. ಅದನ್ನು ಒಂದು ಸಮಾಜ ಎರಡು ರೀತಿಗಳಲ್ಲಿ ಮಾಡಬಹುದು. : ಒಂದು, ಸೋಂಕುಗಳು ಹರಡಲು ಮುಕ್ತವಾಗಿ ಬಿಡುವುದು. ಮತ್ತು ಎರಡು, ಹರಡಿಕೆಯನ್ನು ನಿಧಾನಗೊಳಿಸುವುದು ಮತ್ತು ಎಷ್ಟು ಸಾಧ್ಯವೋ ಅಷ್ಟು ಜನರಿಗೆ ಪೂರ್ಣವಾಗಿ ಲಸಿಕೆ ಹಾಕುವುದು. ಕೇರಳ ಎರಡನೇ ದಾರಿ ಆಯ್ದುಕೊಂಡಿತು. ಇದಕ್ಕೆ ತೆರಬೇಕಾದ ಬೆಲೆ ಕಠಿಣ ಪರಿಶ್ರಮ, ಆದರೆ ಅದರ ಗಳಿಕೆಯನ್ನು ಸಾವಿನ ದರಗಳಲ್ಲಿ ಇಳಿಕೆ ಮತ್ತು ವ್ಯಾಪಕ ಸಾವುಗಳಿಂದಾಗಿ ಸಮಾಜ ಅನುಭವಿಸುವ ನೋವಿನಲ್ಲಿ ಇಳಿಕೆಯಲ್ಲಿ ಪಡೆಯಬಹುದು.

ಭಾರತದ ಲಸಿಕೆ ಕಾರ್ಯತಂತ್ರ ಭಾರತ ಸರಕಾರದ ಲಸಿಕೆಗಳನ್ನು ಕುರಿತ ಕಳಪೆ ಯೋಜನೆಯಿಂದಾಗಿ ಕುಲಗೆಟ್ಟಿದೆ. ಎಪ್ರಿಲ್ 2021 ರ ಧೋರಣೆಯಿಂದ ಸ್ಫುರಿಸಿದ ಲಸಿಕೆ ಕೊರತೆಯನ್ನು ಭಾರತ ಎದುರಿಸುತ್ತಿದೆ. ಇದು ಕೇರಳದ ಪ್ರಯತ್ನಗಳನ್ನೂ ನಿರ್ಬಂಧಿಸಿದೆ. ಕೇರಳಕ್ಕೆ ಕೇಳಿದ ಸಂಖ್ಯೆಯಲ್ಲಿ ಲಸಿಕೆ ಡೋಸುಗಳನ್ನು ಕೊಡಲಾಗಿಲ್ಲ. ಆದರೂ ಅಧಿಕೃತ ದತ್ತಾಂಶ ರಾಜ್ಯದ ಜನಗಳ ಲಸಿಕೀಕರಣದಲ್ಲಿ ಕೇರಳ ಮಾದರಿ ದಾಖಲೆ ಹೊಂದಿರುವುದನ್ನು ತೋರಿಸುತ್ತದೆ.

ಜುಲೈ 30, 2021ರ ವೇಳೆಗೆ ಕೇರಳ ತನ್ನ ಅರ್ಹ ಜನಸಂಖ್ಯೆಯ 52ಶೇ.ಕ್ಕೆ ಒಂದು ಡೋಸ್ ಕೊಟ್ಟಿದೆ. , 22ಶೇ. ಎರಡೂ ಡೋಸುಗಳನ್ನು ಪಡೆದಿದ್ದಾರೆ. ಲಸಿಕೆಗಳಲ್ಲಿ ತೇಮಾನ (ವೇಸ್ಟೇಟ್) ಪ್ರಮಾಣದಲ್ಲಿ ಕೂಡ ಕೇರಳದ ದಾಖಲೆ ಅತ್ಯುತ್ತಮವಾಗಿದೆ. 10 ವಿಯಲ್‌ಗಳ ಒಂದು ಪ್ಯಾಕ್‌ನಲ್ಲಿ ಅದು 11 ಡೋಸುಗಳನ್ನು ಹಿಂಡಿ ತೆಗೆದಿದೆ. ಜುಲೈ 30, 2021ರ ವೇಳೆಗೆ ಕೇರಳದ ಲಸಿಕೆ ವೇಸ್ಟೇಜ್ ಕೊವಿಶೀಲ್ಡ್‌ನಲ್ಲಿ –6.1ಶೇ. ಮತ್ತು ಕೊವ್ಯಾಕ್ಸಿನ್‌ನಲ್ಲಿ –0.6ಶೇ.

ವ್ಯರ್ಥ ಆಕ್ರೋಶ

ಸೋಂಕಿಲ್ಲದ ಜನಸಂಖ್ಯೆಯ ಹೆಚ್ಚಿನ ಪಾಲು ಮತ್ತು ಡೆಲ್ಟಾ ರೂಪಾಂತರದ ಇತ್ತೀಚಿನ ಹೊರಹೊಮ್ಮುವಿಕೆಯನ್ನು ಗಮನಿಸಿದರೆ, ಜುಲೈ 2021 ರಲ್ಲಿ ಕೇರಳದಲ್ಲಿ ಸೋಂಕುಗಳ ಏರಿಕೆಯು ಆಶ್ಚರ್ಯಕರವಲ್ಲ. ವಾಸ್ತವವಾಗಿ, ಎರಡನೇ ಅಲೆ ಬಹುತೇಕ ಭಾರತೀಯ ರಾಜ್ಯಗಳಲ್ಲಿ ಮಾರ್ಚ್ ಆರಂಭದಲ್ಲೇ ಆರಂಭವಾಗಿತ್ತು. ಆದಾಗ್ಯೂ, ಕೇರಳದಲ್ಲಿ, ಎರಡನೇ ಅಲೆ ಕೇವಲ ಒಂದು ತಿಂಗಳ ನಂತರ ಪ್ರಾರಂಭವಾಯಿತು: ಏಪ್ರಿಲ್ ನಲ್ಲಿ ಕೇರಳವು ಎರಡನೇ ಅಲೆ ಪ್ರಾರಂಭಿಸಿತು ಎಂದು ವಾದಿಸುವುದು ವಿಚಿತ್ರವಾಗಿದೆ; ಕರ್ವ್ ಅನ್ನು ಸಮತಟ್ಟಾಗಿಸಲು ಸಮಯ ಬೇಕಾಗುತ್ತದೆ. ಎರಡನೇ ಅಲೆಯಲ್ಲಿ ಆಗಿರುವ ಜುಲೈನಲಿನ್ನ ಸೋಂಕುಗಳ ಹೊಸ ಏರಿಕೆಯು ಬಕ್ರೀದ್‌ಗೆ ನೀಡಲಾದ ಸಡಿಲಗಳಿಂದಾಗಿ ಎಂದು ವಾದಿಸುವುದು ಅಷ್ಟೇ ವಿಚಿತ್ರವಾಗಿದೆ. ಈ ಸಡಿಲಗಳನ್ನು ಜುಲೈ 18–20 ಕೇವಲ ಮೂರು ದಿನಗಳವರೆಗೆ ಒದಗಿಸಲಾಗಿತು. ಆದರೆ ಪ್ರಕರಣಗಳ ಏರಿಕೆ ಜೂನ್ 29 ರಿಂದಲೇ ಆರಂಭವಾಗಿತ್ತು.



ಪ್ರತಿಯೊಂದು ಸಮಾಜವು ಒಂದು ಸಾಂಕ್ರಾಮಿಕವನ್ನು ಮೀರಿ ನಿಲ್ಲಲು ಅಂತಿಮವಾಗಿ 70 ರಿಂದ 80ಶೇ. ಮಟ್ಟದ ಹಿಂಡು ಪ್ರತಿರೋಧ (ಹರ್ಡ್ ಇಮ್ಯೂನಿಟಿ)ವನ್ನು ತಲುಪಬೇಕಾಗುತ್ತದೆ.. ಅದನ್ನು ಒಂದು ಸಮಾಜ ಎರಡು ರೀತಿಗಳಲ್ಲಿ ಮಾಡಬಹುದು.: ಒಂದು, ಸೋಂಕುಗಳು ಹರಡಲು ಮುಕ್ತವಾಗಿ ಬಿಡುವುದು. ಮತ್ತು ಎರಡು, ಹರಡಿಕೆಯನ್ನು ನಿಧಾನಗೊಳಿಸುವುದು ಮತ್ತು ಎಷ್ಟು ಸಾಧ್ಯವೋ ಅಷ್ಟು ಜನರಿಗೆ ಪೂರ್ಣವಾಗಿ ಲಸಿಕೆ ಹಾಕುವುದು. ಕೇರಳ ಎರಡನೇ ದಾರಿ ಆಯ್ದುಕೊಂಡಿತು. ಇದಕ್ಕೆ ತೆರಬೇಕಾದ ಬೆಲೆ ಕಠಿಣ ಪರಿಶ್ರಮ, ಆದರೆ ಅದರ ಗಳಿಕೆಯನ್ನು ಸಾವಿನ ದರಗಳಲ್ಲಿ ಇಳಿಕೆ ಮತ್ತು ವ್ಯಾಪಕ ಸಾವುಗಳಿಂದಾಗಿ ಸಮಾಜ ಅನುಭವಿಸುವ ನೋವಿನಲ್ಲಿ ಇಳಿಕೆಯಲ್ಲಿ ಪಡೆಯಬಹುದು. ಭಾರತದ ಲಸಿಕೆ ಕಾರ್ಯತಂತ್ರ ಭಾರತ ಸರಕಾರದ ಲಸಿಕೆಗಳನ್ನು ಕುರಿತ ಕಳಪೆ ಯೋಜನೆಯಿಂದಾಗಿ ಕುಲಗೆಟ್ಟಿದೆ. ಇದು ಕೇರಳದ ಪ್ರಯತ್ನಗಳನ್ನೂ ನಿರ್ಬಂಧಿಸಿದೆ.

ಕೇರಳದಲ್ಲಿ ಹೆಚ್ಚಿನ ಸಂಖ್ಯೆಯ ಪ್ರಕರಣಗಳು ಹೆಚ್ಚಿನ ಮಟ್ಟದ ಪರೀಕ್ಷೆ ಮತ್ತು ವರ್ಧಿತ ಪರೀಕ್ಷೆಯ ಅಳವಡಿಕೆಯಿಂದಾಗಿವೆ. ಇದರ ಪರಿಣಾಮವಾಗಿ, ಟಿಪಿಆರ್ ಮಟ್ಟಗಳು ಕೂಡ ಅಧಿಕವಾಗಿ ಮುಂದುವರಿಯುತ್ತವೆ. ಹೆಚ್ಚಿನ ಲಸಿಕೆಗಳು ಲಭ್ಯವಿದ್ದರೆ, ಈ ಸಮಸ್ಯೆಯನ್ನು ಸುಧಾರಿಸಬಹುದು. ಅದು ನಿರೀಕ್ಷೆಯೂ ಆಗಿತ್ತು. ಆದಾಗ್ಯೂ, ಲಸಿಕೆಗಳ ಕೊರತೆಯನ್ನು ಗಮನಿಸಿದರೆ, ಕೇರಳವು ಹಿಂಡಿನ ರೋಗನಿರೋಧಕ ಶಕ್ತಿಯನ್ನು ಸಾಧಿಸಲು ದೀರ್ಘ ಅವಧಿ ಬೇಕಾಗಬಹುದು.


ಆದರೂ, ಕೇರಳದ ಪ್ರಸ್ತುತ ಪರಿಸ್ಥಿತಿ "ಬಿಕ್ಕಟ್ಟು" ಅಲ್ಲ. ಹೆಚ್ಚುತ್ತಿರುವ ಪ್ರಕರಣಗಳು ರಾಜ್ಯದ ಆರೋಗ್ಯ ಮೂಲಸೌಕರ್ಯವನ್ನು ತಗ್ಗಿಸಿದಾಗ ಬಿಕ್ಕಟ್ಟು ಉಂಟಾಗುತ್ತದೆ. ಆದರೆ ಕಳೆದ ವರ್ಷದಲ್ಲಿ ಆರೋಗ್ಯ ಮೂಲಸೌಕರ್ಯಗಳ ವಿಸ್ತರಣೆಯು ಸಾಕಷ್ಟು ಪ್ರಮಾಣದ ಆಸ್ಪತ್ರೆ ಹಾಸಿಗೆಗಳು, ಐಸಿಯು ಹಾಸಿಗೆಗಳು, ವೆಂಟಿಲೇಟರ್‌ಗಳು ಮತ್ತು ಆಮ್ಲಜನಕ ಲಭ್ಯವಿರುವುದನ್ನು ಖಾತ್ರಿಪಡಿಸಿದೆ. ಜುಲೈ 30, 2021 ರ ವೇಳೆಗೆ, ಐಸಿಯು ಬೆಡ್‌ಗಳ ಶೇಕಡಾವಾರ್ವು ಬಳಕೆ ಪ್ರಮಾಣ ಕೇವಲ 63.2 ಶೇಕಡಾ ಮತ್ತು ವೆಂಟಿಲೇಟರ್‌ಗಳು ಶೇಕಡಾ 27.4 ರಷ್ಟು ಮಾತ್ರ. ಜುಲೈ 31, 2021 ರ ದೈನಂದಿನ ಸರಾಸರಿ ಆಮ್ಲಜನಕದ ಬಳಕೆ 111.6 ಮೆಟ್ರಿಕ್ ಟನ್, ಆದರೆ ದಿನದ ಒಟ್ಟು ಆಮ್ಲಜನಕದ ಲಭ್ಯತೆ 249.2 ಮೆಟ್ರಿಕ್ ಟನ್. ಇದರ ಜೊತೆಯಲ್ಲಿ, ಉತ್ಪಾದನಾ ಘಟಕಗಳು ಮತ್ತು ಪುನಃ ತುಂಬುವ ಘಟಕಗಳಲ್ಲಿನ ಒಟ್ಟು ಆಮ್ಲಜನಕದ ಸಂಗ್ರಹವು 703.7 ಮೆಟ್ರಿಕ್ ಟನ್ ಆಗಿತ್ತು. ಜುಲೈ 31, 2021 ರಂದು ಸುಮಾರು 1.93 ಲಕ್ಷ ಡೋಸ್ ಗಳ ರೆಮ್‌ಡೆಸಿವಿರ್ ಇಂಜೆಕ್ಷನ್‌ಗಳು ದಾಸ್ತಾನಿನಲ್ಲಿವೆ.

ಹೀಗಾಗಿ, ಕೇರಳದ ಆರೋಗ್ಯ ಮೂಲಸೌಕರ್ಯ ಇನ್ನೂ ಒತ್ತಡದಲ್ಲಿಲ್ಲ. ಪರಿಸ್ಥಿತಿ ಸರ್ಕಾರದ ನಿಯಂತ್ರಣದಲ್ಲಿದೆ. ಜುಲೈ 2021 ರಲ್ಲಿ ಕೇರಳದ ಪ್ರಕರಣವು ಮಾರ್ಚ್–ಏಪ್ರಿಲ್ 2021 ರಲ್ಲಿ ಉತ್ತರ ಪ್ರದೇಶದಂತಹ ರಾಜ್ಯಗಳ ಪ್ರಕರಣಕ್ಕೆ ತದ್ವಿರುದ್ಧವಾಗಿದೆ. ಈ ರಾಜ್ಯಗಳಲ್ಲಿ ಲಕ್ಷಗಟ್ಟಲೆ ತಪ್ಪಿಸಬಹುದಾದ ಸಾವುಗಳು ಸಂಭವಿಸಿವೆ. ಗಂಗೆಯಲ್ಲಿ ತೇಲುತ್ತಿರುವ ಮೃತ ದೇಹಗಳ ಆಘಾತಕಾರಿ ಚಿತ್ರಗಳು ಸಾಂಕ್ರಾಮಿಕ ರೋಗವನ್ನು ನಿರ್ವಹಿಸುವಲ್ಲಿ ಅಲ್ಲಿನ ರಾಜ್ಯ ಸರ್ಕಾರಗಳು ದಯನೀಯವಾಗಿ ವಿಫಲವಾಗಿವೆ ಎಂಬುದಕ್ಕೆ ಸಾಕ್ಷಿಯಾಗಿದೆ. ಸ್ಪಷ್ಟವಾಗಿ, ಕೇರಳದ ವಿರುದ್ಧದ ರಾಜಕೀಯ ಪ್ರೇರಿತ ಅಭಿಯಾನವು ಒಂದೇ ಒಂದು ಗುರಿಯನ್ನು ಹೊಂದಿದೆ: ಕೇರಳದ ಸ್ಥಾನಮಾನವನ್ನು ಸಾರ್ವಜನಿಕರ ದೃಷ್ಟಿಯಲ್ಲಿ ಇಳಿಸುವಂತೆ ಬಲಪ್ರಯೋಗ ಮಾಡುವುದು ಇದರಿಂದ ಉತ್ತರ ಪ್ರದೇಶದಂತಹ ರಾಜ್ಯಗಳಲ್ಲಿ ಜನರು ಅನುಭವಿಸುತ್ತಿರುವ ದುಃಖ ಮತ್ತು ಸಂಕಟವನ್ನು ಸಾಮಾನ್ಯ ಸಂಗತಿ ಎಂಬಂತೆ ಮರೆಸಬಹುದು ಎಂಬ ಹುನ್ನಾರ.

ಆದರೆ ಕೇರಳದ ಪ್ರಬುದ್ಧ ಜನರು ಐತಿಹಾಸಿಕವಾಗಿ ಇಂತಹ ಪಿತೂರಿಗಳನ್ನು ನೋಡಿದ್ದಾರೆ. ಅವರು ಕೇರಳ ಸರ್ಕಾರದ ಹಿಂದೆ ಗಟ್ಟಿಯಾಗಿ ನಿಂತಿದ್ದಾರೆ ಮತ್ತು ಅವರ ಸಾಮೂಹಿಕ ಪ್ರಯತ್ನವು ಇಡೀ ದೇಶಕ್ಕೆ ಮತ್ತು ಪ್ರಪಂಚಕ್ಕೆ ಪ್ರದರ್ಶಿಸಿರುವುದರ ಬಗ್ಗೆ ನ್ಯಾಯಯುತವಾಗಿ ಹೆಮ್ಮೆ ಪಡುತ್ತಾರೆ.

ಉದ್ಯೋಗ ಮತ್ತು ವೇತನ-ಹಿಂಜರಿತದ ಜಾಗತಿಕ ಬಿಕ್ಕಟ್ಟು

ಭಾರತದ ಕಾರ್ಮಿಕ ಆಂದೋಲನ –ಶತಮಾನದ ನೋಟ–39



ಸಪ್ಟಂಬರ್ 2008ರ ಕುಸಿತದ ಪರಿಣಾಮವಾಗಿ ಟ್ರಿಲಿಯನ್‌ಗಟ್ಟಲೆ ಡಾಲರ್ ಸಂಪನ್ಮೂಲಗಳು, ನಾಶವಾದವು. ಜಾಗತಿಕ ಹಣಕಾಸು ವ್ಯವಸ್ಥೆಯಲ್ಲಿನ ಬಿಕ್ಕಟ್ಟು ಮತ್ತು ಕೈಗಾರಿಕಾ, ಕೃಷಿ ಮತ್ತು ಸೇವೆಗಳ ಉತ್ಪಾದನೆಯ ಕಡಿತವು ತುಂಬಾ ಸ್ಪಷ್ಟವಾಗಿತ್ತು. 1929 ರಿಂದ, ಬಂಡವಾಳಶಾಹಿಯು ಇಷ್ಟು ಆಳವಾದ ಬಿಕ್ಕಟ್ಟನ್ನು ಕಂಡಿರಲಿಲ್ಲ, ಇದು ಬಂಡವಾಳ ಹೊಂದಿರುವವರು, ಅವರ ವ್ಯವಸ್ಥಾಪಕರು ಮತ್ತು ರಾಜಕೀಯ ಅನುಯಾಯಿಗಳ ಪ್ರವಚನದಲ್ಲಿಯೂ ಸಹ ಆ ವೇಳೆಯಲ್ಲಿ ಕಂಡು ಬರುತ್ತಿತ್ತು. ಆದ್ದರಿಂದ, 1960 ಮತ್ತು 1970 ರ ದಶಕದಿಂದ ಬಂಡವಾಳಶಾಹಿಯನ್ನು ಅದರ ಇತಿಹಾಸದುದ್ದಕ್ಕೂ, ವಿಸ್ತರಣೆ ಮತ್ತು ಬಿಕ್ಕಟ್ಟಿನ ಪರ್ಯಾಯ ಅವಧಿಗಳನ್ನು ರೂಪಿಸಿದ್ದ ವಿಸ್ತರಣೆಯ ಸುತ್ತುಗಳಿಗಿಂತ ಭಿನ್ನವಾಗಿ, ಸಂರಚನಾತ್ಮಕ ಬಿಕ್ಕಟ್ಟಿನ ಗುಣಲಕ್ಷಣಗಳನ್ನು ತೋರಿಸುವ ನಿರಂತರ ಹಿಂಜರಿತ ಆವರಿಸಿತು.

ಮೂಲ ಲೇಖಕರು: **ಸುಕೋಮಲ್ ಸೆನ್** ಸಂಗ್ರಹ–ಅನುವಾದ: **ಸಿ.ಆರ್.ಶಾನಭಾಗ**

ದಶಕಗಳಿಂದ ಹದಗೆಡುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ಸಂರಚನಾತ್ಮಕ ಬಿಕ್ಕಟ್ಟು ಈಗ(2010ರಲ್ಲಿ) ಜಗತ್ತಿನ ಪ್ರತಿಯೊಂದು ಪ್ರದೇಶದಲ್ಲೂ ನಿಜವಾದ ಆತಂಕಕಾರಿ ಸ್ಥಿತಿಗೆ ಮುಟ್ಟಿದೆ.

15 ಸೆಪ್ಟೆಂಬರ್ 2008 ರ ವಾಲ್ ಸ್ಟ್ರೀಟ್ ಕುಸಿತದ ನಂತರ, ಜ್ವಾಲಾಮುಖಿಯಂತೆ ಸ್ಫೋಟಗೊಂಡ ಬಿಕ್ಕಟ್ಟನ್ನು ಆಳುವ ವರ್ಗದ ತರ್ಕದ ಪ್ರಕಾರ, 'ಕೇವಲ ಹಣಕಾಸಿನ ಬಿಕ್ಕಟ್ಟಿಗೆ ಸೀಮಿತವಾಗಿರಲು ಸಾಧ್ಯವಿಲ್ಲ', ಬದಲಿಗೆ ಈ ಬಿಕ್ಕಟ್ಟು ಬಂಡವಾಳಶಾಹಿ ಆರ್ಥಿಕತೆ, ಕೈಗಾರಿಕೆ, ಕೃಷಿ, ಸಾಮಾಜಿಕ ಮತ್ತು ರಾಜಕೀಯದ ಎಲ್ಲ ಅಂಶಗಳನ್ನು ಆವರಿಸಿದೆ. ಕಾರ್ಮಿಕ ವರ್ಗವು ಯಾವಾಗಲೂ ಬಂಡವಾಳಶಾಹಿ ಸಮಾಜದಲ್ಲಿ ಪ್ರತ್ಯೇಕಿಸಲ್ಪಟ್ಟ ವರ್ಗವಾಗಿ ಉಳಿದಿರುವುದರಿಂದ, ಸ್ವಾಭಾವಿಕವಾಗಿ, ಭಯಾನಕ ಸ್ಥಿತಿಯ ಮತ್ತೊಂದು ಕೇಂದ್ರ ಅಂಶವಾಗಿದೆ.

ಕಳೆದ ಕೆಲವು ತಿಂಗಳುಗಳಲ್ಲಿ ಒಟ್ಟು ಟ್ರಿಲಿಯನ್‌ಗಟ್ಟಲೆ ಡಾಲರ್ ಸಂಪನ್ಮೂಲಗಳು, ನಾಶವಾಗಿದೆ. ಜಾಗತಿಕ ಹಣಕಾಸು ವ್ಯವಸ್ಥೆಯಲ್ಲಿನ ಬಿಕ್ಕಟ್ಟು ಮತ್ತು ಕೈಗಾರಿಕಾ, ಕೃಷಿ ಮತ್ತು ಸೇವೆಗಳ ಉತ್ಪಾದನೆಯ ಕಡಿತವು ತುಂಬಾ ಸ್ಪಷ್ಟವಾಗಿದೆ. 1929 ರಿಂದ, ಬಂಡವಾಳಶಾಹಿಯು ಇಷ್ಟು ಆಳವಾದ ಬಿಕ್ಕಟ್ಟನ್ನು ಕಂಡಿರಲಿಲ್ಲ, ಇದು ಬಂಡವಾಳ ಹೊಂದಿರುವವರು, ಅವರ ವ್ಯವಸ್ಥಾಪಕರು ಮತ್ತು ರಾಜಕೀಯ ಅನುಯಾಯಿಗಳ ಪ್ರವಚನದಲ್ಲಿಯೂ ಸಹ ಕಂಡುಬರುತ್ತಿದೆ.

ಆದ್ದರಿಂದ, 1960 ಮತ್ತು 1970 ರ ದಶಕದಿಂದ ಬಂಡವಾಳಶಾಹಿಯನ್ನು ಅದರ ಇತಿಹಾಸದುದ್ದಕ್ಕೂ, ವಿಸ್ತರಣೆ ಮತ್ತು ಬಿಕ್ಕಟ್ಟಿನ ಪರ್ಯಾಯ ಅವಧಿಗಳನ್ನು ರೂಪಿಸಿದ್ದ ವಿಸ್ತರಣೆಯ ಸುತ್ತುಗಳಿಗಿಂತ ಭಿನ್ನವಾಗಿ, ಸಂರಚನಾತ್ಮಕ ಬಿಕ್ಕಟ್ಟಿನ ಗುಣಲಕ್ಷಣಗಳನ್ನು ತೋರಿಸುವ ನಿರಂತರ ಹಿಂಜರಿತದಲ್ಲಿ ನಾವು ಮುಳುಗಿದ್ದೇವೆ.

ಮಾನವ ಅಗತ್ಯಗಳನ್ನು ಪೂರೈಸಲು ಮತ್ತು ಬಂಡವಾಳದ ಸ್ವಯಂ–ಪುನರುತ್ಪತ್ತಿಗೆ ಮೀಸಲಾಗಿರುವ ಉತ್ಪಾದನೆಯ ನಡುವಿನ ಅಗಾಧ'ವಾದ ಅಂತರವು ವಿನಾಶಕಾರಿ ಅಡ್ಡಪರಿಣಾಮಗಳನ್ನು ತೀವ್ರಗೊಳಿಸುತ್ತದೆ.

ಇದು ಶತಮಾನದ ಆರಂಭದಿಂದಲೂ ಜಗತ್ತು ಹೆಚ್ಚು ಆಳವಾಗಿ ಮುಳುಗಿರುವ ಮತ್ತೊಂದು ಮೂಲಭೂತ ವೈರುಧ್ಯವನ್ನು ಒತ್ತಿಹೇಳುತ್ತದೆ. ನಿರುದ್ಯೋಗ ದರಗಳು ಏರಿಕೆಯಾಗುತ್ತಿದ್ದರೆ, ನಿರುದ್ಯೋಗಕ್ಕೆ ಅಂತರ್ಗತವಾಗಿರುವ ಸಾಮಾಜಿಕ ಅವನತಿ ಮತ್ತು ಅನಾಗರಿಕತೆಯ ಮಟ್ಟಗಳು ಸಹ ಸುರುಳಿಯಾಗಿರುತ್ತವೆ. ಮತ್ತೊಂದೆಡೆ, ಜಗತ್ತು ತನ್ನ ಹಿಂದಿನ ಬೆಳವಣಿಗೆಯ ದರವನ್ನು ಮತ್ತೆ ಪುನರಾರಂಭಿಸಿದರೆ, ಉತ್ಪಾದನೆ ಮತ್ತು ಅತಿಯಾದ ಮತ್ತು ತ್ಯಾಜ್ಯದ ಮೇಲೆ ಸ್ಥಾಪಿಸಲಾದ ಜೀವನ ವಿಧಾನವನ್ನು ಹೆಚ್ಚಿಸಿದರೆ, ನಾವು ಇನ್ನೂ ಹೆಚ್ಚಿನ 'ಪ್ರಕೃತಿಯ ವಿನಾಶ'ದ ಪ್ರಮಾಣವನ್ನು ನೋಡುತ್ತೇವೆ, ಅದು ಈಗ ಪ್ರಬಲವಾಗಿರುವ ವಿನಾಶಕಾರಿ ತರ್ಕವನ್ನು ತೀವ್ರಗೊಳಿಸುತ್ತದೆ.

2008 ರಿಂದ ಹೆಚ್ಚುತ್ತಿರುವ ನಿರುದ್ಯೋಗದ ಕುರಿತು ಐ.ಎಲ್.ಒ. ಅಧ್ಯಯನ

ಜಾಗತಿಕ ಬಿಕ್ಕಟ್ಟಿನ ಹೊಸ್ತಿಲಲ್ಲಿ 2009 ರಲ್ಲಿ ವಿಶ್ವದಾದ್ಯಂತ ನಿರುದ್ಯೋಗಿಗಳ ಸಂಖ್ಯೆ 2007 ಕ್ಕೆ ಹೋಲಿಸಿದರೆ ಅಭೂತಪೂರ್ವವಾಗಿ 34 ದಶಲಕ್ಷ ಹೆಚ್ಚಳವಾಗಿ ಸುಮಾರು 212 ದಶಲಕ್ಷ ತಲುಪಿತು ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಕಚೇರಿ (ಐಎಲ್‌ಒ) ತನ್ನ ವಾರ್ಷಿಕ ಜಾಗತಿಕ ಉದ್ಯೋಗ ಪ್ರವೃತ್ತಿಗಳ ವರದಿಯಲ್ಲಿ ತಿಳಿಸಿದೆ. ಜಾಗತಿಕ ನಿರುದ್ಯೋಗ ದರವು 2009 ರಲ್ಲಿ 6.6% ಕ್ಕೆ ಏರಿತು, ಇದು 2007 ಕ್ಕೆ ಹೋಲಿಸಿದರೆ 0.9% ರಷ್ಟು ಹೆಚ್ಚಾಗಿದೆ. ಒಟ್ಟಾರೆಯಾಗಿ ಅಭಿವೃದ್ಧಿ ಹೊಂದಿದ ಮತ್ತು ಯುರೋಪಿಯನ್ ಯೂನಿಯನ್ ಪ್ರದೇಶದ ಒಟ್ಟು ಉದ್ಯೋಗಿಗಳ ಸಂಖ್ಯೆ, ಜಾಗತಿಕ ಉದ್ಯೋಗಿಗಳ ಶೇಕಡಾ 16 ಕ್ಕಿಂತ ಕಡಿಮೆ ಇದ್ದರೂ, ಅವುಗಳ ಆರ್ಥಿಕತೆಗಳು 2007 ರಿಂದ ಉಂಟಾದ ಜಾಗತಿಕ ನಿರುದ್ಯೋಗ ಹೆಚ್ಚಳದಲ್ಲಿ ಶೇಕಡಾ 40 ಕ್ಕಿಂತ ಹೆಚ್ಚು ಕೊಡುಗೆಯನ್ನು ನೀಡಿವೆ..

ಐಎಂಎಫ್ ಆರ್ಥಿಕ ಮುನ್ಸೂಚನೆಗಳ ಆಧಾರದ ಮೇಲೆ, 2010ರ ವೇಳೆಗೆ ಜಾಗತಿಕ ನಿರುದ್ಯೋಗವು ಹೆಚ್ಚಿನ ಮಟ್ಟದಲ್ಲೇ ಉಳಿಯುವ ಸಾಧ್ಯತೆಯಿದೆ ಎಂದು ಐಎಲ್‌ಒ ಅಂದಾಜಿಸಿತು. ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಲ್ಲಿ ಮತ್ತು ಯುರೋಪಿಯನ್ ಒಕ್ಕೂಟದ ನಿರುದ್ಯೋಗವು 2010 ರಲ್ಲಿ ಹೆಚ್ಚುವರಿ 3 ದಶಲಕ್ಷ ಹೆಚ್ಚಾಗುವ ನಿರೀಕ್ಷೆಯಿತ್ತು, ಆದರೆ ಇತರ ಪ್ರದೇಶಗಳಲ್ಲಿ ಅದು ಪ್ರಸ್ತುತ ಮಟ್ಟದಲ್ಲಿ ಸ್ಥಿರಗೊಳ್ಳುತ್ತದೆ, ಅಥವಾ ಸ್ವಲ್ಪ ಮಾತ್ರ ಕುಸಿಯುತ್ತಿದೆ,. 2007 ಕ್ಕೆ ಹೋಲಿಸಿದರೆ 2009 ರಲ್ಲಿ ವಿಶ್ವದಾದ್ಯಂತ ನಿರುದ್ಯೋಗಿ ಯುವಕರ ಸಂಖ್ಯೆ 10.2 ಮಿಲಿಯನ್ ಹೆಚ್ಚಾಗಿದೆ ಎಂದು ಐಎಲ್‌ಒ ಹೇಳಿದೆ, ಇದು 1991ರ ನಂತರದ ಅತಿ ದೊಡ್ಡ ಹೆಚ್ಚಳವಾಗಿದೆ.

ಪ್ರತಿ ವರ್ಷ ಜಾಗತಿಕ ಕಾರ್ಮಿಕ ಮಾರುಕಟ್ಟೆಗೆ 45 ದಶಲಕ್ಷ ಜನರು ಸೇರಲಿದ್ದಾರೆ, ಆದ್ದರಿಂದ ಚೇತರಿಕೆ ಕ್ರಮಗಳು ಮೊದಲ ಬಾರಿಗೆ ಶ್ರಮ–ಮಾರುಕಟ್ಟೆ ಪ್ರವೇಶಿಸುವ ಯುವಕ–ಯುವತಿಯರಿಗೆ ಉದ್ಯೋಗ ಸೃಷ್ಟಿಯನ್ನು ಗುರಿಯಾಗಿರಿಸಿಕೊಳ್ಳಬೇಕು ಎಂದು ಐಎಲ್‌ಒ ಮಹಾನಿರ್ದೇಶಕ ಜುವಾನ್ ಸೊಮಾವಿಯಾ ಕರೆ ನೀಡಿದರು.

ಪ್ರಪಂಚದಾದ್ಯಂತದ ಉದ್ಯಮಿಗಳು ಕಾರ್ಮಿಕ ಕಾನೂನುಗಳನ್ನು ಹೆಚ್ಚು ನಮ್ಯಮಾಡಲು, ಇದು ಉದ್ಯೋಗಗಳನ್ನು ಉಳಿಸುವ ಒಂದೇ ಮಾರ್ಗವಾಗಿದೆ ಎಂಬ ಕುತರ್ಕವನ್ನು ಬಳಸಿ, ಹೊಸ ಶಾಸನಕ್ಕಾಗಿ ಒತ್ತಾಯಿಸುತ್ತಿದ್ದಾರೆ, ಇದನ್ನು ಈಗಾಗಲೇ ಯುನೈಟೆಡ್ ಸ್ಟೇಟ್ಸ್, ಗ್ರೇಟ್ ಬ್ರಿಟನ್, ಸ್ಪೇನ್ ಮತ್ತು ಅರ್ಜೆಂಟೀನಾದಲ್ಲಿ ಅತ್ಯಂತ ತೀವ್ರವಾದ ರೀತಿಯಲ್ಲಿ ಪ್ರಯತ್ನಿಸಲಾಗಿದೆ, ಆದರೆ ನಿರುದ್ಯೋಗವು ಮೇಲ್ಮುಖವಾಗಿ ಸುತ್ತುತ್ತಲೇ ಇದೆ.

ಭಾರತದಲ್ಲಿ ಉದ್ಯೋಗದ ಪರಿಸ್ಥಿತಿ

ಭಾರತದಲ್ಲಿ, ನಿರುದ್ಯೋಗದ ಪರಿಸ್ಥಿತಿ ಸಾಕಷ್ಟು ಗಂಭೀರವಾಗಿದೆ. ಕಾರ್ಮಿಕ ಸಚಿವಾಲಯದ ಉದ್ಯೋಗ ವಿನಿಮಯ ಅಂಕಿ–ಅಂಶಗಳು ಡಿಸೆಂಬರ್ 2000 ರ ಲೈವ್ ರಿಜಿಸ್ಟರ್‌ನಿಂದ ಆತಂಕಕಾರಿ ಚಿತ್ರವನ್ನು ತೋರಿಸುತ್ತವೆ. ದುರದೃಷ್ಟವಶಾತ್, ನೋಂದಾಯಿತ ನಿರುದ್ಯೋಗದ ನವೀಕರಿಸಿದ ಅಂಕಿ–ಅಂಶಗಳನ್ನು ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ಅಥವಾ ಕಾರ್ಮಿಕ ಸಚಿವಾಲಯ ಪ್ರಕಟಿಸಿಲ್ಲ. ಕಳೆದ 10 ವರ್ಷಗಳಲ್ಲಿ, ವಿಶೇಷವಾಗಿ ಸೆಪ್ಟೆಂಬರ್ 15, 2008 ರ ಆಘಾತದ ನಂತರ ನಿರುದ್ಯೋಗ ಮುಂದುವರೆದಿದೆ ಮತ್ತು ಹೊಸ ಎತ್ತರಕ್ಕೆ ಏರಿದೆ ಎಂದು ನಾವು ಸುರಕ್ಷಿತವಾಗಿ ಊಹಿಸಬಹುದು.. ಕಾರ್ಮಿಕ ಸಚಿವಾಲಯದ 2000 ರ ಹಿಂದಿನ ಅಂಕಿಅಂಶಗಳನ್ನು ಕೆಳಗೆ ನೀಡಲಾಗಿದೆ:

* ಡಿಸೆಂಬರ್ 2000 ವೇಳೆಗೆ ಲೈವ್ ರಿಜಿಸ್ಟರ್‌ನಲ್ಲಿ ಉದ್ಯೋಗಾಕಾಂಕ್ಷಿಗಳ ಸಂಖ್ಯೆ 43436 ಸಾವಿರ ಎಂದರೆ 4,34,36,000.
* ಡಿಸೆಂಬರ್ 2000 ರ ವೇಳೆಗೆ ಮಹಿಳಾ ಉದ್ಯೋಗಾಕಾಂಕ್ಷಿಗಳ ಸಂಖ್ಯೆ 10457.3 ಸಾವಿರ
* ಡಿಸೆಂಬರ್ 1999 ರ ವೇಳೆಗೆ ಎಸ್.ಸಿ. ಉದ್ಯೋಗಾಕಾಂಕ್ಷಿಗಳ ಸಂಖ್ಯೆ 5948 ಸಾವಿರ
* ಡಿಸೆಂಬರ್ 1999 ರ ಹೊತ್ತಿಗೆ ವಿದ್ಯಾವಂತ ಎಸ್.ಟಿ. ಉದ್ಯೋಗಾಕಾಂಕ್ಷಿಗಳ ಸಂಖ್ಯೆ 3961.6 ಸಾವಿರ
* ಡಿಸೆಂಬರ್ 1999 ರ ಹೊತ್ತಿಗೆ ದೈಹಿಕವಾಗಿ ಅಂಗವಿಕಲ ಉದ್ಯೋಗಾಕಾಂಕ್ಷಿಗಳ ಸಂಖ್ಯೆ 455.9 ಸಾವಿರ
* ಡಿಸೆಂಬರ್, 1999 ರ ಹೊತ್ತಿಗೆ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ 5726.2 ಸಾವಿರ.

ಕಾರ್ಮಿಕ ಸಚಿವಾಲಯದ 2000 ಅಂಕಿ–ಅಂಶಗಳ ಆಧಾರದ ಮೇಲೆ, '2009 ರ ಹೊತ್ತಿಗೆ, ನಿರುದ್ಯೋಗವು ಚಿಮ್ಮಿ ರಭಸದಿಂದ ಏರಿದೆ ಮತ್ತು ಖಂಡಿತವಾಗಿಯೂ ಅದು 5 ಕೋಟಿಗೂ ಮೇಲಿರುತ್ತದೆ.

ಇದಲ್ಲದೆ, ಡಾ. ಅರ್ಜುನ್ ಸೇನ್‌ಗುಪ್ತಾ ಅವರ ವರದಿಯಲ್ಲಿನ ಕೆಲವು ಅಧ್ಯಯನಗಳನ್ನು ಹೊರತುಪಡಿಸಿ ಗ್ರಾಮೀಣ ನಿರುದ್ಯೋಗದ ಅಂಕಿಅಂಶಗಳು ಲಭ್ಯವಿಲ್ಲ. ನಗರ ನಿರುದ್ಯೋಗ (ನೋಂದಾಯಿತ ಮತ್ತು ನೋಂದಾಯಿಸದ) ಜೊತೆಗೆ ಗ್ರಾಮೀಣ ನಿರುದ್ಯೋಗ ಅಥವಾ ಅರೆ–ಉದ್ಯೋಗ ಸ್ಥಿತಿಯನ್ನು ನಾವು ಗಣನೆಗೆ ತೆಗೆದುಕೊಂಡರೆ ಅದು 12/13 ಕೋಟಿಯ ಸಮೀಪದಲ್ಲಿ ನಿಲ್ಲುತ್ತದೆ, ಇದು ಆತಂಕಕಾರಿ ದತ್ತಾಂಶವಾಗಿದೆ.

ಐ.ಎಲ್.ಒ. ವೇತನ ಪರಿಸ್ಥಿತಿಯ ಬಗ್ಗೆ 'ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮ' ಎಂದು ಕೆಲವು ಅಧ್ಯಯನಗಳನ್ನು ಮಾಡಿದೆ. ಪರಿಸ್ಥಿತಿಯ ಗುರುತ್ವವನ್ನು ಎತ್ತಿ ತೋರಿಸುವ ಆ ಅಧ್ಯಯನದ ಆಯ್ದ ಭಾಗಗಳು ಇಲ್ಲಿವೆ:

2008 ರ ಅಂತ್ಯದ ವರೆಗೆ ಅಧಿಕೃತ ವೇತನ ಅಂಕಿ–ಅಂಶಗಳು ಸ್ಥಿರವಾಗಿ ಲಭ್ಯವಿರುವ 53 ದೇಶಗಳನ್ನು ಒಳಗೊಂಡಿರುವ ನವೀಕರಿಸಿದ 'ಜಾಗತಿಕ ವೇತನ ದತ್ತಸಂಚಯ'ದ ಆಧಾರದ ಮೇಲೆ 'ಸರಾಸರಿ ವೇತನದಲ್ಲಿ ಜಾಗತಿಕ ಬೆಳವಣಿಗೆ 2007 ರಲ್ಲಿ 4.3% ರಿಂದ 2008 ರಲ್ಲಿ 1.4% ಕ್ಕೆಇಳಿದಿದೆ'. ಒಟ್ಟಾರೆಯಾಗಿ, ಬಹುಪಾಲು ದೇಶಗಳು ಕ್ಷೀಣಿಸುತ್ತಿರುವ ಆದರೆ ಧನಾತ್ಮಕ ವೇತನ ಬೆಳವಣಿಗೆಯನ್ನು 2008 ರಲ್ಲಿ ಕಾಯ್ದುಕೊಳ್ಳಬಹುದಾದರೂ, ಕಾಲು ಭಾಗದಷ್ಟು ದೇಶಗಳು ಮಾಸಿಕ ವೇತನಗಳಲ್ಲಿ ಸ್ಥಗಿತತೆ ಸಮತಟ್ಟಾದ ಅಥವಾ ಕುಸಿತವನ್ನು ಅನುಭವಿಸುತ್ತಿವೆ. ಈ ದೇಶಗಳಲ್ಲಿ ಯು.ಎಸ್.ಎ (0.0%), ಆಸ್ಟ್ರಿಯಾ (0.0%), ಕೋಸ್ಟರಿಕಾ (0.0%), ದಕ್ಷಿಣ ಆಫ್ರಿಕಾ (–0.3%), ಜರ್ಮನಿ (– 0.6%) ಸ್ವಿಟ್ಜರ್ಲೆಂಡ್ (–0.7%), ಇಸ್ರೇಲ್ (– 0.9) ಸೇರಿವೆ.

ಈ ವರದಿಯಲ್ಲಿ ಬಳಸಲಾಗುವ ವೇತನದ ಅಂಕಿ–ಅಂಶಗಳು, ನೌಕರರು ಪಡೆದ ಒಟ್ಟು ಮಾಸಿಕ ಸಂಭಾವನೆಯನ್ನು ಒಳಗೊಂಡಿರುತ್ತದೆ. ವೇತನ ಮಟ್ಟಗಳ ಅಂತರರಾಷ್ಟ್ರೀಯ ಹೋಲಿಕೆ ರಾಷ್ಟ್ರೀಯ ಸಮೀಕ್ಷೆಗಳಲ್ಲಿನ ವಿಭಿನ್ನ ಅಳತೆಗಳಿಂದ ಪ್ರಭಾವಿತವಾಗಿರುತ್ತದೆ ಎಂದು ಐಎಲ್‌ಒ ಗಮನಿಸಿದೆ.

ಅನೇಕ ದೇಶಗಳಲ್ಲಿ ವೇತನದ ಪಾಲು ಕ್ಷೀಣಿಸುತ್ತಿರುವುದರಿಂದ, ವೇತನದ ವಿಷಯ, ವಿತರಣೆಯು ಮತ್ತಷ್ಟು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಸಹಜವಾಗಿ, ವೇತನ ಅಸಮಾನತೆಯು ಒಂದು ಸಂಕೀರ್ಣ ವಿಷಯವಾಗಿದೆ, ಇದು ಅನೇಕ ಆಯಾಮಗಳನ್ನು ಒಳಗೊಂಡಿರುತ್ತದೆ.

ಅಸಮಾನತೆಯ ಮತ್ತೊಂದು ಮೂಲಭೂತ ಆಯಾಮವೆಂದರೆ ಪುರುಷರ ವೇತನ ಮತ್ತು ಮಹಿಳೆಯರ ವೇತನದ ನಡುವಿನ ವ್ಯತ್ಯಾಸ, ಇದನ್ನು "ಲಿಂಗ ವೇತನದ ಅಂತರ" ಎಂದು ಕರೆಯಲಾಗುತ್ತದೆ. ಈ ವಿಷಯವು ವಿಶೇಷ ಗಮನಕ್ಕೆ ಅರ್ಹವಾಗಿದ್ದರೂ, ಮಾಹಿತಿ ಮತ್ತು ಸಂಶೋಧನೆ ಎರಡರಲ್ಲೂ ಅಸ್ತಿತ್ವದಲ್ಲಿರುವ ನಿರ್ಬಂಧಗಳು ಜಾಗತಿಕ ದೃಷ್ಟಿಕೋನದಿಂದ ಲಿಂಗ ವೇತನದ ಅಂತರಗಳ ಸಮಗ್ರ ವಿಶ್ಲೇಷಣೆಯನ್ನು ಪ್ರಸ್ತುತಪಡಿಸಲು ಈ ಹಂತದಲ್ಲಿ ಕಷ್ಟಕರವಾಗಿದೆ.

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಿಕೆ ಯರ ಬೃಹತ್ ರಾಲಿ

ಸಾಮಾಜಿಕ ಭದ್ರತೆ ಸೌಲಭ್ಯಗಳಿಗೆ ತಕ್ಷಣದ ಅವಕಾಶ, ಪಿಂಚಣಿ ಯೋಜನೆ ರೂಪಿಸುವುದು, ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳ (ಐಸಿಡಿಎಸ್) ಖಾಸಗೀಕರಣಕ್ಕಾಗಿ ಯಾವುದೇ ಕಲ್ಪನೆಯನ್ನು ತಡೆಯುವುದು, ಕನಿಷ್ಠ ವೇತನ ನೀಡುವುದು– ಇವು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಿಕೆಯರ ದೀರ್ಘಕಾಲದ ಬೇಡಿಕೆಗಳಲ್ಲಿ ಕೆಲವು. 4 ಮೇ 2010 ರ ಬೆಳಿಗ್ಗೆ, ದೆಹಲಿಯ ರಸ್ತೆಗಳಲ್ಲಿ ಸುಮಾರು 20 ಸಾವಿರ ಜನರು ಅಣಿನೆರೆದರು. ಎ.ಐ.ಎಫ್.ಎ.ಡಬ್ಲ್ಯು. ಎಚ್.ನ (ಆಲ್ ಇಂಡಿಯಾ ಫೆಡರೇಶನ್ ಆಫ್ ಅಂಗನವಾಡಿ ವರ್ಕರ್ಸ್ ಅಂಡ್ ಹೆಲ್ಪರ್ಸ್) ಕರೆಯ ಮೇರೆಗೆ ('ಮಹಾಪಡಾವ್') ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ದೇಶದ ಮೂಲೆ ಮೂಲೆಯಿಂದ ನೌಕರರು ಬಂದರು. ಯು.ಪಿ.ಎ. ಸರಕಾರದಿಂದ ಅಸಡ್ಡೆಯಿಂದ ತಮ್ಮ ಬೇಡಿಕೆಗಳು ಬಾಕಿ ಇರುವ ಬಗ್ಗೆ ತಮ್ಮ ಕೋಪವನ್ನು ತೋರಿಸಿದರು. ಭೀಕರವಾದ ಮೇ ತಿಂಗಳ ಬಿಸಿಲು, ದೇಶದ ದೂರದ ಮೂಲೆಗಳಿಂದ ದೆಹಲಿಗೆ ಆಯಾಸದ ಪ್ರಯಾಣ, ಮನೆಯ ಸುರಕ್ಷತೆ, ಕುಟುಂಬದಲ್ಲಿನ ಬೇಕು–ಬೇಡಗಳನ್ನೆಲ್ಲ ಬದಿಗಿಟ್ಟು , ತಮ್ಮ ಹಕ್ಕುಗಳಿಗಾಗಿ ನೆರೆದಿದ್ದ ಸಾವಿರಾರು ಜನರ ಅನ್ವೇಷಣೆಯನ್ನು ತಡೆಯಲು ಸಾಧ್ಯವಾಗಲಿಲ್ಲ. ಅವರು ರಾಜಧಾನಿಗೆ ಬಂದು ಸೇರಿದರು, ನಂತರ ಕಾಮನ್ವೆಲ್ತ್ ಕ್ರೀಡಾಕೂಟಕ್ಕಾಗಿ ನವೀಕರಣಗಳು ಪ್ರಗತಿಯಲಿದ್ದ ರಸ್ತೆಗಳ ಅಸ್ತವ್ಯಸ್ಥೆಯ ನಡುವೆ ಅವೇ ರಸ್ತೆಗಳಲ್ಲಿ ರಾತ್ರಿಗಳನ್ನು ಕಳೆದರು, ಜೋಡಿಸಿಟ್ಟಿದ್ದ ಇಟ್ಟಿಗೆ ರಾಶಿಗಳ ಮೇಲೆ ಕುಳಿತು ತಮ್ಮ ಬೇಡಿಕೆಗಳ ನ್ಯಾಯಸಮ್ಮತತೆಯ ಬಗ್ಗೆ ಉತ್ಸಾಹದಿಂದ ಘೋಷಣೆಗಳನ್ನು ಕೂಗಿದರು.

ಎ.ಐ.ಎಫ್.ಎ..ಡಬ್ಲ್ಯೂ.ಎಚ್.ನ ನಿಯೋಗ ಪ್ರಧಾನ ಕಾರ್ಯದರ್ಶಿ ಹೇಮಲತಾ ಮತ್ತು ಕೆಲವು ಪ್ರಮುಖ ನಾಯಕರೊಂದಿಗೆ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್ ಅವರನ್ನು 5 ಮೇ 2010 ರಂದು ಭೇಟಿಯಾದರು ಮತ್ತು ಅಂಗನವಾಡಿ ನೌಕರರು ಮತ್ತು ಸಹಾಯಿಕಿಯರ ಪ್ರಮುಖ ಬೇಡಿಕೆಗಳನ್ನು ಮಂಡಿಸಿದರು.

ಅಸ್ಪಷ್ಟ ಆಶ್ವಾಸನೆಯಿಂದ ತೃಪ್ತರಾಗದ ಎ.ಐ.ಎಫ್.ಎ.ಡಬ್ಲ್ಯೂ.ಎಚ್. ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ನಿರ್ಧರಿಸಿತು. ಪ್ರಧಾನಮಂತ್ರಿಯವರು ಆಶ್ವಾಸನೆಗಳನ್ನು ಜಾರಿಗೊಳಿಸದಿದ್ದರೆ ಜುಲೈ 2010 ರಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು

ಪುಟ 14 ನೋಡಿ

ಸಪ್ಟಂಬರ್‌ನಲ್ಲಿ ವ್ಯಾಪಕ ಪ್ರತಿಭಟನೆ - ಸಿಪಿಐ(ಎಂ) ಕರೆ

ಪುಟ 2 ರಿಂದ

ಮತ್ತು ಲಸಿಕೆ ಹಾಕುವಿಕೆಯನ್ನು ತೀವ್ರಗೊಳಿಸಬೇಕು.

ಕೋವಿಡ್ ದುರಾಡಳಿತ ಮತ್ತು ಅಳಗೊಳ್ಳುತ್ತಿರುವ ಆರ್ಥಿಕ ಹಿಂಜರಿತ

ಕೇಂದ್ರ ಸರ್ಕಾರಕ್ಕೆ ಕೋವಿಡನ್ನು ಸರಿಯಾಗಿ ನಿಭಾಯಿಸಲು ಸಾಧ್ಯವಾಗದಿರುವುದು ಮತ್ತು ಅದರ ನೀತಿಗಳಿಂದ ಆರ್ಥಿಕ ವ್ಯವಸ್ಥೆ ಸುಮಾರಾಗಿ ನಾಶವೇ ಆಗುವ ಸ್ಥಿತಿಯಲ್ಲಿರುವುದು ನಮ್ಮ ಜನರ ಮೇಲೆ ತೀವ್ರ ಸಂಕಟಗಳನ್ನು ಹೇರುತ್ತಿದೆ. ನಿರುದ್ಯೋಗ ತೀವ್ರವಾಗಿ ಬೆಳೆಯುತ್ತಿದೆ. ನಾಗಾಲೋಟ ಹೂಡಿರುವ ಹಣದುಬ್ಬರದೊಂದಿಗೆ ಬಡತನ ಆತಂಕಕಾರಿಯಾಗಿ ಏರುತ್ತಿದೆ. ಕಡಿಮೆ ಆದಾಯ ಮತ್ತು ಹೆಚ್ಚುತ್ತಿರುವ ಬೆಲೆಯೊಂದಿಗೆ ನಿರುದ್ಯೋಗದ ದ್ವಿವಿಧ ದಾಳಿಯು ಜನರ ಜೀವನೋಪಾಯದ ಜೀವಾಳವನ್ನೇ ತಿಂದು ಹಾಕುತ್ತಿದೆ ಮತ್ತು ಕುಟುಂಬಗಳನ್ನು ಸಾಲದ ಬಲೆಗೆ ತಳ್ಳುತ್ತಿದೆ.

ಈ ಸಮಸ್ಯೆಗಳನ್ನುಕೈಗೆತ್ತಿಕೊಳ್ಳುವ ಮತ್ತು ಜನರಿಗೆ ಪರಿಹಾರ ಒದಗಿಸುವ ಬದಲು, ಈ ಬಿಜೆಪಿ ಕೇಂದ್ರ ಸರ್ಕಾರ ಭಾರತದ ರಾಷ್ಟ್ರೀಯ ಸ್ವತ್ತುಗಳನ್ನು ಮತ್ತು ಜನರ ಸಂಪತ್ತನ್ನು ದೊಡ್ಡ ಪ್ರಮಾಣದ ಖಾಸಗೀಕರಣದ ಮೂಲಕ ಆಕ್ರಾಮಕ ರೀತಿಯಲ್ಲಿ ಲೂಟಿಯನ್ನು ಮುಂದುವರೆಸಿದೆ. ಮತ್ತು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದರೊಂದಿಗೆ, ಮಹಿಳೆಯರು, ದಲಿತರು ಹಾಗೂ ಆದಿವಾಸಿಗಳು ಮತ್ತು ಜನರ ಪ್ರಜಾಪ್ರಭುತ್ವ ಹಕ್ಕುಗಳೂ ಹಾಗೂ ನಾಗರಿಕ ಸ್ವಾತಂತ್ರ್ಯಗಳ ಮೇಲೆ ದಾಳಿಗಳು ಹೆಚ್ಚುತ್ತಿವೆ.

ಸಂಸತ್ತಿನಲ್ಲಿ ಅಡಚಣೆ

ದೇಶ ಮತ್ತು ಜನರ ಮುಂದಿರುವ ಪ್ರಚಂಡ ಸಮಸ್ಯೆಗಳ ಈ ಪರಿಸ್ಥಿತಿಯಲ್ಲಿ, ಆಡಳಿತಾರೂಢ ಬಿಜೆಪಿ ಮತ್ತು ಕೇಂದ್ರ ಸರ್ಕಾರವು ಪೆಗಾಸಸ್ ಗೂಢಚರ್ಯೆ ತಂತ್ರಾಂಶದ ಕಣ್ಗಾವಲು ಪ್ರಶ್ನೆಯನ್ನು ಚರ್ಚಿಸಲು ಪಟ್ಟು ಹಿಡಿದು ನಿರಾಕರಿಸುತ್ತ ಸಂಸತ್ತಿಗೆ ಅಡ್ಡಿಯುಂಟು ಮಾಡುತ್ತಿವೆ. ಈ ಬಿಜೆಪಿ ಕೇಂದ್ರ ಸರ್ಕಾರ ಸಂವಿಧಾನದ ಆದೇಶದಂತೆ ಸಂಸತ್ತಿಗೆ ಉತ್ತರದಾಯಿಯಾಗಲು ಅಭೂತಪೂರ್ವ ಭಂಡ ನಿರಾಕರಣೆಯನ್ನು ಪ್ರದರ್ಶಿಸುತ್ತಿದೆ.

ಅದೇ ಸಮಯದಲ್ಲಿ, ಸಂಸತ್ತನ್ನು ಅಡ್ಡಿಪಡಿಸುತ್ತಲೇ, ಅದು ಜನವಿರೋಧಿ ಮತ್ತು ಭಾರತದ ಆರ್ಥಿಕ ಸಾರ್ವಭೌಮತ್ವವನ್ನು ದುರ್ಬಲಗೊಳಿಸುವ ವಿವಿಧ ಮಸೂದೆಗಳನ್ನು ಗದ್ದಲದ ನಡುವೆಯೇ ಶಾಸನಗಳಾಗಿ ಮಾಡುತ್ತಿದೆ. ಇದು ಸ್ವೀಕಾರಾರ್ಹವಲ್ಲ ಮತ್ತು ಅದನ್ನು ಪ್ರತಿರೋಧಿಸಲಾಗುತ್ತದೆ.

ಪೆಗಾಸಸ್ ಗೂಢಚರ್ಯೆ ತಂತ್ರಾಂಶದ ಕಣ್ಗಾವಲು

ಭಾರತ ಸರ್ಕಾರವು ಜನರ ಮೇಲೆ ಗೂಢಚಾರಿಕೆ ನಡೆಸಲು ಪೆಗಾಸಸ್ ಮಿಲಿಟರಿ ಗೂಢಚರ್ಯೆ ತಂತ್ರಾಂಶವನ್ನು ಖರೀದಿಸುತ್ತಿರುವುದು ತುಂಬಾ ಆತಂಕಕಾರಿಯಾಗಿದೆ. ಪೆಗಾಸಸ್ ಮಿಲಿಟರಿ ಗೂಢಚರ್ಯೆ ತಂತ್ರಾಂಶದ ಬಳಕೆಗಾಗಿ ಅದು ಅಥವಾ ಅದರ ಯಾವುದೇ ಏಜೆನ್ಸಿಗಳು ಸೈಬರ್ ಮಿಲಿಟರಿ ಕಣ್ಗಾವಲು ಕ್ಷೇತ್ರದ ಜಗತ್ತಿನ ಪ್ರಧಾನ ಇಸ್ರೇಲಿ ಸಂಸ್ಥೆ NSO ದೊಂದಿಗೆ ವ್ಯವಹರಿಸಿದ್ದಾರೆಯೇ ಎಂಬ ಒಂದು ನೇರ ಪ್ರಶ್ನೆಗೆ ಉತ್ತರಿಸಲು ಸರ್ಕಾರ ನಿರಾಕರಿಸುತ್ತಿದೆ. ಸರ್ಕಾರ ಉತ್ತರಿಸಲೇಬೇಕು ಮತ್ತು ಸಂಗತಿಯನ್ನು ಸ್ಪಷ್ಟಪಡಿಸಬೇಕು. ಇಂತಹ ಕಣ್ಗಾವಲು ಜನರ ಖಾಸಗಿತನದ ಮೂಲಭೂತ ಹಕ್ಕಿನ ಸಂಪೂರ್ಣ ಉಲ್ಲಂಘನೆಯಾಗಿದೆಯಷ್ಟೇ ಅಲ್ಲ, ಇದು ಭಾರತೀಯ ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲಿನ ದಾಳಿಯಾಗಿದೆ. ಕಣ್ಗಾವಲಿನಲ್ಲಿರುವವರ ಪಟ್ಟಿಯಲ್ಲಿ ರಾಜಕೀಯ ನಾಯಕರು, ಪತ್ರಕರ್ತರು, ಮಾಜಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಮತ್ತು ನ್ಯಾಯಾಂಗದ ಅಧಿಕಾರಿಗಳು, ಮಾಜಿ ಸಿಬಿಐ ಮುಖ್ಯಸ್ಥರು, ಮಾಜಿ ಚುನಾವಣಾ ಆಯುಕ್ತರು ಮುಂತಾದವರು ಸೇರಿದ್ದಾರೆ. ಇದು ಅನಿಷ್ಟಕಾರಿ. ವ್ಯಕ್ತಿಗಳ ಹೊರತಾಗಿ, ಇದು ಪ್ರಜಾಪ್ರಭುತ್ವದಲ್ಲಿ ತಪಾಸಣೆ ಮತ್ತು ಸಮತೋಲನದ ಬಹು ಮಹತ್ವದ ಕಾರ್ಯವನ್ನು ನಿರ್ವಹಿಸುವ ಸಂಸ್ಥೆಗಳ ಮೇಲೆ ಮತ್ತು ಅವುಗಳ ಸಾಂವಿಧಾನಿಕ ಜವಾಬ್ದಾರಿ ನಿರ್ವಹಣೆಯ ಮೇಲಿನ ದಾಳಿಯಾಗಿದೆ.

ಸತ್ಯವನ್ನು ಸ್ಥಾಪಿಸಲು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸಲು ಸರ್ವೋಚ್ಚ ನ್ಯಾಯಾಲಯ ಮೇಲ್ವಿಚಾರಣೆ ನಡೆಸುವ ಒಂದು ಉನ್ನತ ಮಟ್ಟದ ವಿಚಾರಣೆ ತಕ್ಷಣವೇ ನಡೆಯಬೇಕು.

ಹೆಚ್ಚುತ್ತಿರುವ ಪ್ರತಿಭಟನೆಗಳು

ಐತಿಹಾಸಿಕ ರೈತ ಹೋರಾಟ: ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವಂತೆ ಮತ್ತು ಸಿ2+50% ಉತ್ಪಾದನಾ ವೆಚ್ಚದ ಸೂತ್ರದಂತೆ ನಿಗದಿಪಡಿಸುವ ಎಂ.ಎಸ್.ಪಿ. ದರಗಳಲ್ಲಿ ಮಾರುವ ಕಾನೂನಾತ್ಮಕ ಹಕ್ಕಿಗಾಗಿ ಒತ್ತಾಯಿಸಿ ಭಾರತೀಯ ರೈತರು ಎಂಟು ತಿಂಗಳಿಗಿಂತಲೂ ಹೆಚ್ಚು ಸಮಯದಿಂದ ನಿರಂತರ ನಡೆಸಿರುವ ಹೋರಾಟವನ್ನು ಸ್ವತಂತ್ರ ಭಾರತ ಹಿಂದೆಂದೂ ಕಂಡಿಲ್ಲ.

ಈ ಶಾಂತಿಯುತ ಪ್ರತಿಭಟನೆ ಭಾರತೀಯ ಜನವಿಭಾಗಗಳಿಂದ ವ್ಯಾಪಕ ಸೌಹಾರ್ದವನ್ನು ಗಳಿಸಿದೆ ಮತ್ತು ಅದು ಮುಂದುವರೆದಿದೆ. ಪ್ರಸಕ್ತ ಸಂಸತ್ ಅಧಿವೇಶನದ ಅಂತ್ಯದವರೆಗೂ ನಡೆಯುತ್ತಿರುವ ಸಮಾನಾಂತರ 'ಕಿಸಾನ್ ಸಂಸದ್ 'ಈ ಬೇಡಿಕೆಗಳಿಗೆ ವ್ಯಾಪಕ ಬೆಂಬಲವನ್ನು ಎತ್ತಿ ತೋರಿಸುತ್ತಿದೆ.

ಕಾರ್ಮಿಕ ಸಂಘಟನೆಗಳು, ಕಿಸಾನ್ ಸಭಾಗಳು ಮತ್ತು ಕೃಷಿ ಕಾರ್ಮಿಕ ಸಂಘಟನೆಗಳ ಜಂಟಿ ಪ್ರತಿಭಟನೆಗಳು: ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು ಮತ್ತು ಕೃಷಿ ಕಾರ್ಮಿಕ ಸಂಘಟನೆಗಳು ಒಟ್ಟುಗೂಡಿರುವುದು ತಮ್ಮ ಹಕ್ಕುಗಳ ರಕ್ಷಣೆಯಲ್ಲಿ ನಮ್ಮ ದೇಶದ ಆಸ್ತಿಗಳ ರಕ್ಷಣೆಗಾಗಿ, ದೇಶದ ಆಧಾರವಾಗಿರುವ ದುಡಿಯುವ ಜನಗಳ ಐಕ್ಯತೆಯನ್ನು ಬಲಪಡಿಸುವ ಒಂದು ಐತಿಹಾಸಿಕ ಹೆಜ್ಜೆಯಾಗಿದೆ.

ಕಾರ್ಮಿಕ ವರ್ಗದ ಕಾರ್ಯಾಚರಣೆಗಳು: ಖಾಸಗೀಕರಣದ ವಿರುದ್ಧ ದೊಡ್ಡ ಪ್ರಮಾಣದ ಪ್ರತಿಭಟನೆಗಳು ಮತ್ತು ಹೋರಾಟಗಳು ವಿವಿಧ ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ವಲಯಗಳಲ್ಲಿ ನಡೆಯುತ್ತಿವೆ. ಸಾಮಾನ್ಯ ವಿಮಾ ಕ್ಷೇತ್ರದ ಉದ್ಯೋಗಿಗಳು ಆಗಸ್ಟ್ 4 ರಂದು ದೇಶಾದ್ಯಂತ ಸಂಪೂರ್ಣ ಮುಷ್ಕರ ನಡೆಸಿದ್ದಾರೆ. ಮೊದಲ ಬಾರಿಗೆ ವಿದ್ಯುತ್ ನೌಕರರು ಮತ್ತು ಅಧಿಕಾರಿಗಳ ಸಂಪೂರ್ಣ ವಲಯವು ಆಗಸ್ಟ್ 10 ರಂದು ಮುಷ್ಕರ ನಡೆಸುತ್ತಿದೆ.

ಇತರ ವಿಭಾಗಗಳು: ಯುವಜನರು ಹೆಚ್ಚುತ್ತಿರುವ ನಿರುದ್ಯೋಗದ ವಿರುದ್ಧ ದನಿಯೆತ್ತುತ್ತಿದ್ದಾರೆ, ಸರ್ಕಾರಿ ಮತ್ತು ಸಂಬಂಧಿತ ಇಲಾಖೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಒತ್ತಾಯಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಬೇಗನೆ ತೆರೆಯಲು ಅನುವಾಗುವಂತಹ ಪರಿಸ್ಥಿತಿಗಳನ್ನು ಸೃಷ್ಟಿಸಬೆಕೆಂದು ಮತ್ತು ಸಾರ್ವಜನಿಕ ಶಿಕ್ಷಣವನ್ನು ಬಲಪಡಿಸಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸುತ್ತಿದ್ದಾರೆ. ಮಹಿಳೆಯರು ಬೀದಿಗಿಳಿದು ಹಸಿವಿನ ವಿರುದ್ಧ ಹೋರಾಡುತ್ತಿದ್ದಾರೆ ಮತ್ತು ಜನರಿಗೆ ಪರಿಹಾರ ವಿತರಿಸುತ್ತಿದ್ದಾರೆ.

ತ್ರಿಪುರಾ: ದಾಳಿಗಳನ್ನು ನಿಲ್ಲಿಸಿ

ತ್ರಿಪುರಾದಲ್ಲಿ ಸಿಪಿಐ (ಎಂ) ಕಚೇರಿಗಳು ಮತ್ತು ಕಾರ್ಯಕರ್ತರ ಮೇಲೆ ಬಿಜೆಪಿ ಗೂಂಡಾಗಳು ನಡೆಸುತ್ತಿರುವ ದಾಳಿಗಳನ್ನು ಕೇಂದ್ರ ಸಮಿತಿಯು ಬಲವಾಗಿ ಖಂಡಿಸಿತು. ಕಳೆದ ವಾರ, ಮಾಣಿಕ್‌ಭಂದರ್‌ನಲ್ಲಿರುವ ಪಕ್ಷದ ಕಮಲಪುರ ಉಪ ವಿಭಾಗ ಕಚೇರಿಗೆ ಬೆಂಕಿ ಹಚ್ಚಲಾಯಿತು. ಈ ಹಿಂದೆ, ಸಿಪಿಐ (ಎಂ) ನಾಯಕ ರಂಜಿತ್ ಘೋಷ್ ಕಮಲಪುರದ ಸ್ಥಳೀಯ ಕಛೇರಿಯಲ್ಲಿ ಹಲ್ಲೆಗೆ ಒಳಗಾಗಿ, ತೀವ್ರವಾಗಿ ಗಾಯಗೊಂಡಿದ್ದರು. ಕಚೇರಿಗಳ ಮೇಲೆ ದಾಳಿ ಮತ್ತು ಬೆಂಕಿ ಹಚ್ಚುವ ಕೃತ್ಯಗಳು ಬೆಲೋನಿಯಾ ಮತ್ತು ಜಿರಾನಿಯಾ ಉಪವಿಭಾಗಗಳಲ್ಲೂ ನಡೆದಿವೆ.

ಈ ದಾಳಿಗಳಿಗೆ ಸಂಬಂಧಿಸಿದಂತೆ ಸಿಪಿಐ (ಎಂ) ನಿಯೋಗಗಳು ಈ ಹಿಂದೆ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಯನ್ನು ಭೇಟಿಯಾಗಿದ್ದವು ಮತ್ತು ಅಂತಹ ಹಿಂಸೆಯನ್ನು ಅನುಮತಿಸಲಾಗುವುದಿಲ್ಲ ಎಂದು ಅವರು ಭರವಸೆ ನೀಡಿದ್ದರು. ಆದರೆ, ಇದರ ಹೊರತಾಗಿಯೂ, ಭಯೋತ್ಪಾದನೆಯ ಆಳ್ವಿಕೆ ಮುಂದುವರಿದಿದೆ.

ಕೇಂದ್ರ ಸಮಿತಿ ರಾಜ್ಯ ಸರ್ಕಾರಕ್ಕೆ ಪ್ರತಿಪಕ್ಷಗಳ ಮೇಲಿನ ಈ ನಿರ್ಲಜ್ಜ ದಾಳಿಯನ್ನು ಕೊನೆಗೊಳಿಸಬೇಕು ಮತ್ತು ಪ್ರಜಾಪ್ರಭುತ್ವದ ಹಕ್ಕುಗಳನ್ನು ರಕ್ಷಿಸಬೇಕು ಎಂದು ಕರೆ ನೀಡುತ್ತದೆ.

ಟೋಕಿಯೊ ಒಲಿಂಪಿಕ್ಸ್

ಸಿಪಿಐ(ಎಂ) ನ ಕೇಂದ್ರ ಸಮಿತಿಯು ಟೋಕಿಯೊ ಒಲಿಂಪಿಕ್ಸ್ ನಲ್ಲಿ ಪದಕಗಳನ್ನು ಗೆದ್ದ ಮತ್ತು ದೇಶಕ್ಕೆ ಕೀರ್ತಿ ತಂದ ಎಲ್ಲರನ್ನು ಅಭಿನಂದಿಸುತ್ತದೆ. ಭಾರತವು ಮೊದಲ ಬಾರಿಗೆ ಅಥ್ಲೆಟಿಕ್ಸ್‌ನಲ್ಲಿ ಒಲಿಂಪಿಕ್ ಪದಕ ಗೆದ್ದಿದ್ದು, ಅದೂ ಚಿನ್ನದ ಪದಕ ಪಡೆದಿರುವುದು ಐತಿಹಾಸಿಕವಾಗಿದೆ. ಪುರುಷರ ಹಾಕಿ ತಂಡ ಕಂಚಿನ ಪದಕ ಗೆದ್ದರೆ, ಮಹಿಳಾ ಹಾಕಿ ತಂಡವು ಚೈತನ್ಯಪೂರ್ಣ ಪ್ರದರ್ಶನ ನೀಡಿ ನಾಲ್ಕನೇ ಸ್ಥಾನದಲ್ಲಿದೆ. ಆರು ವೈಯಕ್ತಿಕ ಪದಕ ವಿಜೇತರಲ್ಲಿ ಮೂವರು ಮಹಿಳೆಯರು ಎಂಬುದು ಹೃದಯಸ್ಪರ್ಶಿಯಾಗಿದೆ.

ಈ ಅದ್ಭುತ ಪ್ರದರ್ಶನಗಳ ಹೊರತಾಗಿಯೂ, ಪದಕಗಳ ಸಂಖ್ಯೆ ಇಷ್ಟು ಕಡಿಮೆ ಇರುವುದು, ದೇಶದಲ್ಲಿ ಕ್ರೀಡೆಗಳು ಎಷ್ಟು ನಿರ್ಲಕ್ಷ್ಯಕ್ಕೊಳಗಾಗಿವೆ ಎಂಬುದನ್ನು ತೋರಿಸುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕ್ರೀಡಾ ಸೌಲಭ್ಯಗಳು ಮತ್ತು ತರಬೇತಿಗೆ ಪ್ರಭುತ್ವದ ಬೆಂಬಲದ ಒಂದು ಸಮಗ್ರ ನೀತಿಯಿರಲೇ ಬೇಕು.

ಜಾತಿ ನಿಂದನೆಯನ್ನು ಖಂಡಿಸಿ

ಕೇಂದ್ರ ಸಮಿತಿಯು ಹರಿದ್ವಾರದಲ್ಲಿ, ಮಹಿಳಾ ಹಾಕಿ ಆಟಗಾರ್ತಿ ವಂದನಾ ಕಟಾರಿಯಾ ವಿರುದ್ಧದ ಜಾತಿವಾದಿ ನಿಂದನೆಯನ್ನು ಬಲವಾಗಿ ಖಂಡಿಸಿತು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿತು

ಭಾರತದ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವ

ಪಕ್ಷ ಈ ವಾರ್ಷಿಕೋತ್ಸವದ ಆಚರಣೆ ನಡೆಸಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿದೆ. ಇದರಲ್ಲಿ, ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರವನ್ನು, ಆಧುನಿಕ ಭಾರತದ ನಿರ್ಮಾಣದಲ್ಲಿ ಮತ್ತು "ಭಾರತ ಎಂಬ ಭಾವ"ವನ್ನು ಕ್ರೋಡೀಕರಿಸುವಲ್ಲಿ ಕಮ್ಯುನಿಸ್ಟ್ ಪಕ್ಷದ ಕೊಡುಗೆಗಳನ್ನು ಮತ್ತು 'ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಆರ್‌ಎಸ್‌ಎಸ್ ನ ಸಂಪೂರ್ಣ ಅನುಪಸ್ಥಿತಿ, ಕೆಲವೊಮ್ಮೆ ಬ್ರಿಟಿಷರೊಂದಿಗೆ ಶಾಮೀಲನ್ನು ಹಾಗೂ ಇಂದು ಭಾರತದ ಸಾಂವಿಧಾನಿಕ ಜಾತ್ಯತೀತ ಪ್ರಜಾಪ್ರಭುತ್ವ ಗಣತಂತ್ರವನ್ನು ದುರ್ಬಲಗೊಳಿಸುವ ಅದರ ದುಷ್ಟತನವನ್ನು ಎತ್ತಿ ತೋರಲಾಗುವುದು.

ಸಿಪಿಐ (ಎಂ) ನ 23 ನೇ ಮಹಾಧಿವೇಶನ

ಕೇಂದ್ರ ಸಮಿತಿಯು ಪಕ್ಷದ 23 ನೇ ಮಹಾಧಿವೇಶನವನ್ನು ಏಪ್ರಿಲ್ 2022 ರಲ್ಲಿ ಕೇರಳದ ಕಣ್ಣೂರಿನಲ್ಲಿ ಕರೆಯಲು ನಿರ್ಧರಿಸಿತು. ಇದು ಮಹಾಸೋಂಕಿನ ಮೂರ್ತ ಪರಿಸ್ಥಿತಿಗಳಲ್ಲಿ ಅಗತ್ಯ ವಿಧಿ–ವಿಧಾನಗಳನ್ನು ಪಾಲನೆಗೆ ಒಳಪಟ್ಟಿರುತ್ತದೆ.

ಕೇಂದ್ರ ಸಮಿತಿಯ ಆಗ್ರಹಗಳು

ಕೇಂದ್ರ ಸರ್ಕಾರ ಈ ಕೆಳಗಿನ ಪ್ರಶ್ನೆಗಳ ಮೇಲಿನ ಆಗ್ರಹಗಳನ್ನು ಜಾರಿಗೊಳಿಸಬೇಕು ಎಂದು ಕೇಂದ್ರ ಸಮಿತಿಯು ಒತ್ತಾಯಿಸುತ್ತದೆ:

1. ಜಾಗತಿಕವಾಗಿ ಲಸಿಕೆಗಳನ್ನು ಖರೀದಿಸಬೇಕು ಮತ್ತು ತಕ್ಷಣವೇ ಉಚಿತ ಸಾರ್ವತ್ರಿಕ ಸಾಮೂಹಿಕ ಲಸಿಕೀಕರಣ ಅಭಿಯಾನವನ್ನು ತ್ವರಿತಗೊಳಿಸಬೇಕು; ಕೋವಿಡ್‌ನಿಂದ ಪ್ರಾಣ ಕಳೆದುಕೊಂಡವರಿಗೆ ಸಾಕಷ್ಟು ಪರಿಹಾರ ಒದಗಿಸಬೇಕು; ಸಾರ್ವಜನಿಕ ಆರೋಗ್ಯ ಪಾಲನೆ ವ್ಯವಸ್ಥೆಯನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಬೇಕು.
2. ಆದಾಯ ತೆರಿಗೆ ವ್ಯಾಪ್ತಿಯ ಹೊರಗಿನ ಎಲ್ಲ ಕುಟುಂಬಗಳಿಗೆ ತಿಂಗಳಿಗೆ 7,500 ರೂ.ಗಳ ಉಚಿತ ನಗದು ವರ್ಗಾವಣೆಗಳನ್ನು ಜಾರಿಗೊಳಿಸಬೇಕು.
3. ಅಗತ್ಯವಿರುವ ಎಲ್ಲರಿಗೆ ದೈನಂದಿನ ಬಳಕೆಯ ಎಲ್ಲಾ ಅಗತ್ಯ ವಸ್ತುಗಳನ್ನು ಹೊಂದಿರುವ ಉಚಿತ ಆಹಾರ ಕಿಟ್‌ಗಳನ್ನು ವಿತರಿಸಬೇಕು.
4. ಎಲ್ಲಾ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಕೇಂದ್ರೀಯ ಅಬಕಾರಿ ಸುಂಕ ಹೆಚ್ಚಳವನ್ನು ಹಿಂಪಡೆಯಬೇಕು ಮತ್ತು ನಾಗಾಲೋಟ ಹೂಡಿರುವ ಹಣದುಬ್ಬರವನ್ನು ನಿಯಂತ್ರಿಸಬೇಕು.
5. ಕೃಷಿ ಕಾನೂನುಗಳನ್ನು ರದ್ದುಗೊಳಿಸಬೇಕು ಮತ್ತು MSP ನಲ್ಲಿ(ಕನಿಷ್ಟ ಬೆಂಬಲ ಬೆಲೆಯಲ್ಲಿ) ಮಾರಾಟ ಮಾಡುವ ಹಕ್ಕನ್ನು ಕೊಡುವ ಶಾಸನ ತರಬೇಕು. ಅ2+50 ಶೇಕಡ ಸೂತ್ರದ ಪ್ರಕಾರ MSP ಇರಬೇಕು.
6. ಸಾರ್ವಜನಿಕ ವಲಯದ ಖಾಸಗೀಕರಣವನ್ನು ನಿಲ್ಲಿಸಬೇಕು ಮತ್ತು ಹಿಂದಕ್ಕೆ ತಿರುಗಿಸಬೇಕು; ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು.
7. ಮುಷ್ಕರಗಳ ಮೂಲಕ ಪ್ರತಿಭಟಿಸುವ ಮತ್ತು ವೇತನ ಚೌಕಾಶಿಯ ದುಡಿಯುವ ಜನರ ಹಕ್ಕುಗಳನ್ನು ಮರುಸ್ಥಾಪಿಸಬೇಕು..
8. ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆ(MSME) ಗಳ ಪುನರುಜ್ಜೀವನಕ್ಕಾಗಿ ವಿತ್ತೀಯ ಉತ್ತೇಜನಾ ಪ್ಯಾಕೇಜ್‌ಗಳನ್ನು ಘೋಷಿಸಬೇಕು, ಸಾಲ ನೀಡಿಕೆಗಳನ್ನಲ್ಲ. .
9. MGNREGA ಅನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಬೇಕು, ಉದ್ಯೋಗ ಖಾತ್ರಿಯನ್ನು ಕನಿಷ್ಟ 200 ದಿನಗಳ ವರೆಗೆ ಹೆಚ್ಚಿಸಬೇಕು. ಕೂಲಿಗಳನ್ನು ಕನಿಷ್ಟ ಎರಡು ಪಟ್ಟಾದರೂ ಮಾಡಬೇಕು.
10. ಇದೇ ರೀತಿಯಲ್ಲಿ ನಗರ ಉದ್ಯೋಗ ಖಾತರಿ ಕಾರ್ಯಕ್ರಮದ ಶಾಸನವನ್ನು ರಚಿಸಬೇಕು.
11. ನಮ್ಮ ಆರ್ಥಿಕ ಮತ್ತು ಸಾಮಾಜಿಕ ಮೂಲಸೌಕರ್ಯಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಬೇಕು, ಆಮೂಲಕ ಉದ್ಯೋಗಗಳನ್ನು ನಿರ್ಮಿಸಬೇಕು ಮತ್ತು ಆಂತರಿಕೆ ಬೇಡಿಕೆಗೆ ಉತ್ತೇಜನೆ ನೀಡಬೇಕು, ಸರಕಾರೀ ಉದ್ಯೋಗಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು.
12. ಶಿಕ್ಷಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಲಸಿಕೀಕರಣಕ್ಕೆ ಆದ್ಯತೆ ನೀಡಿ ಶಿಕ್ಷಣ ಸಂಸ್ಥೆಗಳನ್ನು ಬೇಗನೆ ಪುನಃ ತೆರೆಯುವುದನ್ನು ಖಚಿತಪಡಿಸಬೇಕು.
13. ಜನಗಳ ಮೇಲೆ ಗೂಢಚಾರಿಕೆಗಾಗಿ ಪೆಗಾಸ??? ಗೂಢಚರ್ಯೆ ತಂತ್ರಾಂಶದ ಬಳಕೆ ಕುರಿತು ತಕ್ಷಣವೇ ಸುಪ್ರೀಂ ಕೋರ್ಟ್ ಉಸ್ತುವಾರಿಯಲ್ಲಿ ನ್ಯಾಯಾಂಗ ತನಿಖೆಯನ್ನು ನಡೆಸಬೇಕು.
14. ರಫೇಲ್ ವ್ಯವಹಾರದ ಬಗ್ಗೆ – ಹಿಂದಿನ ಆರ್ಡರನ್ನು ರದ್ದುಗೊಳಿಸಿ ಮತ್ತು ಹೆಚ್ಚಿನ ವೆಚ್ಚದಲ್ಲಿ ಹೊಸ ಆರ್ಡರನ್ನು ನೀಡಿರುವ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು.
15. ಭೀಮಾ ಕೋರೆಗಾಂವ್ ಮತ್ತು ಸಿಎಎ ವಿರೋಧಿ ಪ್ರತಿಭಟನೆಗಳ ಪ್ರಕರಣಗಳಲ್ಲಿ ಕರಾಳ ಯುಎಪಿಎ ಅಡಿಯಲ್ಲಿ ಬಂಧಿಸಲ್ಪಟ್ಟವರು ಸೇರಿದಂತೆ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು.

ಕೇಂದ್ರ ಸಮಿತಿ ಕರೆ

ಮೇಲಿನ ಬೇಡಿಕೆಗಳ ಆಧಾರದ ಮೇಲೆ, ಕೇಂದ್ರ ಸಮಿತಿಯು ಸಾಂಕ್ರಾಮಿಕ ಮತ್ತು ಸ್ಥಳೀಯ ಲಾಕ್‌ಡೌನ್‌ಗಳ ಪರಿಸ್ಥಿತಿಗಳನ್ನು ಅವಲಂಬಿಸಿ ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯ ಸಮಿತಿಗಳು ಮತ್ತು ಎಲ್ಲಾ ಕೆಳ ಘಟಕಗಳಿಂದ ದೇಶಾದ್ಯಂತ ಪ್ರತಿಭಟನೆಗಳು ಮತ್ತು ಹೋರಾಟಗಳನ್ನು ಆಯೋಜಿಸಲು ಕರೆ ನೀಡುತ್ತದೆ. ರಾಜ್ಯ ಸಮಿತಿಗಳು ಈ ಪ್ರತಿಭಟನಾ ಕ್ರಮಗಳ ವಿವರಗಳನ್ನು ನಿರ್ಧರಿಸುತ್ತವೆ.

ಮೇಲಿನ ಬೇಡಿಕೆಗಳ ಮೇಲೆ ಈ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಇತರ ಎಲ್ಲ ವಿಭಾಗಗಳನ್ನು ಸೆಳೆಯಲು ಪ್ರಯತ್ನಗಳನ್ನು ಮಾಡಬೇಕು.

ಕ್ವಿಟ್ ಇಂಡಿಯಾ ದಿನಾಚರಣೆಯನ್ನು ರಾಷ್ಟ್ರವ್ಯಾಪಿಯಾಗಿ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ ನೀಡಿರುವ ಕರೆಗೆ ಸಿಪಿಐ (ಎಂ) ಈಗಾಗಲೇ ತನ್ನ ಬೆಂಬಲವನ್ನು ನೀಡಿದೆ.

ಸಮಾಜವಾದಿ ದೇಶಗಳಲ್ಲಿದ್ದ ಸಮಾನತೆ ಮತ್ತು ಅಭಾವ



ಗ್ರಾಹಕರ ಉದ್ದನೆಯ ಸರತಿ ಸಾಲುಗಳು ಅದಕ್ಷತೆಯ ಲಕ್ಷಣವಾಗಿರದೆ, ಸಮಾಜವಾದಿ ಸಮಾಜಗಳ ಸಮಾನತೆಯ ಉನ್ನತ ಸ್ವರೂಪದ ಪ್ರತಿಬಿಂಬವಾಗಿದ್ದವು. ಅದೇ ರೀತಿಯಲ್ಲಿ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸರಕು ಸಾಮಗ್ರಿಗಳ ಮುಕ್ತ ಲಭ್ಯತೆಯು ಆ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ಆದಾಯಗಳ ಅತಿರೇಕದ ಅಸಮಾನತೆಯ ಮೇಲೆ ನಿಂತಿದೆ. ಭಾರತದಂತಹ ಮೂರನೇ ಜಗತ್ತಿನ ದೇಶಗಳಲ್ಲಿ ನವಉದಾರವಾದೀ-ಪೂರ್ವ ಮತ್ತು ನವ-ಉದಾರವಾದೀ ಆಡಳಿತಗಳ ನಡುವಿನ ತೀಕ್ಷ್ಣ ವ್ಯತ್ಯಾಸವು ಕೂಡ ಸುಮಾರಾಗಿ ಇದಕ್ಕೆ ಹತ್ತಿರವೇ ಇದೆ. ಈ ನಿಟ್ಟಿನಲ್ಲಿ 1991ರ ಮೊದಲಿನ ವಿವಿಧ ಸರಕುಗಳ ಪಡಿತರ ಮತ್ತು ಈಗ, ಒಂದೆಡೆ ದುಡಿಯುವ ಜನರ ಕೈಯಲ್ಲಿ ಕೊಳ್ಳುವ ಶಕ್ತಿಯು ಕುಂದಿರುವುದು, ಇನ್ನೊಂದೆಡೆಯಲ್ಲಿ ಸೂಪರ್ ಮಾರ್ಕೆಟ್‌ಗಳಲ್ಲಿ ಹೇರಳ ಲಭ್ಯತೆ ಇದನ್ನೇ ಬಿಂಬಿಸುತ್ತವೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಬಂಡವಾಳಶಾಹಿ ದೇಶಗಳಿಗೆ ಹೋಲಿಸಿದರೆ, ಸಮಾಜವಾದಿ ವ್ಯವಸ್ಥೆಯು ಅಸಮರ್ಥವಾದದ್ದು. ಯಾವುದೇ ಬಂಡವಾಳಶಾಹಿ ದೇಶದಲ್ಲಿ ನೀವು ಒಂದು ಸೂಪರ್ ಮಾರ್ಕೆಟ್‌ಗೆ ಹೋಗಿ ಏನನ್ನು ಬೇಕಾದರೂ ತಕ್ಷಣವೇ ಕೊಳ್ಳಬಹುದು. ಆದರೆ, ಅದೇ ಸಮಾಜವಾದಿ ದೇಶಗಳಲ್ಲಿ – ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ – ಆಹಾರ ಪದಾರ್ಥವೇ ಇರಲಿ ಅಥವಾ ಇನ್ನಾವುದೇ ಸರಕು ಸಾಮಗ್ರಿಯೇ ಇರಲಿ, ಅವುಗಳನ್ನು ಕೊಳ್ಳಲು ಜನರು ಉದ್ದನೆಯ ಸರತಿ ಸಾಲುಗಳಲ್ಲಿ ನಿಲ್ಲುತ್ತಾರೆ ಎಂಬುದಾಗಿ ಸಮಾಜವಾದಿ ವ್ಯವಸ್ಥೆಯನ್ನು ಪಶ್ಚಿಮದ ದೇಶಗಳಲ್ಲಿ ಮಾತ್ರವಲ್ಲ, ಭಾರತದಲ್ಲಿಯೂ ಅಪಹಾಸ್ಯ ಮಾಡುತ್ತಿದ್ದುದನ್ನು ಜ್ಞಾಪಿಸಿಕೊಳ್ಳಬಹುದು.

ವಾಸ್ತವವಾಗಿ ಹೇಳುವುದಾದರೆ, ಗ್ರಾಹಕರ ಉದ್ದನೆಯ ಸರತಿ ಸಾಲುಗಳು ಅದಕ್ಷತೆಯ ಲಕ್ಷಣವಾಗಿರದೆ, ಸಮಾಜವಾದಿ ಸಮಾಜಗಳ ಸಮಾನತೆಯ ಉನ್ನತ ಸ್ವರೂಪದ ಪ್ರತಿಬಿಂಬವಾಗಿದ್ದವು. ಅದೇ ರೀತಿಯಲ್ಲಿ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸರಕು ಸಾಮಗ್ರಿಗಳ ಮುಕ್ತ ಲಭ್ಯತೆಯು ಆ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ಆದಾಯಗಳ ಅತಿರೇಕದ ಅಸಮಾನತೆಯ ಮೇಲೆ ನಿಂತಿದೆ. ಈ ಅಸಮಾನತೆಯ ಅಂಶವನ್ನು, ಆದಾಯಗಳ ಹಂಚಿಕೆಯನ್ನು ಹೊರತುಪಡಿಸಿ, ಮಿಕ್ಕೆಲ್ಲ ವಿಷಯಗಳಲ್ಲೂ ಸಮರೂಪಿಯಾಗಿರುವ ಅಂಶಗಳ ಉದಾಹರಣೆಯ (ಉದ್ದೇಶಪೂರ್ವಕ ಆಯ್ಕೆ) ಮೂಲಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ನಿರೂಪಿಸಬಹುದು.

'ಸ' (ಸಮಾಜವಾದಿ ಅರ್ಥವ್ಯವಸ್ಥೆಯ ಅಡಿಯಲ್ಲಿರುವಂತದ್ದು) ಮತ್ತು 'ಬಂ'(ಬಂಡವಾಳಶಾಹಿ ಅರ್ಥವ್ಯವಸ್ಥೆಯ ಅಡಿಯಲ್ಲಿ ಇರುವಂತದ್ದು) ಎಂಬ ಎರಡು ಅರ್ಥವ್ಯವಸ್ಥೆಗಳನ್ನು ಕಲ್ಪಿಸಿಕೊಳ್ಳೋಣ. ಪ್ರತಿಯೊಂದೂ, 20 ಯುನಿಟ್ ಹೂಡಿಕೆ ಮಾಡುತ್ತದೆ. ಪ್ರತಿಯೊಂದೂ 100 ಯೂನಿಟ್‌ಅನ್ನು ಉತ್ಪಾದಿಸುತ್ತದೆ. 'ಸ' ನಲ್ಲಿ ಮೇಲ್ತುದಿಯ 20% ಮಂದಿಯ (ಸಮಾಜವಾದಿ ಅಧಿಕಾರಿವರ್ಗವನ್ನು ಒಳಗೊಂಡಿರುವಂತದ್ದು)) ಉತ್ಪಾದನೆಯು, ಒಟ್ಟು ಉತ್ಪಾದನೆಯ 30%ದಷ್ಟು ಇರುತ್ತದೆ ಮತ್ತು ಕೆಳಗಿನ 80% ಮಂದಿಯ (ಕಾರ್ಮಿಕರನ್ನು ಒಳಗೊಂಡಿರುತ್ತದೆ) ಉತ್ಪಾದನೆಯು ಉಳಿದ 70% ಇರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ 'ಬಂ' ಅರ್ಥವ್ಯವಸ್ಥೆಯಲ್ಲಿ, ಮೇಲ್ತುದಿಯ 20% ಮಂದಿಯ (ಬಂಡವಾಳಗಾರರು ಮತ್ತು ಅಧಿಕಾರಿಗಳನ್ನು ಒಳಗೊಂಡಿರುವಂತದ್ದು) ಉತ್ಪಾದನೆಯು, ಒಟ್ಟು ಉತ್ಪಾದನೆಯ ಶೇ.60ರಷ್ಟಿರುತ್ತದೆ ಮತ್ತು ಉಳಿದ 80% ಮಂದಿಯ (ಕಾರ್ಮಿಕರನ್ನು ಒಳಗೊಂಡಿರುವಂತದ್ದು) ಉತ್ಪಾದನೆಯು 40% ಇರುತ್ತದೆ. ಈ ಎರಡೂ ಅರ್ಥವ್ಯವಸ್ಥೆಗಳಲ್ಲಿ, ಮೇಲ್ತುದಿಯ ಗುಂಪಿನ ಜನರು ತಮ್ಮ ಆದಾಯದ ಅರ್ಧದಷ್ಟನ್ನು ಉಪಭೋಗಕ್ಕಾಗಿ ಬಳಸಿಕೊಳ್ಳುತ್ತಾರೆ ಮತ್ತು ಎರಡೂ ವ್ಯವಸ್ಥೆಗಳಲ್ಲಿ ಕಾರ್ಮಿಕರು ಉಪಭೋಗಕ್ಕಾಗಿ ತಮ್ಮ ಇಡೀ ಆದಾಯವನ್ನು ಬಳಸಿಕೊಳ್ಳುತ್ತಾರೆ.

ಈಗ, 'ಸ' ಅರ್ಥವ್ಯವಸ್ಥೆಯು ತನ್ನ ಪೂರ್ಣ ಸಾಮರ್ಥ್ಯದ 100 ಯೂನಿಟ್‌ಅನ್ನು ಉತ್ಪಾದಿಸಿದರೆ, ಆಗ ಒಟ್ಟು ಬಳಕೆ ಬೇಡಿಕೆಯು 85 ಆಗಿರುತ್ತದೆ (ಮೇಲ್ತುದಿಯ 30ರ ಅರ್ಧದಷ್ಟು ಅಂದರೆ 15 + 70 ಕಾರ್ಮಿಕರದ್ದು); ಮತ್ತು, ಹೂಡಿಕೆಯ 20 ಯೂನಿಟ್‌ಅನ್ನೂ ಒಳಗೊಂಡಂತೆ ಒಟ್ಟು ಬೇಡಿಕೆಯು 105 ಯೂನಿಟ್ ಆಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, 'ಬಂ' ಅರ್ಥವ್ಯವಸ್ಥೆಯಲ್ಲಿ ಒಟ್ಟು ಬಳಕೆ ಬೇಡಿಕೆಯು 70 ಆಗಿರುತ್ತದೆ (ಮೇಲ್ತುದಿಯ 60ರ ಅರ್ಧದಷ್ಟು, ಅಂದರೆ 30 + 40 ಕಾರ್ಮಿಕರದ್ದು); ಮತ್ತು, ಹೂಡಿಕೆಯ 20 ಯೂನಿಟ್‌ಅನ್ನೂ ಒಳಗೊಂಡಂತೆ ಒಟ್ಟು ಬೇಡಿಕೆಯು 90 ಯೂನಿಟ್ ಆಗುತ್ತದೆ. ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಎರಡೂ ವ್ಯವಸ್ಥೆಗಳಲ್ಲಿ ಪೂರ್ಣ ಸಾಮರ್ಥ್ಯದ 100 ಯೂನಿಟನ್ನು ಉತ್ಪಾದಿಸಿದರೆ, ಆಗ 'ಸ' ಅರ್ಥವ್ಯವಸ್ಥೆಯಲ್ಲಿ 5 ಯೂನಿಟ್‌ನಷ್ಟು ಅಧಿಕ (ಅಂದರೆ, 105 ಯೂನಿಟ್) ಬೇಡಿಕೆ ಇರುತ್ತದೆ, ಮತ್ತು 'ಬಂ' ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯಲ್ಲಿ 5 ಯೂನಿಟ್‌ನಷ್ಟು ಕೊರತೆ (ಅಂದರೆ, 95 ಯೂನಿಟ್) ಇರುತ್ತದೆ.

ಹಾಗಾಗಿ, ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯ ಕೊರತೆಯಿಂದಾಗಿ ಪೂರ್ಣ ಸಾಮರ್ಥ್ಯ ಮಟ್ಟದ ಉತ್ಪಾದನೆ ಆಗುವುದೇ ಇಲ್ಲ. ಬದಲಾಗಿ, ಅದು ತನ್ನ ಪೂರ್ಣ ಉತ್ಪಾದನಾ ಸಾಮರ್ಥ್ಯದ (100ಯೂನಿಟ್) ಕೇವಲ 66 2/3 ಭಾಗವನ್ನು ಮಾತ್ರ ಉತ್ಪಾದಿಸುತ್ತದೆ. ಏಕೆಂದರೆ, ಈ ಉತ್ಪಾದನೆಯಲ್ಲಿ ಮತ್ತು ಅದೇ ಹಂಚಿಕೆಯ ವಿಧಾನದಲ್ಲಿ, ಬಂಡವಾಳಗಾರರು 40 ಮತ್ತು ಕಾರ್ಮಿಕರು 26 2/3 ಭಾಗವನ್ನು ಹೊಂದಿರುತ್ತಾರೆ. ಈ ಮಟ್ಟದ ಉತ್ಪಾದನೆಯಿಂದಾಗಿ ಒಟ್ಟು ಬಳಕೆಯು 46 2/3 ಆಗುತ್ತದೆ. ಇದು ಹೂಡಿಕೆಯ 20 ಯೂನಿಟ್‌ನೊಂದಿಗೆ ಉತ್ಪಾದಿಸಿದ ಒಟ್ಟು 66 2/3 ಕ್ಕೆ ನಿಖರವಾಗಿ ಸಮವಾಗಿರುತ್ತದೆ. ಆದ್ದರಿಂದ ನೈಜ ಉದ್ಯೋಗವು, ಪೂರ್ಣ ಸಾಮರ್ಥ್ಯದ ಮಟ್ಟದಲ್ಲಿ ಉತ್ಪಾದನೆ ಎಷ್ಟಿರುತ್ತಿತ್ತು ಎಂಬುದರ ಮೂರನೇ ಎರಡರಷ್ಟು ಮಾತ್ರ ಇರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಬೃಹತ್ ಮಟ್ಟದ ನಿರುದ್ಯೋಗ ಇರುತ್ತದೆ. ಈ ರೀತಿಯ ಅರ್ಥವ್ಯವಸ್ಥೆಯಲ್ಲಿ ಯಾವುದೇ ಕೊರತೆಯಾಗಲಿ ಅಥವಾ ಅಧಿಕ ಬೇಡಿಕೆಯಾಗಲಿ ಉದ್ಭವವಾಗುವ ಪ್ರಶ್ನೆಯೇ ಇಲ್ಲವಾದ್ದರಿಂದ, ಗ್ರಾಹಕರು ಯಾವುದೇ ಸೂಪರ್ ಮಾರ್ಕೆಟ್‌ಗೆ ಹೋಗಿ ತಮಗಿಷ್ಟವಾದ ಸರಕು ಸಾಮಗ್ರಿಗಳನ್ನು ಖರೀದಿಸಬಹುದು. ಹಾಗಾಗಿ, ಸರಕು ಸಾಮಗ್ರಿಗಳನ್ನು ಕೊಳ್ಳಲು ಸರತಿಯ ಸಾಲುಗಳ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಈ ಪರಿಸ್ಥಿತಿಗೆ ವ್ಯತಿರಿಕ್ತವಾಗಿ ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ, ಪೂರ್ಣ ಸಾಮರ್ಥ್ಯ ಮಟ್ಟದ ಉತ್ಪಾದನೆಯು 100 ಯೂನಿಟ್ ಇದ್ದು, ಆ 100 ಯೂನಿಟ್ ಉತ್ಪಾದನೆಯು 5 ಯೂನಿಟ್‌ನಷ್ಟು ಅಧಿಕ ಬೇಡಿಕೆಯನ್ನು ಉಂಟುಮಾಡುತ್ತದೆ. ಪ್ರಶ್ನೆಯೆಂದರೆ, ಅಂತಹ ಅರ್ಥವ್ಯವಸ್ಥೆಯು 5 ಯೂನಿಟ್ ಅಧಿಕ ಬೇಡಿಕೆಯನ್ನು ಹೇಗೆ ನಿಭಾಯಿಸುತ್ತದೆ? ಆ ವ್ಯವಸ್ಥೆಯು ಅದನ್ನು ನಿಭಾಯಿಸುವ ಸುಲಭ ಮಾರ್ಗವೆಂದರೆ, ಕೆಲವು ಗ್ರಾಹಕರ ನೈಜ ಆದಾಯವು 5ರಷ್ಟು ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡುವಷ್ಟು ಹಿಂಡಿಹಿಪ್ಪೆಯಾಗುವವರೆಗೂ ಬೆಲೆಗಳನ್ನು ಹೆಚ್ಚಲು ಬಿಡುವುದು. ಬಳಕೆಯ ಮಟ್ಟವನ್ನು ಕಾಪಾಡಿಕೊಳ್ಳುವ ಉದ್ದೇಶಕ್ಕಾಗಿ ಕೈಯಲ್ಲಿ ಕಡಿಮೆ ನಗದು ಹೊಂದಿರುವ ಕಾರ್ಮಿಕರನ್ನು ಹಿಂಡುವುದೇ ಸಾಮಾನ್ಯ. ಆಗ 5 ಯೂನಿಟ್ ಅಧಿಕ ಬೇಡಿಕೆಯನ್ನು ಕಾರ್ಮಿಕರ ವೆಚ್ಚದಲ್ಲಿ ಮಾಡಿದಂತಾಗುತ್ತದೆ. ಆದರೆ, ಈ ಪರಿಸ್ಥಿತಿಗೆ ಹೋಲಿಸಿದರೆ, ಪ್ರತಿಯೊಬ್ಬರ ಬಳಕೆಯನ್ನೂ ಸೂಕ್ತ ಅನುಪಾತದಲ್ಲಿ ಕಡಿತ ಮಾಡುವುದೇ ಒಂದು ಉತ್ತಮ ಮಾರ್ಗವಾಗುತ್ತದೆ. ಸಮಾಜವಾದಿ ಅರ್ಥವ್ಯವಸ್ಥೆಗಳು ಮಾಡಿದ್ದು ಇದನ್ನೇ. ಪಡಿತರವನ್ನು ಸ್ಥಾಪಿಸುವ ಮೂಲಕ ಹಳೆಯ ಮಟ್ಟದಲ್ಲೇ ಬೆಲೆಗಳನ್ನು ಕಾಯ್ದುಕೊಳ್ಳುವ ಏರ್ಪಾಟು ಮಾಡಿದವು. ಹಾಗಾಗಿ, 5 ಯೂನಿಟ್‌ನಷ್ಟು ಬೇಡಿಕೆಯ ಕಡಿತವನ್ನು ಸಮಾನವಾಗಿ ಹಂಚಲಾಯಿತು. ಈ ರೀತಿಯ ಪಡಿತರದಿಂದಾಗಿ ಜನರು ತಮ್ಮ ಖರೀದಿಗಾಗಿ ಸರದಿಯ ಸಾಲಿನಲ್ಲಿ ನಿಲ್ಲಬೇಕಾಯಿತು.

ಸಮಾಜವಾದಿ ಅರ್ಥವ್ಯವಸ್ಥೆಗಳಲ್ಲಿ ಕಾಣಬರುತ್ತಿದ್ದ ಸರತಿಯ ಸಾಲುಗಳು ಆ ವ್ಯವಸ್ಥೆಯ ಅಸಮರ್ಥತೆಗಳಿಂದ ಉಂಟಾದದ್ದಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಆದಾಯ ವಿತರಣೆಯಲ್ಲಿನ ಅಸಮಾನತೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ವ್ಯವಸ್ಥೆಯು ಕಾಳಜಿ ವಹಿಸಿದ್ದರಿಂದಾಗಿ. ಅಸಮಾನತೆಯನ್ನು ಕಡಿಮೆ ಮಾಡುವ ಉದ್ದೇಶವನ್ನು ಎರಡು ವಿಭಿನ್ನ ರೀತಿಗಳಲ್ಲಿ ಸಾಧಿಸಿತು: ಮೊದಲನೆಯದು, ವಿತರಣೆಯ ಮೂಲ ಮಟ್ಟವನ್ನು ತುಲನಾತ್ಮಕವಾಗಿ ಹೆಚ್ಚು ಸಮಾನವಾಗಿರಿಸುವ ಮೂಲಕ; ಎರಡನೆಯದು, ಉದ್ಭವಿಸಿದ ಅಧಿಕ ಬೇಡಿಕೆಯ ನಿವಾರಣೆಯು ಬೆಲೆ ಏರಿಕೆಯ ರೂಪವನ್ನು ಪಡೆಯದಂತೆ (ಹಾಗೆ ಪಡೆದರೆ ಅದು ತಿರೋಗಾಮಿ ಕ್ರಮವಾಗುತ್ತಿತ್ತು) ನಿರ್ದಿಷ್ಟಪಡಿಸಿದ ಬೆಲೆಗಳ ಪಡಿತರದ ರೂಪವನ್ನು ಪಡೆಯಿತು. ಈ ಪಡಿತರದ ಪರಿಣಾಮವಾಗಿ ಸರತಿಯ ಸಾಲುಗಳಿದ್ದವು.



ಸಮಾಜವಾದಿ ಅರ್ಥವ್ಯವಸ್ಥೆಗಳಲ್ಲಿ ಕಾಣಬರುತ್ತಿದ್ದ ಸರತಿಯ ಸಾಲುಗಳು ಆ ವ್ಯವಸ್ಥೆಯ ಅಸಮರ್ಥತೆಗಳಿಂದ ಉಂಟಾದದ್ದಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಆದಾಯ ವಿತರಣೆಯಲ್ಲಿನ ಅಸಮಾನತೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ವ್ಯವಸ್ಥೆಯ ಕಾಳಜಿ ವಹಿಸಿದ್ದರಿಂದಾಗಿ. ಅಸಮಾನತೆಯನ್ನು ಕಡಿಮೆ ಮಾಡುವ ಉದ್ದೇಶವನ್ನು ಎರಡು ವಿಭಿನ್ನ ರೀತಿಗಳಲ್ಲಿ ಸಾಧಿಸಿತು: ಮೊದಲನೆಯದು, ವಿತರಣೆಯ ಮೂಲ ಮಟ್ಟವನ್ನು ತುಲನಾತ್ಮಕವಾಗಿ ಹೆಚ್ಚು ಸಮಾನವಾಗಿರಿಸುವ ಮೂಲಕ; ಎರಡನೆಯದು, ಉದ್ಭವಿಸಿದ ಅಧಿಕ ಬೇಡಿಕೆಯ ನಿವಾರಣೆಯು ಬೆಲೆ ಏರಿಕೆಯ ರೂಪವನ್ನು ಪಡೆಯದಂತೆ (ಹಾಗೆ ಪಡೆದರೆ ಅದು ತಿರೋಗಾಮಿ ಕ್ರಮವಾಗುತ್ತಿತ್ತು) ನಿರ್ದಿಷ್ಟಪಡಿಸಿದ ಬೆಲೆಗಳ ಪಡಿತರದ ರೂಪವನ್ನು ಪಡೆಯಿತು. ಈ ಪಡಿತರದ ಪರಿಣಾಮವಾಗಿ ಸರತಿಯ ಸಾಲುಗಳಿದ್ದವು.

ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ ಇಂತಹ ಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಅನೇಕ ಸಮಸ್ಯೆಗಳು ತಲೆದೋರಿದವು. ಉದಾಹರಣೆಗೆ, ಕೆಲವು ವಿಶೇಷ ಸವಲತ್ತುಗಳನ್ನು ಹೊಂದಿದ್ದ ಅಧಿಕಾರಿಗಳು ಮತ್ತು ಪಕ್ಷದ ಕಾರ್ಯಕರ್ತರು ಕೆಲವು ಅಪರೂಪದ ವಸ್ತುಗಳನ್ನು/ಸೇವೆಗಳನ್ನು ಪಡೆಯುತ್ತಿದ್ದರು. "ಮೊದಲು ಬಂದವರಿಗೆ ಮೊದಲು ಸೇವೆ" ನಿಯಮವನ್ನು ಹಾಗೂ ಪ್ರತಿಯೊಬ್ಬರಿಗೂ ಸಮಾನ ಪಡಿತರದ ತತ್ವವನ್ನು ಉಲ್ಲಂಘಿಸುತ್ತಿದ್ದರು. ಆದರೂ, ಈ ಕೆಲವು ನ್ಯೂನತೆಗಳು ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ ಸರಕು ಸಾಮಗ್ರಿಗಳ ಕೊರತೆಯು ಆದಾಯದ ಹೆಚ್ಚು ಸಮತ್ವಪೂರ್ಣ ಹಂಚಿಕೆಯ ಪರಿಣಾಮವಾಗಿ ಕಂಡುಬಂದವು ಎಂಬ ಮೂಲಭೂತ ಅಂಶವನ್ನು ನಿರಾಕರಿಸಲಾರವು. ಅಂತೆಯೇ, ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಸರಕು ಸಾಮಗ್ರಿಗಳು ಹೇರಳವಾಗಿ ಕಂಡುಬರುವ ಒಂದು ಕಾರಣವೆಂದರೆ, ಈ ಸರಕುಗಳನ್ನು ಕೊಳ್ಳಲು ಅಪಾರ ಸಂಖ್ಯೆಯ ದುಡಿಯುವ ಜನರ ಕೈಯಲ್ಲಿ ಹಣವಿಲ್ಲದಿರುವುದು. ಪರಿಣಾಮವಾಗಿ, ನಿರುದ್ಯೋಗ ಸಮಸ್ಯೆಯು ಈ ವ್ಯವಸ್ಥೆಯನ್ನು ನಿರಂತರವಾಗಿ ಕಾಡುತ್ತಲೇ ಇರುತ್ತದೆ.

ತನ್ನ ದೇಶದಲ್ಲಿ ಅಸ್ತಿತ್ವದಲ್ಲಿದ್ದ ಸಮಾಜವಾದಿ ವ್ಯವಸ್ಥೆಯ ಟೀಕಾಕಾರರಾದ ಪ್ರಸಿದ್ಧ ಹಂಗೇರಿಯನ್ ಅರ್ಥಶಾಸ್ತ್ರಜ್ಞ ಯಾನೋಸ್ ಕೊರ್ನೈ ಹೀಗೆ ಹೇಳಿದ್ದರು: "ರೂಢ ಬಂಡವಾಳಶಾಹಿಯು ಬೇಡಿಕೆ-ನಿರ್ಬಂಧಿತವಾಗಿದೆ, ಆದರೆ ರೂಢ ಸಮಾಜವಾದವು ಸಂಪನ್ಮೂಲ-ನಿರ್ಬಂಧಿತವಾಗಿದೆ". ಅಂದರೆ, ಬಂಡವಾಳಶಾಹಿಯು ಲಭ್ಯವಿರುವ ಶ್ರಮಶಕ್ತಿಯೂ ಸೇರಿದಂತೆ ತನ್ನ ಎಲ್ಲಾ ಸಂಪನ್ಮೂಲಗಳನ್ನೂ ಸಂಪೂರ್ಣವಾಗಿ ಬಳಸಿಕೊಳ್ಳುತ್ತದೆ. ಈ ವಿದ್ಯಮಾನಕ್ಕೆ ಅವರು ನೀಡಿದ ಕಾರಣವೆಂದರೆ, ಸಮಾಜವಾದಿ ವ್ಯವಸ್ಥೆಯಲ್ಲಿ, ಸಂಸ್ಥೆಗಳಿಗೆ ಸರ್ಕಾರದ ಸಬ್ಸಿಡಿಗಳ ಭರವಸೆ ಇರುವುದರಿಂದ, ಅಂದರೆ "ಮೃದು-ಬಜೆಟ್ ನಿರ್ಬಂಧ"ವಿರುವುದರಿಂದ, ನಿರೀಕ್ಷಿತ ಪ್ರತಿಫಲದ ಬಗ್ಗೆ ತಲೆಕೆಡಿಸಿಕೊಳ್ಳದೆ ಅವರು ಯೋಜನೆಗಳಿಗೆ ಹೆಚ್ಚು ಹಣ ವ್ಯಯಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಂಸ್ಥೆಗಳು "ಕಠಿಣ ಬಜೆಟ್ ನಿರ್ಬಂಧ"ವನ್ನು ಎದುರಿಸುತ್ತವೆ. ಅಂದರೆ, ಹೂಡಿಕೆ ಮಾಡುವಾಗ ಅವರು ಬಿಡಿ ಕಾಸನ್ನೂ ಲೆಕ್ಕ ಮಾಡುತ್ತಾರೆ.

ಬಂಡವಾಳಶಾಹಿಯು ಬೇಡಿಕೆ-ನಿರ್ಬಂಧಿತ ಮತ್ತು ಸಮಾಜವಾದವು ಸಂಪನ್ಮೂಲ-ನಿರ್ಬಂಧಿತ ಎಂಬುದಕ್ಕೆ ಒಂದು ಅಧಿಕ ಮತ್ತು ಪ್ರಬಲ ಕಾರಣವಿದೆ. ಒತ್ತಿ ಹೇಳಬೇಕಾದ ಈ ಕಾರಣವು ಯಾವುದೆಂದರೆ, ಸಮಾಜವಾದದ ಅಡಿಯಲ್ಲಿ ಆದಾಯಗಳ ವಿತರಣೆಯಲ್ಲಿರುವ ಹೆಚ್ಚಿನ ಸಮಾನತೆ. ಇದನ್ನೇ ವಿಭಿನ್ನವಾಗಿ ಹೇಳುವುದಾದರೆ, ಯಾವುದೇ ಅರ್ಥವ್ಯವಸ್ಥೆಯಲ್ಲಿ (ವಿದೇಶಿ ವ್ಯಾಪಾರವನ್ನು ಗಣನೆಗೆ ತೆಗೆದುಕೊಳ್ಳದೆ) ಒಟ್ಟು ಬೇಡಿಕೆಯ ಮಟ್ಟವು ಎರಡು ಅಂಶಗಳನ್ನು ಒಳಗೊಂಡಿರುತ್ತದೆ. ಹೂಡಿಕೆಯ ಮಟ್ಟ ಮತ್ತು ಆದಾಯದ ಬಳಕೆಯ ಮಟ್ಟ. ಬಂಡವಾಳಶಾಹಿ ಮತ್ತು ಸಮಾಜವಾದದ ನಡುವಿನ ವ್ಯತ್ಯಾಸದ ಬಗ್ಗೆ ಕೊರ್ನೈ ನೀಡಿದ ವಿವರಣೆಯು ಮೊದಲ ಅಂಶವನ್ನು ಮಾತ್ರ ಪರಿಗಣಿಸಿದೆ. ಎರಡನೆಯದಕ್ಕೆ ಸಂಬಂಧಿಸಿದಂತೆ ಒಂದು ಪ್ರಮುಖ ವ್ಯತ್ಯಾಸವಿದೆ. ಸಮಾಜವಾದಿ ವ್ಯವಸ್ಥೆಯಲ್ಲಿ ಆದಾಯಗಳ ಪುಟ 14 ನೋಡಿ

ಸಮಾನತೆ ಮತ್ತು ಅಭಾವ

ಪುಟ 13 ರಿಂದ

ಹಂಚಿಕೆಯಲ್ಲಿ ಹೆಚ್ಚಿನ ಸಮಾನತೆ ಇರುವುದರಿಂದ ಸರಾಸರಿ ಬಳಕೆ–ಆದಾಯ ಅನುಪಾತವು ಹೆಚ್ಚು ಇರುತ್ತದೆ. ಆದ್ದರಿಂದ, ಬೇಡಿಕೆಯೂ ಹೆಚ್ಚಿನ ಮಟ್ಟದಲ್ಲೇ ಇರುತ್ತದೆ. ಸಮಾಜವಾದಿ ಅರ್ಥವ್ಯವಸ್ಥೆಯ ಈ ಪ್ರಮುಖ ಅಂಶವನ್ನೇ ಕೊರ್ನೈ ಬಿಟ್ಟುಬಿಟ್ಟಿದ್ದರು.

ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದಿ ವ್ಯವಸ್ಥೆಯು ಕುಸಿದಿರುವಾಗ, ಈಗ ಇದೆಲ್ಲವನ್ನೂ ಹೇಳುವುದರಲ್ಲಿ ಅರ್ಥವೇನಿದೆ? ಎಂದು ಕೇಳಬಹುದು. ಭಾಗಶಃ ಉತ್ತರವೆಂದರೆ, ಅವರ ಎಲ್ಲಾ ಇತಿ–ಮಿತಿಗಳ ಹೊರತಾಗಿಯೂ, ಸಮಾಜವಾದಿ ಅರ್ಥವ್ಯವಸ್ಥೆಗಳು ಪೂರ್ಣ ಉದ್ಯೋಗದ ಗುರಿಯನ್ನು ಸಾಧಿಸಿದ್ದವು. ಕಳೆದ ಇನ್ನೂರು ವರ್ಷಗಳಲ್ಲಿ ಈ ಸಾಧನೆಯನ್ನು ಯಾರೂ ಮಾಡಿರಲಿಲ್ಲ ಎಂಬುದನ್ನು ನಮಗೆ ನಾವೇ ಹೇಳಿಕೊಳ್ಳಬಹುದು. ಇದು ಹೆಮ್ಮೆಯ ವಿಷಯವೇ. ಏಕೆಂದರೆ, ಬಂಡವಾಳಶಾಹಿಯು ಸ್ವಭಾವತಃ ಪೂರ್ಣ ಉದ್ಯೋಗವನ್ನು ಸಾಧಿಸಲು ಸಾಧ್ಯವಿಲ್ಲ. ಆದರೆ, ಸಮಾಜವಾದಿ ವ್ಯವಸ್ಥೆಯು ಒಂದು ವಿಭಿನ್ನ ಚಲನಶೀಲತೆಯನ್ನು ಹೊಂದಿದ್ದರಿಂದಲೇ ಪೂರ್ಣ ಉದ್ಯೋಗದ ಗುರಿಯನ್ನು ಸಾಧಿಸುವ ಅವಕಾಶವನ್ನು ಮಾಡಿಕೊಟ್ಟಿತು. ಅಂತಹ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಉತ್ತರದ ಇನ್ನೊಂದು ಭಾಗವೆಂದರೆ, ಭಾರತದಂತಹ ಮೂರನೇ ಜಗತ್ತಿನ ದೇಶಗಳಲ್ಲಿ ನಿಯಂತ್ರಣ ನೀತಿಗಳ ಮತ್ತು ನವ–ಉದಾರ ಆಡಳಿತಗಳ ನಡುವಿನ ತೀಕ್ಷ್ಣ ವ್ಯತ್ಯಾಸವು ಬಂಡವಾಳಶಾಹಿ ಮತ್ತು ಸಮಾಜವಾದದ ನಡುವಿನ ವ್ಯತ್ಯಾಸಗಳಿಗೆ ಸುಮಾರಾಗಿ ಹತ್ತಿರವೇ. ಈ ದೇಶಗಳು ಪೂರ್ಣ ಉದ್ಯೋಗದಂತಹ ಏನನ್ನೂ ಸಾಧಿಸಲಿಲ್ಲ, ನಿಜ. ಆದರೆ, ನಿಯಂತ್ರಣ ನೀತಿಗಳ ಆಡಳಿತಗಳು ಆದಾಯ ವಿತರಣೆಯಲ್ಲಿ ಹೆಚ್ಚಿನ ಸಮಾನತೆಯನ್ನು ಸಾಧಿಸಿದ್ದವು. ಈ ಕಾರಣದಿಂದಾಗಿಯೇ ಈ ದೇಶಗಳು ಅಧಿಕ ಬೇಡಿಕೆಯ ಸಮಸ್ಯೆಗಳನ್ನು ಎದುರಿಸಿದವು ಮತ್ತು ವಿವಿಧ ಸರಕುಗಳ ಪಡಿತರವನ್ನು ಜಾರಿಮಾಡಿದವು. ಇದೇ ದೇಶಗಳು ನವ–ಉದಾರ ನೀತಿಗಳನ್ನು ಅಳವಡಿಸಿಕೊಂಡ ನಂತರ, ಆದಾಯಗಳ ಅಸಮಾನತೆಯಲ್ಲಿ ಭಾರಿ ಹೆಚ್ಚಳವನ್ನು ಕಂಡಿವೆ ಮತ್ತು ದುಡಿಯುವ ಜನರ ಕೈಯಲ್ಲಿ ಕೊಳ್ಳುವ ಶಕ್ತಿಯು ಕುಂದಿದೆ. ಹಾಗಾಗಿ, ಸರಕು ಸಾಮಗ್ರಿಗಳು ಸೂಪರ್ ಮಾರ್ಕೆಟ್‌ಗಳಲ್ಲಿ ಹೇರಳವಾಗಿ ಕಂಡುಬರುವ ಅಂಶವು ಒಂದು ಸಂಪೂರ್ಣ ತಪ್ಪು ಅಭಿಪ್ರಾಯವನ್ನು ಮೂಡಿಸುತ್ತದೆ.

ಉದಾಹರಣೆಗೆ, ಚಾನ್ಸಲ್ ಮತ್ತು ಪಿಕೆಟ್ಟಿ ಅವರ ಪ್ರಕಾರ, "ಉದಾರೀಕರಣ" ಆರಂಭಗೊಳ್ಳುವ ಮೊದಲು, 1982ರಲ್ಲಿ ರಾಷ್ಟ್ರೀಯ ಆದಾಯದಲ್ಲಿ ಶೇ.6ರಷ್ಟು ಪಾಲು ಹೊಂದಿದ್ದ ಜನಸಂಖ್ಯೆಯ ಮೇಲ್ತುದಿಯ ಶೇ. 1 ರಷ್ಟು ಮಂದಿಯು 2013ರ ವೇಳೆಗೆ ರಾಷ್ಟ್ರೀಯ ಆದಾಯದಲ್ಲಿ ತಮ್ಮ ಪಾಲನ್ನು ಶೇ. 22ಕ್ಕೆ ಏರಿಸಿಕೊಂಡಿದ್ದರು. ಇದು ಸುಮಾರು ಒಂದು ಶತಮಾನದಲ್ಲೇ ಅತಿ ಹೆಚ್ಚಿನ ಏರಿಕೆ. ಹಾಗಾಗಿ, ನವ–ಉದಾರವಾದಿ ಆಡಳಿತದಲ್ಲಿ ಹಣದುಬ್ಬರವು ಹೆಚ್ಚುವರಿ ಬೇಡಿಕೆಯಿಂದ ಉಂಟಾದದ್ದಲ್ಲ; ಬಂಡವಾಳಶಾಹಿಗಳ ಸಂಪತ್ತು ಅಥವಾ ಅವರ ಲಾಭಗಳ ಮೇಲೆ ತೆರಿಗೆ ವಿಧಿಸುವುದರ ಬದಲು ಸಾಮಾನ್ಯ ಬಳಕೆಯ ಸರಕುಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಸರ್ಕಾರವು ಹಣದುಬ್ಬರವನ್ನು ನಿರ್ವಹಿಸಿದೆ.

ಈ ಹಣದುಬ್ಬರವನ್ನೂ ಸಹ ವಿತ್ತೀಯ ಮಿತವ್ಯಯವನ್ನು ಹೇರುವ ಮೂಲಕ ನಿಯಂತ್ರಿಸುವ ಪ್ರಯತ್ನವು (ಹೆಚ್ಚುವರಿ ಬೇಡಿಕೆಯೇ ಅದಕ್ಕೆ ಕಾರಣ ಎಂಬಂತೆ), ಹಣದುಬ್ಬರವನ್ನು ಕಡಿಮೆ ಮಾಡದೆ ನಿರುದ್ಯೋಗ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ. ಭಾರತ ಸರ್ಕಾರವು ಈಗ ಅಂತಹ ಒಂದು ಬುದ್ಧಿಹೀನ ಪ್ರಕ್ರಿಯೆಯಲ್ಲಿ ತೊಡಗಿದೆ.

ಆಗಸ್ಟ್ 9: ಬೀದಿಗಿಳಿದ ಲಕ್ಷಾಂತರ ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು

ಟ ಪುಟ 2 ರಿಂದ

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಅಭಿನಂದಿಸಿದೆ.

ಅಗತ್ಯ ರಕ್ಷಣಾ ಸೇವೆಗಳ ಸುಗ್ರೀವಾಜ್ಞೆಯನ್ನು ಹಿಂದಕ್ಕೆ ಪಡೆಯಬೇಕು ಮತ್ತು ಐಎಲ್‌ಸಿಯ 43, 44 ಮತ್ತು 45ನೇ ಅಧಿವೇಶನಗಳ ನಿರ್ಣಯವನ್ನು ಜಾರಿಗೆ ತಂದು ಸ್ಕೀಮ್ ಕಾರ್ಯಕರ್ತರಿಗೆ ಕಾರ್ಮಿಕರ ಸ್ಥಾನಮಾನವನ್ನು ನೀಡಿ ಅವರು ಸಾಮಾಜಿಕ ಭದ್ರತೆಗಳಿಗೆ ಅರ್ಹರಾಗುವಂತೆ ಮಾಡಬೇಕು ಎಂದೂ ಈ ಕಾರ್ಯಾಚರಣೆಯಲ್ಲಿ ಮತ್ತೊಮ್ಮೆ ಆಗ್ರಹಿಸಲಾಯಿತು.

ಕಿಸಾನ್ ಸಂಸದ್‌ನಲ್ಲಿ ಮೋದಿ ಸರಕಾರದ ವಿರುದ್ಧ ಅವಿಶ್ವಾಸ ನಿರ್ಣಯ

ಆಗಸ್ಟ್ 9 ರಂದು ದಿಲ್ಲಿಯಲ್ಲಿ ರೈತರ ಪ್ರತಿನಿಧಿಗಳು ನಡೆಸುತ್ತಿರುವ 'ಕಿಸಾನ್ ಸಂಸದ್' 13 ದಿನಗಳ ಕಲಾಪಗಳ ನಂತರ ಮುಕ್ತಾಯಗೊಂಡಿತು. ಅಂದು ಮಹಿಳಾ ಅಧಿವೇಶನ ನಡೆಯಿತು.

ಇದರಲ್ಲಿ. ಮೋದಿ ಸರಕಾರದ ವಿರುದ್ಧ ಆಗಸ್ಟ್ 6ರಂದು ಮಂಡಿಸಿದ್ದ ಅವಿಶ್ವಾಸ ಠರಾವನ್ನು ಅಂಗೀಕರಿಸಲಾಯಿತು. ಅಧಿವೇಶನದಲ್ಲಿ 'ಕಾರ್ಪೊರೇಟ್ಸ್ ಖೇತೀ ಛೋಡೋ' ಮತ್ತು "ಮೋದಿ ಸರ್ಕಾರ್ ಗದ್ದೀ ಛೋಡೋ" ಘೋಷಣೆಗಳು ಕೇಳಬಂದವು. ಈ ಕಲಾಪಗಳಲ್ಲಿ ಸುಮಾರು 90 ಮಹಿಳೆಯರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಮೋದಿ ಸರಕಾರ ಜನಗಳ ವಿಶ್ವಾಸವನ್ನು ಕಳಕೊಂಡಿದೆ, ಆದ್ದರಿಂದ ಅದು ಅಧಿಕಾರದಿಂದ ಕೆಳಗಿಳಿಯಬೇಕು ಎಂದು ಅವರು ಆಗ್ರಹಿಸಿದರು.



ಈ ಮೊದಲು ಆಗಸ್ಟ್ 4 ಮತ್ತು 5 ರಂದು ಕನಿಷ್ಟ ಬೆಂಬಲ ಬೆಲೆಯನ್ನು ನಿರ್ಧರಿಸುವಲ್ಲಿ ಭಾರತ ಸರಕಾರ ಉತ್ಪಾದನಾ ವೆಚ್ಚವನ್ನು ಲೆಕ್ಕ ಹಾಕುವಲ್ಲಿ ಅನ್ಯಾಯ ಮಾಡುತ್ತಿದೆ ಎಂದು ಚರ್ಚೆ ನಡೆಯಿತು.

ಮೋದಿ ಸರಕಾರ ಮೋಸದಿಂದ ವೆಚ್ಚಕ್ಕೆ ಸಂಬಂಧಪಟ್ಟಂತೆ ತಪ್ಪು ಪರಿಕಲ್ಪನೆಗಳನ್ನು ಬಳಸುತ್ತಿದೆ, ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಉಲ್ಲಂಘಿಸುತ್ತಿದೆ ಎಂದು ಆಪಾದಿಸಲಾಯಿತು.

ವೆಚ್ಚ ಲೆಕ್ಕಾಚಾರ, ಎಂಎಸ್‌ಪಿ ಸೂತ್ರ ಮತ್ತು ಎಂಎಸ್‌ಪಿಯ ಕಾರ್ಯಾನ್ವಯ ಕುರಿತಂತೆ ಆಗುತ್ತಿರುವ ಅನ್ಯಾಯಗಳನ್ನು ಸಂಪೂರ್ಣವಾಗಿ ಸರಿಪಡಿಸುವ ಒಂದು ಮಸೂದೆಯನ್ನು ತಕ್ಷಣವೇ ಸಂಸತ್ತಿನಲ್ಲಿ ಮಂಡಿಸುವಂತೆ ಸರಕಾರಕ್ಕೆ ನಿರ್ದೇಶನ ನೀಡುವ ಒಂದು ಠರಾವನ್ನು ಅಂಗೀಕರಿಸಲಾಯಿತು.

ಆಗಸ್ಟ್ 6 ರಂದು ವಿವಿಧ ಪ್ರತಿಪಕ್ಷಗಳ ಮುಖಂಡರು ಭೇಟಿ ನೀಡಿ ಕಿಸಾನ್ ಸಂಸದ್‌ನ ಕಲಾಪಗಳನ್ನು ವೀಕ್ಷಿಸಿದರು. ನಂತರ ಮಾಧ್ಯಮಗಳೊಡನೆ ಮಾತಾಡುತ್ತ ಅವರೆಲ್ಲರೂ ರೈತರ ಬೇಡಿಕೆಗಳಿಗೆ ಬೆಂಬಲ ಸೂಚಿಸಿದರು.

ಕಿಸಾನ್ ಸಂಸದ್ ನ ಸಭಾಧ್ಯಕ್ಷರು ಇದಕ್ಕಾಗಿ ಅವರಿಗೆ ಧನ್ಯವಾದ ಹೇಳಿದರು. ಅದೇ ವೇಳೆಯಲ್ಲಿ ಬಿಜೆಡಿ, ಟಿಆರ್‌ಎಸ್, ವೈಎಸ್‌ಆರ್‌ಪಿ, ಎಐಎಡಿಎಂಕೆ, ಟಿಡಿಪಿ ಮತ್ತು ಜೆಡಿ(ಯು) ಸಂಸತ್ತಿನಲ್ಲಿ ವಿವಿಧ ಮಸೂದೆಗಳ ಮೇಲೆ ಚರ್ಚೆಗಳಲ್ಲಿ ರೈತರ ವಿರುದ್ಧ ಭಾಗವಹಿಸುತ್ತಿವೆ ಎಂದು ಗಮನಿಸುತ್ತ, ಜನ–ವಿರೋಧಿ ನಿಲುವುಗಳನ್ನು ತಗೊಳ್ಳಬೇಡಿ ಎಂದು ಅವುಗಳನ್ನು ಎಚ್ಚರಿಸಲಾಯಿತು.

ಸಂಸತ್ ಅಧಿವೇಶನವನ್ನು ಹಳಿ ತಪ್ಪಿಸಿದ ಸರಕಾರ

ಪುಟ 2 ರಿಂದ

ಪೆಗಾಸಸ್ ಬೇಹುಗಾರಿಕೆ ಮತ್ತು ರೈತ ಕೃಷಿ ಕಾನೂನು ಬಗೆಗಿನ ಮತ್ತು ಅತೀ ಪ್ರಮುಖ ವಿಷಯಗಳನ್ನು ಮುಂದಿಟ್ಟು ಚರ್ಚೆಗೆ ಪ್ರತಿಪಕ್ಷಗಳ ಆಗ್ರಹವನ್ನು ಸರಕಾರ ನಿರ್ಲಕ್ಷಿಸಿದ್ದರಿಂದಾಗಿ ಉಂಟಾದ ಗದ್ದಲದ ವಾತಾವರಣವನ್ನು ಸರಕಾರ ತನ್ನ ಪ್ರಯೋಜನಕಕ್ಕೆ ಬಳಸಿಕೊಂಡಂತೆ ಕಾಣುತ್ತದೆ.

ಆಗಸ್ಟ್ 11 ರಂದು ಇದ್ದಕ್ಕಿದ್ದ ಹಾಗೇ ಲೋಕಸಭೆ ಮತ್ತು ರಾಜ್ಯಸಭೆಯನ್ನು ಮುಂದೂಡಲಾಯಿತು. ರಾಜ್ಯಸಭೆಯಲ್ಲಿ ಅಂದು ನಡೆದದ್ದು ಅತ್ಯಂತ ಆಘಾತಕಾರಿ ಮತ್ತು ಅಭೂತಪೂರ್ವ, ಸದನದ ಪ್ರತಿಷ್ಠೆಗೆ ಮತ್ತು ಸದಸ್ಯರಿಗೆ ಮಾಡಿರುವ ಅವಮಾನ ಎಂದು ಪ್ರತಿಪಕ್ಷಗಳ ಮುಖಂಡರ ಹೇಳಿಕೆ ವರ್ಣಿಸಿದೆ. ಸರಕಾರದ ದರ್ಪದ ವರ್ತನೆಯ ವಿರುದ್ಧ ಪ್ರತಿಭಟಿಸುತ್ತಿದ್ದ ಸದಸ್ಯರ ಮೇಲೆ, ಮಹಿಳಾ ಸದಸ್ಯರ ಮೇಲೂ, ದೈಹಿಕ ಹಲ್ಲೆ ನಡೆಸಲು ಸಂಸತ್ತಿನ ಭದ್ರತೆಯ ಭಾಗವಾಗಿಲ್ಲದ ಹೊರಗಿನ ವ್ಯಕ್ತಿಗಳನ್ನು ತರಲಾಯಿತು ಎಂದಿರುವ ಪ್ರತಿಪಕ್ಷಗಳು ಇದು ಸರಕಾರದ ಸರ್ವಾಧಿಕಾರಶಾಹಿ ವರ್ತನೆ ಮತ್ತು ಪ್ರಜಾಪ್ರಭುತ್ವ–ವಿರೋಧಿ ನಿಲುವು ಎಂದು ಬಲವಾಗಿ ಖಂಡಿಸಿವೆ.

ರಾಜ್ಯಸಭೆಯಲ್ಲಿ ಪ್ರತಿಪಕ್ಷದ ಮುಖಂಡರಾಗಿರುವ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ಯ ಶರದ್ ಪವಾರ್, ಕಾಂಗ್ರೆಸ್‌ನ ಆನಂದ ಶರ್ಮ, ಮತ್ತು ಅಧಿರ್ ರಂಜನ್ ಚೌಧುರಿ, ಸಿಪಿಯ(ಎಂ)ನ ಎಳಮಾರಂ ಕರೀಮ್, ಸಿಪಿಐನ ಬಿನೊಯ್ ವಿಶ್ವಂ, ಆರ್‌ಎಸ್‌ಪಿಯ ಎನ್.ಕೆ. ಪೇಮಚಂದ್ರನ್ ಮತ್ತಿತರರು ಈ ಹೇಳಿಕೆಗೆ ಸಹಿ ಹಾಕಿದ್ದಾರೆ.

ಸಂಸದ್ ಸದಸ್ಯರ ಪ್ರತಿಭಟನಾ ಮೆರವಣಿಗೆಯಲ್ಲಿ ರಾಹುಲ್ ಗಾಂಧಿ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮಲ್ಲಿಕಾರ್ಜುನ ಖರ್ಗೆ, ಶಿವಸೇನೆಯ ಸಂಜಯ್ ರಾವತ್ ಮತ್ತು ಡಿಎಂಕೆ, ಸಮಾಜವಾದಿ ಪಕ್ಷ, ಆರ್‌ಜೆಡಿ, ಸಿಪಿಐ(ಎಂ) ಮತ್ತು ಸಿಪಿಐ, ಮುಸ್ಲಿಂ ಲೀಗ್, ಆರ್‌ಎಸ್‌ಪಿ ಮತ್ತು ಕೇರಳ ಕಾಂಗ್ರೆಸ್‌ನ ನಾಯಕರು ಭಾಗಿಯಾಗಿದ್ದರು. ಮೆರವಣಿಗೆಯ ನಂತರ ನಾಯಕರೆಲ್ಲರೂ ಸೇರಿ ರಾಜ್ಯಸಭಾಧ್ಯಕ್ಷ ವೆಂಕಯ್ಯ ನಾಯ್ಡು ನಿವಾಸಕ್ಕೆ ತೆರಳಿ ದೂರು ಸಲ್ಲಿಸಿದರು.



ಉದ್ಯೋಗ ಮತ್ತು ವೇತನ-ಹಿಂಜರಿತದ ಜಾಗತಿಕ ಬಿಕ್ಕಟ್ಟು

ಪುಟ 11 ರಿಂದ

ಸಹಾಯಿಕೆಯರ ಜಂಟಿ ಅಖಿಲ ಭಾರತ ಮುಷ್ಕರಕ್ಕೆ ಮುಂದಾಗಲು ನಿರ್ಧರಿಸಿತು

ಪೆಟ್ರೋಲ್ ಉತ್ಪನ್ನಗಳ ಬೆಲೆ ಏರಿಕೆ ನಿರಂಕುಶ ವಂಚನೆಗಳ ಹಿಂದಿರುವ ಸತ್ಯ

ಹಣದುಬ್ಬರ ಹೆಚ್ಚಿರುವ ಸಮಯದಲ್ಲಿ, ಅಕ್ಕಿ, ಗೋಧಿ, ಸಕ್ಕರೆ, ಖಾದ್ಯ ತೈಲಗಳು, ಬೇಳೆಕಾಳುಗಳು, ತರಕಾರಿಗಳು ಮುಂತಾದವುಗಳ ಬೆಲೆಗಳು ಪಟ್ಟುಬಿಡದೆ ಹೆಚ್ಚುತ್ತಿದ್ದುದು ಆಹಾರಧಾನ್ಯಗಳ 17 ರಷ್ಟು ಹೆಚ್ಚಿನ ಹಣದುಬ್ಬರ ದರದಲ್ಲಿ ಪ್ರತಿಫಲಿಸುತ್ತಿದ್ದಾಗ, ಭಾರತ ಸರ್ಕಾರ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮತ್ತು ಸೀಮೆಎಣ್ಣೆಯ ಬೆಲೆಯನ್ನು ಹೆಚ್ಚಿಸುವ ಮೂಲಕ ಜನರ ಮೇಲೆ ಕ್ರೂರವಾಗಿ ಪ್ರಹಾರ ಮಾಡಿತು. ಇದು ಅಗತ್ಯ ವಸ್ತುಗಳ ಬೆಲೆಯನ್ನು ಮತ್ತಷ್ಟು ಹೆಚ್ಚಿಸುವ ಅನಿಯಂತ್ರಿತ ಹಣದುಬ್ಬರ ಪರಿಸ್ಥಿತಿ ಮತ್ತು ಆಹಾರ ಭದ್ರತೆಯ ಸನ್ನಿಹಿತ ಬಿಕ್ಕಟ್ಟಿನಲ್ಲಿಯೇ, ಎಲ್ಲಾ ಕಾರ್ಮಿಕ ಸಂಘಗಳು ಇತರ ವಿಷಯಗಳ ಜೊತೆಗೆ, ಜನರಿಗೆ ಆಹಾರ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದವು.

1. ಆಹಾರವು ಸಾರ್ವತ್ರಿಕ ಹಕ್ಕಾಗಿರಬೇಕು, ಬಿ.ಪಿ.ಎಲ್. ಕುಟುಂಬಗಳಿಗೆ ಮಾತ್ರ ಗುರಿಯಾಗಬಾರದು;
2. ಪ್ರತಿಯೊಂದು ಪ್ರತ್ಯೇಕ ಕುಟುಂಬಕ್ಕೆ ಕನಿಷ್ಠ 35 ಕೆಜಿ ಆಹಾರ ಧಾನ್ಯವನ್ನು ಖಾತರಿಪಡಿಸಬೇಕು;
3. ಆಹಾರ ಧಾನ್ಯಗಳ ಬೆಲೆಯನ್ನು ಕಿಲೋಗೆ 2 ರೂಪಾಯಿಗೆ ನಿಗದಿಪಡಿಸಬೇಕು. ಆಯ್ಕೆಯು ರಾಗಿಗಳನ್ನು (ಒರಟಾದ ಧಾನ್ಯಗಳು) ಒಳಗೊಂಡಿರಬೇಕು, ಇದು ಭಾರತದ ಅನೇಕ ಭಾಗಗಳಲ್ಲಿ ಪ್ರಧಾನ ಆಹಾರವಾಗಿದೆ ಮತ್ತು ಹೆಚ್ಚು ಪೌಷ್ಟಿಕವಾಗಿದೆ;
4. ಶಾಲಾಪೂರ್ವ ಮತ್ತು ಶಾಲೆಗೆ ಹೋಗುವ ಮಕ್ಕಳಿಗೆ ಮಧ್ಯಾಹ್ನದ ಊಟ ಮತ್ತು ಐಸಿಡಿಎಸ್ ಹಂಚಿಕೆಗೆ ಕಾನೂನು ಖಾತರಿಯ ಮೂಲಕ ಆಹಾರ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ನಿಬಂಧನೆಗಳನ್ನು ಹೊಂದಿರಬೇಕು;
5. ಹಲವಾರು ರಾಜ್ಯ ಸರ್ಕಾರಗಳು ಮಾಡುತ್ತಿರುವಂತೆ ನಿಯಂತ್ರಿತ ಬೆಲೆಯಲ್ಲಿ ಸಾರ್ವಜನಿಕ ವಿತರಣೆಗೆ ಅಗತ್ಯವಾದ ಸರಕುಗಳ ಶ್ರೇಣಿಯನ್ನು ಸೇರ್ಪಡೆಗೊಳಿಸುವುದನ್ನು ಇದು ಖಚಿತಪಡಿಸಿಕೊಳ್ಳಬೇಕು.

ಆದ್ದರಿಂದ ಇಂತಹ ಜನ ವಿರೋಧಿ ನೀತಿಗಳ ವಿರುದ್ಧ ಜನರನ್ನು ಸಂಘಟಿಸುವುದು ಮಾತ್ರವಲ್ಲದೆ ನವ–ಉದಾರವಾದಿ ಅರ್ಥಶಾಸ್ತ್ರದ ಬೌದ್ಧಿಕ ಕಣ್ಕಟ್ಟುಗಳ ವಂಚನೆಯನ್ನು ಬಯಲುಗೊಳಸುವುದು ಸಹ ಮುಖ್ಯವಾಗಿದೆ. 7 ಸೆಪ್ಟೆಂಬರ್ 2010 ಎಲ್ಲಾ ಕಾರ್ಮಿಕ ಸಂಘಗಳು ಕರೆ ನೀಡಿದ ದೇಶವ್ಯಾಪಿ ಐಕ್ಯ ಮುಷ್ಕರವು ಆ ದಿಕ್ಕಿನತ್ತ ಒಂದು ಹೆಜ್ಜೆಯಾಗಿತ್ತು.

ಅಮಿತ್ ಷಾ ಏಕೆ ಮೌನವಾಗಿದ್ದಾರೆ?

ಪುಟ 9 ರಿಂದ

ನಿವಾಸಿಗಳು ನಡೆಸಿದ ಪ್ರತಿಭಟನೆ ಮತ್ತು ಮಾಧ್ಯಮದ ಆಗಮನದಿಂದಾಗಿ ಅಂತಿಮವಾಗಿ ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ ಇದುವರೆಗೂ ತಪ್ಪಿತಸ್ಥ ಪೊಲೀಸ್ ಸಿಬ್ಬಂದಿಯ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ.

ರಕ್ಷಣಾ ಇಲಾಖೆಯ ಸಿಬ್ಬಂದಿ ವಾಸವಾಗಿರುವ ಅತ್ಯಂತ ಸುಭದ್ರವಾಗಿರುವ ದೆಹಲಿ ಕಂಟೋನ್ಮೆಂಟ್‌ನ ಪಕ್ಕದಲ್ಲೇ ಇರುವ ಹಳ್ಳಿಯಂತಹ ಕಾಲೋನಿ ಅದು. ಈ ಎರಡು ಪ್ರಪಂಚಗಳು, ಭೌಗೋಳಿಕವಾಗಿ ಕೇವಲ ಒಂದು ಕಿಲೋಮೀಟರ್ ಅಂತರದಲ್ಲಿವೆ, ಆದರೆ ನಿಜಜೀವನದಲ್ಲಿ ಬಡತನ ಮತ್ತು ಜಾತಿಯಿಂದ ಸೃಷ್ಟಿಯಾದ ದೂರದಿಂದ ಬೇರ್ಪಟ್ಟಿವೆ. ಇದು ಆ ಮಗು ವಾಸವಿದ್ದ ವಾಸ್ತವಿಕ ಜಗತ್ತು. ಭಾರತ, ಅದರಲ್ಲಿಯೂ ನಿರ್ದಿಷ್ಟವಾಗಿ ದೆಹಲಿಯಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಇಂತಹ ಹೀನಾಯ ಕೃತ್ಯಗಳನ್ನು ಮಾಡುತ್ತಿರುವ ಅಪರಾಧಿಗಳು ಸಮಾಜದ ಪ್ರತಿಯೊಂದು ಸಾಮಾಜಿಕ ಗುಂಪುಗಳಲ್ಲಿ ಮತ್ತು ಸಮುದಾಯಗಳಲ್ಲಿ ಇದ್ದಾರೆ. ಆದರೆ ಒಂದು ಬಡ-ದಲಿತ ಕುಟುಂಬದಿಂದ ಬಂದಂತಹ ಮಗುವಿಗೆ ಎಲ್ಲಕ್ಕಿಂತ ಹೆಚ್ಚು ಕುತ್ತು.

ಇತ್ತೀಚಿಗೆ, ಪರಿಶಿಷ್ಟ ಜಾತಿ/ಬುಡಕಟ್ಟುಗಳ ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಅಪರಾಧಗಳ ಕುರಿತು ಗೃಹ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ದಲಿತ ಮಹಿಳೆಯರ ಮತ್ತು ಮಕ್ಕಳ ಮೇಲಿನ ಅಪರಾಧಗಳಲ್ಲಿ ಶೇಕಡ 15.5 ರಷ್ಟು (2017–2019) ಹೆಚ್ಚಳವಾಗಿದೆ ಎಂದು ವರದಿಯು ಹೇಳುತ್ತದೆ. ಸಮಿತಿಯ ವರದಿಯು ಎನ್.ಸಿ.ಆರ್.ಬಿ. ದತ್ತಾಂಶವನ್ನು ಉಲ್ಲೇಖಿಸಿದ್ದು, ಅದರ ಪ್ರಕಾರ ಪರಿಶಿಷ್ಟ ಜಾತಿ/ಬುಡಕಟ್ಟುಗಳ ಹುಡುಗಿಯರು ಮತ್ತು ಮಹಿಳೆಯರ ಮೇಲಿನ ಎಲ್ಲಾ ರೀತಿಯ ದೌರ್ಜನ್ಯ ಪ್ರಕರಣಗಳಲ್ಲಿ, ವಿಶೇಷ ನ್ಯಾಯಾಲಯಗಳಲ್ಲಿ ಬಾಕಿ ಇರುವ ದಲಿತ ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳ ಪ್ರಕರಣಗಳ ದರವು ಅಧಿಕವಾಗಿದೆ. ಅತ್ಯಾಚಾರದ ಪ್ರಕರಣಗಳನ್ನು ನೋಡಿದರೆ, ಅದು ಶೇಕಡಾ 88.9 ರಷ್ಟಿದೆ. ಸ್ಥಾಯಿ ಸಮಿತಿಯ ಪ್ರಕಾರ, ಪರಿಶಿಷ್ಟ ಜಾತಿ/ಬುಡಕಟ್ಟುಗಳ ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳಲ್ಲಿ ಈ ದೊಡ್ಡ ಹೆಚ್ಚಳವು "ಅಸ್ತಿತ್ವದಲ್ಲಿರುವ ಕಾನೂನುಗಳ ಕಳಪೆ ಅನುಷ್ಠಾನ ಮತ್ತು ಕಾನೂನು ಜಾರಿ ಸಂಸ್ಥೆಗಳ ನಿರಾಸಕ್ತಿಯ ವರ್ತನೆಯಿಂದಾಗಿ ... ಮೇಲಾಗಿ, ಖುಲಾಸೆಯ ಹೆಚ್ಚಿನ ದರವು ಇಂತಹ ಅಪರಾಧಗಳನ್ನು ಎಸಗುತ್ತಲೇ ಇರಲು ಪ್ರಬಲ ಮತ್ತು ಬಲಿಷ್ಟ ಸಮುದಾಯಗಳಿಗೆ ಪ್ರೇರೇಪಣೆ ನೀಡುತ್ತದೆ ಮತ್ತು ಅವರ ವಿಶ್ವಾಸವನ್ನು ಉತ್ತೇಜಿಸುತ್ತದೆ" ಎಂದು ವರದಿ ಹೇಳುತ್ತದೆ.

ಈ ನಿರ್ದಿಷ್ಟ ಪ್ರಕರಣದಲ್ಲಿ, ಪರಿಶಿಷ್ಟ ಜಾತಿ/ಬುಡಕಟ್ಟುಗಳ ಕಾಯ್ದೆಯಡಿ ಅಥವಾ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವನ್ನು ತಡೆಯುವ ಕಾಯ್ದೆಯಡಿ ಆರೋಪಗಳನ್ನು ದಾಖಲಿಸಲು ಪೊಲೀಸರು ನಿರಾಕರಿಸಿದ್ದಾರೆ ಎಂದು ನಮಗೆ ತಿಳಿಸಲಾಯಿತು. ಇಷ್ಟಲ್ಲದೇ ಕುಟುಂಬಕ್ಕೆ ಎಫ್.ಐ.ಆರ್. ಪ್ರತಿಯನ್ನು ನೀಡಲೂ ಸಹ ನಿರಾಕರಿಸಿದರು. ಮಗುವಿನ ದೇಹದ ಅವಶೇಷಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಆದರೆ ಅವಶೇಷಗಳ ಸ್ಥಿತಿಯನ್ನು ನೋಡಿದರೆ, ಫಲಿತಾಂಶ ಏನಿರಬಹುದೆಂದು ಊಹಿಸಬಹುದಾಗಿದೆ. ಅತ್ಯಾಚಾರದ ಆರೋಪವನ್ನು ಸ್ಪಷ್ಟವಾಗಿ ಸಾಬೀತುಪಡಿಸಲು ಸಾಧ್ಯವಿಲ್ಲ. ಶಂಕಿತರನ್ನು ವಿಚಾರಣೆಗೆ ಒಳಪಡಿಸುವ ಮೂಲಕ ಸತ್ಯವನ್ನು ಕಂಡುಹಿಡಿಯಲು ಪೊಲೀಸರು ಬದ್ಧರಾಗಿರದ ಹೊರತು, ನ್ಯಾಯ ಸಿಗುವುದಿಲ್ಲ. ಈಗಾಗಲೇ ಪೊಲೀಸರು ಆರೋಪಿಯ ಪರವಾಗಿ ಸಾರ್ವಜನಿಕ ಹೇಳಿಕೆಗಳನ್ನು ನೀಡಿದ್ದಾರೆ.

ಇದು ಹಾಥ್ರಸ್ ಪ್ರಕರಣದ ಮರು-ಪ್ರದರ್ಶನದಂತಿದೆ. ಹಾಥ್ರಸ್‌ನಲ್ಲಿ ಆಡಳಿತವು ಬಹಿರಂಗವಾಗಿಯೇ ಮೇಲ್ಜಾತಿಯ ಆರೋಪಿಗಳ ರಕ್ಷಣೆಗೆ ನಿಂತಿತ್ತು ಎಂಬುದು ತಿಳಿದ ಸಂಗತಿ. ಪರಸ್ಪರ ಸಮ್ಮತಿಯ ಸಂಬಂಧಗಳಿದ್ದವು, "ಮರ್ಯಾದಾ ಹತ್ಯೆ" ಮುಂತಾದ 19 ವರ್ಷದ ಹುಡುಗಿ ಮತ್ತು ಆಕೆಯ ಕುಟುಂಬಕ್ಕೆ ಕಳಂಕ ಹಚ್ಚುವ ಆಕ್ಷೇಪಾರ್ಹ ಕಥೆಗಳನ್ನು ಹರಿ ಬಿಡಲಾಯಿತು. ಹಾಥ್ರಸ್‌ನಲ್ಲಿಯೂ, ಹೆಣವನ್ನು ಬಲವಂತವಾಗಿ ಸುಡಲಾಯಿತು ಮತ್ತು ಕುಟುಂಬವು ಒಂದು "ರಾಜಿ" ಗೆ ಬರಲು ಭಾರೀ ಒತ್ತಡವನ್ನು ಹೇರಲಾಯಿತು. ಹೈಕೋರ್ಟ್‌ನ ಮಧ್ಯಪ್ರವೇಶ ಮಾತ್ರವೇ ಸ್ವಲ್ಪ ಸಮಾಧಾನ ತಂದಿದೆ. ದೆಹಲಿಯ ಭೀಕರ ಅಪರಾಧದ ಸಂದರ್ಭ ಮತ್ತು ಸನ್ನಿವೇಶಗಳು ಭಿನ್ನವಾಗಿವೆ. ಆದರೆ ಎರಡರಲ್ಲಿಯೂ ಇರುವ ಸಮಾನ ಅಂಶ ಎಂದರೆ ಅಪರಾಧಿಗಳ ಪರವಾಗಿ ಮತ್ತು ಸಂತ್ರಸ್ತೆಯ ಮತ್ತು ಆಕೆಯ ಕುಟುಂಬದ ಘನತೆ ಮತ್ತು ಹಕ್ಕುಗಳನ್ನು ನಿರ್ಮೂಲನೆ ಮಾಡಲು ಪೊಲೀಸರು ಯಾವುದೇ ದಂಡನೆಯ ಭಯವಿಲ್ಲದೆ ವರ್ತಿಸುತ್ತಿದ್ದಾರೆ ಎಂಬುದು.

ಇಲ್ಲಿ ದೆಹಲಿಯಲ್ಲಿ, ಪೊಲೀಸರು ನೇರವಾಗಿ ಗೃಹ ಸಚಿವಾಲಯದ ಅಡಿಯಲ್ಲಿದ್ದಾರೆ. ಅದೇಕೆ ಶ್ರೀ ಅಮಿತ್ ಷಾ ಮೌನವಾಗಿದ್ದಾರೆ? ಮಗು ಮತ್ತು ಆಕೆಯ ಪೋಷಕರ ಬಗ್ಗೆ ಒಂದೇ ಒಂದು ಅನುಕಂಪದ ಮಾತನ್ನು ನಾವು ಕೇಳಿದ್ದೇವೆಯೇ? ಮಗುವಿನ ಬಲವಂತದ ದಹನಕ್ರಿಯೆಯನ್ನು ಖಂಡಿಸುವ ಒಂದೇ ಒಂದು ಮಾತನ್ನು ನಾವು ಕೇಳಿದ್ದೇವೆಯೇ? ಸಂತ್ರಸ್ತ ಕುಟುಂಬಕ್ಕೆ ಕಿರುಕುಳ ನೀಡಿದ ಮತ್ತು ಕಾನೂನುಬಾಹಿರವಾಗಿ ಬಂಧನದಲ್ಲಿಟ್ಟ ಪೊಲೀಸ್ ಸಿಬ್ಬಂದಿ ವಿರುದ್ಧ ಏಕೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ? ಜನರು ಪ್ರತಿಭಟನೆ ಮಾಡುತ್ತಿರುವುದು ಈ ಇಬ್ಬಂದಿತನದ ವಿರುದ್ಧ.

ಮಗುವಿನ ತಾಯಿ ನ್ಯಾಯಕ್ಕಾಗಿ ಕಾಯುತ್ತಿದ್ದಾಳೆ.



ಹಾಥ್ರಸ್ ಪ್ರಕರಣದ ಮರುಪ್ರದರ್ಶನ –ಅಲ್ಲಿಯೂ, ಹೆಣವನ್ನು ಬಲವಂತವಾಗಿ ಸುಡಲಾಯಿತು ಮತ್ತು ಕುಟುಂಬವು ಒಂದು "ರಾಜಿ" ಗೆ ಬರಲು ಭಾರೀ ಒತ್ತಡವನ್ನು ಹೇರಲಾಯಿತು. ಹೈಕೋರ್ಟ್‌ನ ಮಧ್ಯಪ್ರವೇಶ ಮಾತ್ರವೇ ಸ್ವಲ್ಪ ಸಮಾಧಾನ ತಂದಿದೆ.

ಬೊಮ್ಮಾಯಿ ಅವರೇ! 'ಕಮಲಾಭಿಮುಖಿ'ಯಾಗಬೇಡಿ, 'ಅಭಿವೃದ್ಧಿಮುಖಿ'ಯಾಗಿ!..........

ಪುಟ 6 ರಿಂದ

ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಆದ್ಯತೆಯಾಗಬೇಕು. ಕೃಷಿ ಎಂದರೆ ಅಣೆಕಟ್ಟೆಗಳು, ರಾಸಾಯಿನಿಕ ಗೊಬ್ಬರ, ಕಬ್ಬು-ಬತ್ತ ಬೆಳೆಯುವುದು ಮಾತ್ರವಲ್ಲ. ಇಲ್ಲಿ ಹೈನುಗಾರಿಕೆಯಿದೆ, ಜಾನುವಾರು ಆರ್ಥಿಕತೆಯಿದೆ, ಕೃಷಿ ಅರಣ್ಯಗಾರಿಕೆಯಿದೆ, ಜಾನುವಾರು-ಕುರಿ-ಕೋಳಿ ಸಾಕಣಿಕೆಯಿದೆ, ಮೀನುಗಾರಿಕೆಯಿದೆ(ಉದಾ: 2020–21ರ ಕರ್ನಾಟಕದ ಒಟ್ಟು ರಾಜ್ಯ ಆಂತರಿಕ ಉತ್ಪನ್ನದಲ್ಲಿ(ಜಿಎಸ್‌ಡಿಪಿ:ರೂ1494598 ಲಕ್ಷ ಕೋಟಿ) ಮೀನುಗಾರಿಕೆ ಕಾಣಿಕೆ ರೂ. 5827 ಕೋಟಿ(ಶೇ.0.39), ಅರಣ್ಯಗಾರಿಕೆ-ದಿಮ್ಮಿ ಆರ್ಥಿಕತೆ ಕೊಡುಗೆ ರೂ. 9929 ಕೋಟಿ(ಶೇ. 0.66). ಇವುಗಳಿಗೆ ಹೋಲಿಸಿದರೆ ಪರಿಸರಕ್ಕೆ ವಿಷವುಣಿಸುವ, ಜನರ ಆರೋಗಕ್ಕೆ ಕಡುಮಾರಕವಾದ ಗಣಿ-ಕಲ್ಲು ಗಣಿಗಾರಿಕೆಯ ಕೊಡುಗೆ ರೂ. 7827 ಕೋಟಿ(ಶೇ. 0.52). ಹಾಗಾದರೆ ಯಾವುದಕ್ಕೆ ಆದ್ಯತೆ ನೀಡಬೇಕು? ಗಣಿಗಾರಿಕೆಯನ್ನು, ಅದರಲ್ಲೂ ಖಾಸಗಿ ಗಣಿಗಾರಿಕೆಯನ್ನು ನಿಲ್ಲಿಸಿದರೆ ಕರ್ನಾಟಕದ ಅಭಿವೃದ್ಧಿಗೆ ಯಾವ ಧಕ್ಕೆಯೂ ಉಂಟಾಗುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಮೀನುಗಾರಿಕೆ, ಅರಣ್ಯಗಾರಿಕೆ, ಜಾನುವಾರು ಆರ್ಥಿಕತೆಗಳು ಉದ್ಯೋಗ-ಸಾಂದ್ರ, ಪರಿಸರ-ಸ್ನೇಹಿ, ಮಹಿಳಾಪರ ಚಟುವಟಿಕೆಗಳಾಗಿವೆ. ನಮ್ಮದು ಒಣ ಭೂಮಿ ಪ್ರಧಾನ ಕೃಷಿಯಾಗಿದೆ. ಇದನ್ನು ಅವಲಂಬಿಸಿರುವವರು ಅತಿಸಣ್ಣ-ಸಣ್ಣ ರೈತರಾಗಿದ್ದಾರೆ, ಇವರೆಲ್ಲರೂ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ. ನೀರಾವರಿ, ಅಣೆಕಟ್ಟೆ, ನದಿಗಳ ಜೋಡಣೆ ಮುಂತಾದವು ಉಳ್ಳವರ ಹಿತಾಸಕ್ತಿಗಳನ್ನು ಕಾಪಿಡುವ ಬಂಡವಾಳ-ಸಾಂದ್ರ ಚಟುವಟಿಕೆಗಳಾಗಿವೆ. ನೀರಾವರಿಗೆ 2020–21ರ ಬಜೆಟ್ಟಿನಲ್ಲಿ ನೀಡಿರುವ ಅನುದಾನ ರೂ 16000 ಕೋಟಿಗಿಂತ ಅಧಿಕ. ಒಟ್ಟು ಬಜೆಟ್ಟಿನಲ್ಲಿ ಇದರ ಪ್ರಮಾಣ ಶೇ. 7. ಪ್ರಜ್ಞಾಪೂರ್ವಕವಾಗಿ ಒಣಭೂಮಿ ಕೃಷಿಗೆ ಹೆಚ್ಚಿನ ಬಂಡವಾಳ ವಿನಿಯೋಗಿಸುವ ಅಗತ್ಯವಿದೆ.

ಯು.ಎನ್.ಡಿ.ಪಿ.ಯು 1990 ರಿಂದ ಪ್ರಕಟಿಸುತ್ತಿರುವ ಮಾನವ ಅಭಿವೃದ್ಧಿ ವರದಿಗಳಲ್ಲಿ 'ವರಮಾನವೇ ಜನರ ಬದುಕಿನ ಒಟ್ಟು ಮೊತ್ತವಲ್ಲ' ಎಂಬುದನ್ನು ಸಾರುತ್ತಾ ಬರಲಾಗಿದೆ. ಅಭಿವೃದ್ಧಿಯಲ್ಲಿ ಆರೋಗ್ಯ, ಶಿಕ್ಷಣ, ಆಹಾರ ಭದ್ರತೆ, ಲಿಂಗ ಸಮಾನತೆ, ಉದ್ಯೋಗಗಳನ್ನು 'ಹಕ್ಕಿ'ನ ಸಂಗತಿಯನ್ನಾಗಿ ನೋಡುವ ಅಗತ್ಯವಿದೆ. ಏಕೆಂದರೆ ಅಭಿವೃದ್ಧಿಯು ಹಂಗಿನ, ದತ್ತಿ-ದಾನದ ಸಂಗತಿಯಲ್ಲ. ಪರಿವಾರ ಅರ್ಥಶಾಸ್ತ್ರದಲ್ಲಿ ಅಭಿವೃದ್ಧಿಯನ್ನು ಸೈದ್ಧಾಂತಿಕವಾಗಿಯೇ ದಾನ-ದತ್ತಿಯನ್ನಾಗಿ ಪರಿಗಣಿಸಲಾಗಿದೆ. ಇಲ್ಲಿ ಚಾತುರ್ವರ್ಣ ಪ್ರಣಾಳಿಕೆಯನ್ನು ಪುನರ್ ಪ್ರತಿಷ್ಠಾಪಿಸುವ ಹುನ್ನಾರವಿದೆ. ಬೊಮ್ಮಾಯಿಯವರು ಇದನ್ನು ಮೀರಿ ನಿಲ್ಲಬೇಕಾಗಿದೆ. ಬಸವ-ಕನಕ-ನಾಲ್ವಡಿ-ಅಂಬೇಡ್ಕರ್ ಪ್ರಣೀತ ಅಭಿವೃದ್ಧಿ ಪ್ರಣಾಳಿಕೆಯನ್ನು ಅನುಸರಿಸುವುದರಿಂದ ಮಾತ್ರ ನಾಡಿನ ದಲಿತರಿಗೆ, ಆದಿವಾಸಿಗಳಿಗೆ, ಹಿಂದುಳಿದ ವರ್ಗಗಳಿಗೆ, ಮಹಿಳೆಯರಿಗೆ ಸಾಮಾಜಿಕ ನ್ಯಾಯ ದೊರೆಯುತ್ತದೆ. ಪರಿವಾರ ಅರ್ಥಶಾಸ್ತ್ರವು ಪ್ರತಿಪಾದಿಸುವ 'ಅಖಂಡ' ಆರ್ಥಿಕ ನೀತಿಯಿಂದ ಅನಾದಿ ಕಾಲದಿಂದ ಹರಿದುಕೊಂಡು ಬರುತ್ತಿರುವ ಚಾತುರ್ವರ್ಣ ಪ್ರಣೀತ ಅಸಮಾನತೆಯನ್ನು, ತಾರತಮ್ಯಗಳನ್ನು ತೊಡೆದು ಹಾಕುವುದು ಸಾಧ್ಯವಿಲ್ಲ. ಅಮರ್ತ್ಯ ಸೇನ್ ಮತ್ತೆ ಮತ್ತೆ ಹೇಳುತ್ತಿರುವಂತೆ ಅಭಿವೃದ್ಧಿ ಎನ್ನುವುದು ಜನರ ಬದುಕಿನ ಸಮೃದ್ಧಿಗೆ ಸಂಬಂಧಿಸಿದ ಪ್ರಕ್ರಿಯೆಯೇ ವಿನಾ ಅದು ಆರ್ಥಿಕತೆಯ ಸಮೃದ್ಧತೆಯ ಸಂಗತಿಯಲ್ಲ. ಶಿಕ್ಷಣ(ಪ್ರಾಥಮಿಕ), ಆರೋಗ್ಯ(ಪ್ರಾಥಮಿಕ), ಆಹಾರ ಭದ್ರತೆ(ಹಸಿವು ನಿವಾರಣೆ), ಮನರೇಗಾ(ಎಂ.ಜಿ.ಎನ್.ಅರ್.ಈ.ಜಿ,ಎ) ರೀತಿಯ ಉದ್ಯೋಗದ ಹಕ್ಕಿನ ಕಾರ್ಯಕ್ರಮಗಳನ್ನು ತಾವು ಬಲಪಡಿಸಬೇಕಾಗಿದೆ.

ವೆಲ್ಥ್ ಕ್ರಿಯೇಟರ್ಸ್ ಯಾರು?

ಚೌಕಿದಾರ್ ನಿರ್ದೇಶಿತ ಖಾಸಗೀಕರಣ-ಕಾರ್ಪೊರೇಟೀಕರಣ ಪ್ರಣೀತ ಆರ್ಥಿಕ ನೀತಿಯು ಮೂಲತಃ ಕಾರ್ಮಿಕ ವಿರೋಧಿ, ಉದ್ಯಮಪತಿ-ಸ್ನೇಹಿಯಾಗಿರುವುದರಿಂದ ಇದನ್ನು ತಾವು ಕಸದಬುಟ್ಟಿಗೆ ಎಸೆಯುವುದು ಅಭಿವೃದ್ಧಿಯ ದೃಷ್ಟಿಯಿಂದ ಬಹಳ ಒಳ್ಳೆಯದು. 'ಸಮಾನತೆ-ಹಕ್ಕುಗಳು-ಸಾಮಾಜಿಕ ನ್ಯಾಯ' ಮೌಲ್ಯಗಳನ್ನು ಒಳಗೊಂಡ ಅಭಿವೃದ್ದಿ ಪ್ರಣಾಳಿಕೆಯು ಇಂದು ಕರ್ನಾಟಕಕ್ಕೆ ಅಗತ್ಯವಾಗಿದೆ. ಚಾತುರ್ವರ್ಣ ಪ್ರಣೀತ ಆರ್ಥಿಕ ನೀತಿಯಲ್ಲಿ ಮಹಿಳೆಯರಿಗೆ ಅವಕಾಶವೇ ಇಲ್ಲ. ಪುನರಪಿ ಪುನರಪಿ ಆರ್‌ಎಸ್‌ಎಸ್ ಮುಖ್ಯಸ್ಥರು ಮಹಿಳೆಯರ ಕಾರ್ಯಕ್ಷೇತ್ರವೇನಿದ್ದರೂ 'ಮನೆ-ಗಂಡ-ಮಕ್ಕಳು' ಎಂದು ಬೋಧಿಸುತ್ತಿದ್ದಾರೆ. ಇದಕ್ಕೆ ತಾವು ಯಾವ ಕಾರಣಕ್ಕೂ ಮರುಳಾಗಬಾರದು. ಲಿಂಗ ಸಮಾನತೆಯು ಸ್ಮಾರ್ಟ್ ಎಕನಾಮಿಕ್ಸ್ ಎಂದು 2012ರಲ್ಲಿಯೇ ವಿಶ್ವಬ್ಯಾಂಕ್ ಘೋಷಿಸಿದೆ. ನಮ್ಮ ಆರ್ಥಿಕತೆಯಲ್ಲಿ ಕಾರ್ಮಿಕರು, ರೈತಾಪಿಗಳು, ದಲಿತರು, ಆದಿವಾಸಿಗಳು ಮತ್ತು ಮಹಿಳೆಯರು ಅಭಿವೃದ್ಧಿಯ, ವೆಲ್ಥ್ ಕ್ರಿಯೇಶನ್ನಿನ ಮೂಲ ದ್ರವ್ಯವಾಗಿದ್ದಾರೆ. ಒಕ್ಕೂಟ ಸರ್ಕಾರ ಹೇಳುತ್ತಿರುವಂತೆ ಬಿಲಿಯನ್ನರುಗಳು-ಮಿಲಿಯನ್ನರುಗಳು ವೆಲ್ಥ್ ಕ್ರಿಯೇಟರ್ಸ್ ಅಲ್ಲ. ಇಲ್ಲಿರುವ 'ಕುಳಿತುಣ್ಣುವ ಸಂಸ್ಕೃತಿ ಮತ್ತು ದುಡಿದುಣ್ಣುವ ಸಂಸ್ಕೃತಿ'ಗಳ ನಡುವಿನ ಭಿನ್ನತೆಯನ್ನು ಅರ್ಥ ಮಾಡಿಕೊಳ್ಳಬೇಕು. ಅಭಿವೃದ್ಧಿಯು ಪೌರೋಹಿತ್ಯದ, ಯಜ್ಞ-ಯಾಗ, ಹೋಮ-ಹವನದ ಜಗತ್ತಿಗೆ ಸಂಬಂಧಿಸಿದ ಸಂಗತಿಯಲ್ಲ. ಅಭಿವೃದ್ಧಿಯ ಆರಾಧನೆ ಮಾಡಬೇಕಾದ ಪ್ರಧಾನಮಂತ್ರಿ ಯಜ್ಞ ಕುಂಡದ ಮುಂದೆ ಕೂತು ಅದಕ್ಕೆ ತುಪ್ಪ-ಅನ್ನ-ವಸ್ತ್ರ ಸುರಿಯುತ್ತಿದ್ದರೆ ಅಲ್ಲಿ ವೆಲ್ಥ್ ಕ್ರಿಯೇಶನ್ ನಡೆಯುವುದಿಲ್ಲ. ಅದೊಂದು ವೆಲ್ಥ್ ಡಿಸ್ಟ್ರಕ್ಷನ್ ಕಾರ್ಯವಾಗಿದೆ.

ಒಟ್ಟಾರೆ ಇಂದು ತಮ್ಮ ನೇತೃತ್ವದಲ್ಲಿ ಕರ್ನಾಟಕ ಅಭಿವೃದ್ಧಿ ಪ್ರಣಾಳಿಕೆ ಎನ್ನುವುದು ರೂಪುಗೊಳ್ಳಲಿ. ರಾಘವೇಂದ್ರ ಮಠದ ಬೃಂದಾವನದ ಬಳಿ ಬಜೆಟ್ಟಿನ ಪ್ರತಿಯನ್ನಿಟ್ಟು ಪೂಜಿಸುವುದು, ಅಣ್ಣಮ್ಮನ ದೇವಾಲಯಕ್ಕೆ ಹೋಗಿ ಸರ್ಕಾರವನ್ನು ರಕ್ಷಿಸಲು ಪ್ರಾರ್ಥಿಸುವುದು ಮುಂತಾದವುಗಳನ್ನು ಅಪ್ಪಿತಪ್ಪಿಯೂ ಅನುಸರಿಸಬೇಡಿ. ಅವೆಲ್ಲ ಜನರ ವೈಯುಕ್ತಿಕ ಆಚರಣೆಗೆಯ ಸಂಗತಿಗಳು. ಕುಂಕುಮ ಧರಿಸಿಕೊಂಡು, ಸಿಲ್ಕಿನ ಶಾಲು ಹೊದ್ದುಕೊಂಡು ದೇಶದ ತುಂಬಾ ದೇವಾಲಯಗಳನ್ನು ಸುತ್ತುವುದು ತಾವು ಮಾಡಬೇಡಿ. ಬಸವ ಪ್ರಣೀತ ಕಾಯಕ ಸಂಸ್ಕೃತಿಯ ಪರಂಪರೆಗೆ ತಾವು ಸೇರಿದವರು. 'ನೀರ ಕಂಡಲ್ಲಿ ಮುಳುಗುವ, ಮರನ ಕಂಡಲ್ಲಿ ಸುತ್ತುವ' ಸಂಸ್ಕೃತಿಯನ್ನು ವಚನಕಾರರು 'ಮೌಢ್ಯ' ಎಂದು ಸಾರಿದ್ದಾರೆ. ರಾಜ್ಯದ ಮೂಲೆ ಮೂಲೆಗಳಲ್ಲಿನ ಗ್ರಾಮಗಳಿಗೆ ಭೇಟಿ ಕೊಡುವಂತೆ ತಮ್ಮ ಮಂತ್ರಿಮಂಡಲದ ಸಚಿವರಿಗೆ ಮನದಟ್ಟು ಮಾಡಿಕೊಡಿ. 'ಬೆಂಗಳೂರೇ ಕರ್ನಾಟಕ' ಎನ್ನುವಂತಾಗಿರುವುದನ್ನು ಸರಿಪಡಿಸಲು ಪ್ರಯತ್ನಿಸಿ. ಬೆಂಗಳೂರು ಮೂಲದ ಅನೇಕ ಮಂತ್ರಿಗಳಿಗೆ ನಮ್ಮ ರಾಜ್ಯದಲ್ಲಿ ಎಷ್ಟು ಹಳ್ಳಿಗಳಿವೆ, ನದಿಗಳಿವೆ, ತಾಲ್ಲೂಕುಗಳಿವೆ ಎಂಬುದು ತಿಳಿದಿದೆ ಎಂಬುದರ ಬಗ್ಗೆ ನಮಗೆ ನಮ್ಮದೇ ಆದ ಅನುಮಾನಗಳಿವೆ. ಬೆಂಗಳೂರಿನ ಆರಾಧನೆಯನ್ನು ತಾವು ಕೊನೆಗೊಳಿಸಿ. ಇದೂ ಕೂಡ ಅಭಿವೃದ್ಧಿ ಪ್ರಣಾಳಿಕೆಯ ಒಂದು ಸೂತ್ರವಾಗಲಿ.

JANASHAKTHI KANNADA VARA PATRIKE August 16-22, 2021 Price: Rs. 10/- Date of Publication: 13 August 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21


ಬಳ್ಳಾರಿ


ಬೆಂಗಳೂರು

ಐತಿಹಾಸಿಕ 'ಕ್ವಿಟ್ ಇಂಡಿಯಾ' ಚಳವಳಿ ನೆನಪಿನಲ್ಲಿ ಕಾರ್ಮಿಕರು–ರೈತರು–ಕೃಷಿಕೂಲಿಕಾರರ ಜಂಟಿ ಪ್ರತಿಭಟನಾ ಧರಣಿ


ಮಂಗಳೂರು


ಚಿಕ್ಕಬಳ್ಳಾಪುರ


ಕೋಲಾರ


ಮಂಡ್ಯ


ಉಡುಪಿ


ಕಲಬುರಗಿ


ಕೊಪ್ಪಳ


ಹಾಸನ


ಧಾರವಾಡ


ಉತ್ತರ ಕನ್ನಡ


ಬೆಳಗಾವಿ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**